
## ಶ್ರೀ ಲಕ್ಷ್ಮೀ ವೇಂಕಟೇಶ ಪ್ರಸನ್ನ



## ಧನ್ಯವಾದಗಳು

ಈ ಗ್ರಂಥ ಪ್ರಕಟವಾಗಲು ಧನ ಸಹಾಯವನ್ನು ಒದಗಿಸಿದ ದೇವಾಧಿದೇವ ಅನಂತ ಕಲ್ಯಾಣ ಗುಣಪರಿಪೂರ್ಣ ದೋಷದೂರ ಶ್ರೀಲಕ್ಷ್ಮೀವಂಕಟೇಶ್ವರ ದೇವರಿಗೆ ಅನಂತಾನಂತ ವಂದನೆಗಳು. ಟಿ.ಟಿ.ದೇವಸ್ಥಾನಮ್ ಆಡಳಿತ ಅಧಿಕಾರಿಗಳಿಗೆ ನಮ್ಮ ಹೃತ್ಪೂರ್ವಕ ಧನ್ಯವಾದಗಳು.

ಗುರುಕೃಪಾ ಪ್ರಕಾಶನ.

॥ ಹರಿಃ ಓಂ ॥

ಶ್ರೀಮತ್ಸತ್ಯಪರಾಕ್ರಮೋವಿಜಯತೇ

---

## ಕೃತಜ್ಞತಾಪೂರ್ವಕ ವಂದನೆಗಳು

ಶ್ರೀ ಶ್ರೀನಿವಾಸಾಚಾರ್ಯ ವಾಯಿಕರ್
ಶ್ರೀ ಕೃಷ್ಣಾಚಾರ್ಯ ವಾಯಿಕರ್
ಶ್ರೀ ವಾಸುದೇವಾಚಾರ್ಯ ಯಾಲಮೇಲಿ

---

# ಮುನ್ನುಡಿ - ೧

## ಶ್ರೀ ಪ್ರಜ್ಞಾನ ನಿಧಿ ತೀರ್ಥ ಶ್ರೀಪಾದಂಗಳವರು

ಶ್ರೀ ಶ್ರೀ ಪಾದರಾಜವಿದ್ಯಾಪೀಠ
ಶ್ರೀ ರಾಘವೇಂದ್ರ ಸ್ವಾಮಿ ಮಠ
ಮುಳಬಾಗಿಲು.

## ಆಶೀರ್ವಚನ

ಭಾರತೀಯ ಆಧ್ಯಾತ್ಮಿಕ ವೈಚಾರಿಕ ವಾಙ್ಮಯದಲ್ಲಿ ಶ್ರುತಿ ಸ್ಮೃತಿಗಳ ಸ್ಥಾನವು ಅತ್ಯಂತ ಮಹತ್ವವಾದದ್ದು. ಅನಾದಿಕಾಲದಿಂದಲೂ ಅನೇಕ ವಿಧವಾದ ಸೂತ್ರಗಳು ಭಾರತೀಯ ತತ್ವದರ್ಶನ ಸಾಗರದಲ್ಲಿ ಅಲೆ ಅಲೆಯಾಗಿ ಬಂದಿರುವುದನ್ನು ನಾವು ಕಂಡಿದ್ದೇವೆ. ಧರ್ಮಾಧರ್ಮ ಮಾರ್ಗಗಳಂತಹ ವಿಶಿಷ್ಟ ವಿಷಯಗಳನ್ನು ವಿವರಿಸಿ ಹೊರಟ ಪ್ರಾಚೀನ ಧರ್ಮಗೃಹ್ಯಸೂತ್ರಗಳಿವೆ.

ಧರ್ಮಯೆಂದರೇನು? ಈ ಪ್ರಶ್ನೆಗೆ ಎರಡು ವಿಧವಾದ ಉತ್ತರವಿದೆ. "ವೇದ ಪ್ರಣಿಹಿತೋಧರ್ಮಃ..ಅಧರ್ಮಃ...ತದ್ವಿಪರ್ಯಯಃ

ವೇದಗಳಲ್ಲಿ ವಿಹಿತವಾದದ್ದು ಧರ್ಮ ನಿಷಿದ್ಧವಾದದ್ದು ಅಧರ್ಮ. ಧಾರಕತ್ವಾತ್‌ಧರ್ಮೋಭಗವಾನ್... ಇದು ಮುಖ್ಯವಾದದ್ದು. ಪರಮಾತ್ಮನನ್ನು ಸದಾಸ್ಮರಿಸುವುದು ಮುಖ್ಯ ವಿಹಿತವಾದ ಧರ್ಮ. ಅವನನ್ನು ಮರಿಯುವುದೇ ಅಧರ್ಮ, ಹೆಚ್ಚಿನ ಪಾಪ.

ಇದನ್ನೇ "ಸ್ಮರ್ತವ್ಯಃ ಸತತಂ ವಿಷ್ಣುಃ ವಿಸ್ಮರ್ತವ್ಯೋ ನಜಾತುಜಿತ್ ಸರ್ವೇವಿಧಿನಿಷೇಧಾಸ್ಯುಃ ಏತಯೋರೇವ ಕಿಂಕರಾಃ ।

ಇದನ್ನು ನಾವು ರಕ್ಷಿಸಿದರೆ ಭಗವಂತನು ನಮ್ಮನ್ನೂ ರಕ್ಷಿಸುವನು ಕಣ್ಣಿಗೆ ಕಾಣುವ ಈ ಜಗತ್ತು ಸತ್ಯವಾದದ್ದು. ಜಗತ್ತಿಗೆ ಜನ್ಮಸ್ಥಿತಿಸಂಹಾರ ನಿಯಮನಜ್ಞಾನಾಜ್ಞಾನ ಬಂಧಮೋಕ್ಷವನ್ನು ಕರಣಿಸುವ ಕರುಣಾಸಮುದ್ರ ನಾದ ಅನಂತಕಲ್ಯಾಣ ಗುಣಪರಿಪೂರ್ಣನಾದ ಭಗವಂತನು ಶ್ರೀಹರಿಯು ಸರ್ವೋತ್ತಮನಾಗಿರುವನು. ಅವನಿಗೆ ಸರಿಮಿಗಿಲಾದವರಾರೂ ಇಲ್ಲ. ಇದನ್ನೇ ಗೀತಾಚಾರ್ಯರು "ತಸ್ಮಾತ್ ಶಾಸ್ತ್ರಂ ಪ್ರಮಣಂತೇ ಕಾರ್ಯಾ ಕಾರ್ಯೇ ವ್ಯವಸ್ಥಿತಾ॥ ಇದು ಮಾಡಬೆಕು ಬೇಡ ಎಂಬುವುದರಲ್ಲಿ ಶಾಸ್ತ್ರವೇ ಪ್ರಮಾಣ.

ಜೀವರಾಶಿಗಳೆಲ್ಲಾ ಆತನಿಂದ ಭಿನ್ನರಾಗಿದ್ದು ಆತನ ದಾಸರಾಗಿರುವರು. ಜೀವಗಣ ನಿಚೋಚ್ಚ್ಯಭಾವದಿಂದ ಕೂಡಿರುವುದು, ಜೀವನ ನಿಜವಾದ ಸ್ವರೂಪಾನಂದನುಭಾವವೇ ಮುಕ್ತಿಯು, ನಿರ್ಮಲವಾದ ಭಕ್ತಿಗೊಲಿದ ಪರಮಾತ್ಮನ ಪ್ರಸಾದದಿಂದ ಈ ಮುಕ್ತಿಯು ಜೀವನಗೆ ಲಭಿಸುವುದು. ಶ್ರೀಹರಿಯೇ ಸಕಲವೇದ ವೇದ್ಯನಾಗಿರುವುನು. ಇದೇ ಮಧ್ವರು ಬೋಧಿಸಿದ ತತ್ವಸಾರವು. ಫಲಾಪೇಕ್ಷೆ ಇಲ್ಲದ ನಿಷ್ಕಾಮಕರ್ಮವೇ ಹರಿ ಪ್ರೀತಿದಾಯಕ. ಈ ರೀತಿಯ ಧರ್ಮವನ್ನು ಕೈಗೊಂಡರೆ ಆ ಧರ್ಮವಾಚ್ಯನಾದ ಶ್ರೀ ಹರಿಯು ನಮ್ಮನ್ನು ರಕ್ಷಿಸುವನು.

ನಮಗೆ ಪ್ರೀತಿಯ ವಿಷಯರಾದ, ಶ್ರೀ ಉತ್ತರಾದೀಮಠಾಧೀಶ ಪರಮಪೂಜ್ಯ ಶ್ರೀಸತ್ಯಪರಾಕ್ರಮ ವಂಶೀಯರಾದ ಪಾಂಡರಂಗಾಚಾರ್ಯ ವಾಯಿಕರ್‌ರವರು ಡೈರೆಕ್ಟರ್(ನಿವೃತ್ತ) ಸಿ.ಕ್ಯು.ಎ.ಆರ್.ರಕ್ಷಣಾ ವಿಭಾಗ, ಇವರು ದೊಡ್ಡ ಲೌಕಿಕ ಅಧಿಕಾರಿಗಳಾಗಿದ್ದರೂ ಆಧ್ಯಾತ್ಮ ವಿಷಯದಲ್ಲಿಯೂ ಡೈರೆಕ್ಟರು ಆಗಿರುತ್ತಾರೆ. ಈಗಾಗಲೇ ಗಾಯಿತ್ರೀ ವೈಭವ ಮೊದಲಾದ ಗ್ರಂಥಗಳನ್ನು ಬರೆದು ಬಹಳ ಲೋಕೋಪಕಾರ ಮಾಡಿ ಜನಗಳ ಪ್ರೀತಿ ಪಾತ್ರರಾಗಿರುತ್ತಾರೆ. ಈಗ ಧರ್ಮೋರಕ್ಷತಿ ರಕ್ಷಿತಃ ಎಂಬ ಗ್ರಂಥವನ್ನು ಬರೆದು ಅದರಲ್ಲಿ ಧರ್ಮಸ್ವರೂಪ, ಧರ್ಮರಕ್ಷಣೆ ಧರ್ಮಮಾರ್ಗದಲ್ಲಿ ಛಾಂದೋಗ್ಯ – ಎಂಬ ಮೂರುಭಾಗಗಳನ್ನೂ ಮತ್ತು ಆಧ್ಯಾತ್ಮಿಕ ಆಶಾಕಿರಣಗಳು, ಎಂದು ಐದು ಭಾಗಗಳಾಗಿ ವಿಗಂಡಿಸಿರುವರು. ಬಹಳ ಶ್ರಮಪಟ್ಟು ಅನೇಕ ಗ್ರಂಥಗಳನ್ನು ಅವಲೋಕಿಸಿ

ಇದನ್ನು ನಾವು ರಕ್ಷಿಸಿದರೆ ಭಗವಂತನು ನಮ್ಮನ್ನೂ ರಕ್ಷಿಸುವನು. ಕಣ್ಣಿಗೆ ಕಾಣುವ ಈ ಜಗತ್ತು ಸತ್ಯವಾದದ್ದು. ಜಗತ್ತಿಗೆ ಜನ್ಮಸ್ಥಿತಿಸಂಹಾರ ನಿಯಮನಜ್ಞಾನಾಜ್ಞಾನ ಬಂಧಮೋಕ್ಷವನ್ನು ಕರಣಿಸುವ ಕರುಣಾಸಮುದ್ರ ನಾದ ಅನಂತಕಲ್ಯಾಣ ಗುಣಪರಿಪೂರ್ಣನಾದ ಭಗವಂತನು ಶ್ರೀಹರಿಯು ಸರ್ವೋತ್ತಮನಾಗಿರುವನು. ಅವನಿಗೆ ಸರಿಮಿಗಿಲಾದವರಾರೂ ಇಲ್ಲ. ಇದನ್ನೇ ಗೀತಾಚಾರ್ಯರು "ತಸ್ಮಾತ್ ಶಾಸ್ತ್ರಂ ಪ್ರಮಣಂತೇ ಕಾರ್ಯಾ ಕಾರ್ಯೇ ವ್ಯವಸ್ಥಿತಾ॥ ಇದು ಮಾಡಬೆಕು ಬೇಡ ಎಂಬುವುದರಲ್ಲಿ ಶಾಸ್ತ್ರವೇ ಪ್ರಮಾಣ.

ಜೀವರಾಶಿಗಳೆಲ್ಲಾ ಆತನಿಂದ ಭಿನ್ನರಾಗಿದ್ದು ಆತನ ದಾಸರಾಗಿರುವರು. ಜೀವಗಣ ನಿಚೋಚ್ಯಭಾವದಿಂದ ಕೂಡಿರುವುದು, ಜೀವನ ನಿಜವಾದ ಸ್ವರೂಪಾನಂದನುಭಾವವೇ ಮುಕ್ತಿಯು, ನಿರ್ಮಲವಾದ ಭಕ್ತಿಗೊಲಿದ ಪರಮಾತ್ಮನ ಪ್ರಸಾದದಿಂದ ಈ ಮುಕ್ತಿಯು ಜೀವನಗೆ ಲಭಿಸುವುದು. ಶ್ರೀಹರಿಯೇ ಸಕಲವೇದ ವೇದ್ಯನಾಗಿರುವುನು. ಇದೇ ಮಧ್ವರು ಬೋಧಿಸಿದ ತತ್ವಸಾರವು. ಫಲಾಪೇಕ್ಷೆ ಇಲ್ಲದ ನಿಷ್ಕಾಮಕರ್ಮವೇ ಹರಿ ಪ್ರೀತಿದಾಯಕ. ಈ ರೀತಿಯ ಧರ್ಮವನ್ನು ಕೈಗೊಂಡರೆ ಆ ಧರ್ಮವಾಚ್ಯನಾದ ಶ್ರೀ ಹರಿಯು ನಮ್ಮನ್ನು ರಕ್ಷಿಸುವನು.

ನಮಗೆ ಪ್ರೀತಿಯ ವಿಷಯರಾದ, ಶ್ರೀ ಉತ್ತರಾದೀಮಠಾಧೀಶ ಪರಮಪೂಜ್ಯ ಶ್ರೀಸತ್ಯಪರಾಕ್ರಮ ವಂಶೀಯರಾದ ಪಾಂಡರಂಗಾಚಾರ್ಯ ವಾಯಿಕರ್‌ರವರು ಡೈರೆಕ್ಟರ್(ನಿವೃತ್ತ) ಸಿ.ಕ್ಯು.ಎ.ಆರ್.ರಕ್ಷಣಾ ವಿಭಾಗ, ಇವರು ದೊಡ್ಡ ಲೌಕಿಕ ಅಧಿಕಾರಿಗಳಾಗಿದ್ದರೂ ಆಧ್ಯಾತ್ಮ ವಿಷಯದಲ್ಲಿಯೂ ಡೈರೆಕ್ಟರು ಆಗಿರುತ್ತಾರೆ. ಈಗಾಗಲೇ ಗಾಯಿತ್ರೀ ವೈಭವ ಮೊದಲಾದ ಗ್ರಂಥಗಳನ್ನು ಬರೆದು ಬಹಳ ಲೋಕೋಪಕಾರ ಮಾಡಿ ಜನಗಳ ಪ್ರೀತಿ ಪಾತ್ರರಾಗಿರುತ್ತಾರೆ. ಈಗ ಧರ್ಮೋರಕ್ಷತಿ ರಕ್ಷಿತಃ ಎಂಬ ಗ್ರಂಥವನ್ನು ಬರೆದು ಅದರಲ್ಲಿ ಧರ್ಮಸ್ವರೂಪ, ಧರ್ಮರಕ್ಷಣೆ ಧರ್ಮಮಾರ್ಗದಲ್ಲಿ ಛಾಂದೋಗ್ಯ – ಎಂಬ ಮೂರುಭಾಗಗಳನ್ನೂ ಮತ್ತು ಆಧ್ಯಾತ್ಮಿಕ ಆಶಾಕಿರಣಗಳು, ಎಂದು ಐದು ಭಾಗಗಳಾಗಿ ವಿಗಂಡಿಸಿರುವರು. ಬಹಳ ಶ್ರಮಪಟ್ಟು ಅನೇಕ ಗ್ರಂಥಗಳನ್ನು ಅವಲೋಕಿಸಿ

ಶ್ರೀ ಗುರುರಾಜೋವಿಜಯತೆ

# ಧರ್ಮೋ ರಕ್ಷತಿ ರಕ್ಷಿತಃ

ವಿಷಯಸಂಗ್ರಾಹಕರು ಮತ್ತು ಲೇಖಕರು
ಪಾಂಡುರಂಗಾಚಾರ್ಯ ಶ್ರೀನಿವಾಸಾಚಾರ್ಯ ವಾಯಿಕರ್



ಗುರುಕೃಪಾ ಪ್ರಕಾಶನ
606/607, 14ನೇ ಕ್ರಾಸ್, ಮಾಗಡಿ ಕಾರ್ಡ ರೋಡ್
ವಿಜಯನಗರ, ಬೆಂಗಳೂರು–560040.

This book "DHARMO RAKSHATI RAKSHITAH" (ಧರ್ಮೋ ರಕ್ಷತಿ ರಕ್ಷಿತಃ) is a work in Kannada. The first part of this book gives a detailed account of DHARMA, (The religious code and conduct, its adoptation in life and deviations in adoption. The second part emphasises that Dharma adopted any time in life is not late and a person can be assured of Spiritual rays of hope. The work is backed up by various asthentic works. This is written by P.S.WAIKER 606/607, 14th Cross, Magadi chord Road, Vijay nagar, Bangalore -560040.

---

This book contains: +119 pages.

All rights of the this book are reserved by the author.

First edition - 1000 copies.

Year of publication - 1993.

Price - Rs. 15/-

Printed by:

**PARISHREE PRINTERS**

Seshadripuram
Bangalore-560009.

ಅನೇಕ ಶೃತಿ ಸ್ಮೃತಿಗಳನ್ನು ಪ್ರಮಾಣವಾಗಿ ಕೊಟ್ಟಿರುವುದಲ್ಲದೇ ಕೃಷ್ಣಾಮೃತಮಹಾರ್ಣವ, ಭಾಗವತ, ವಿಷ್ಣುರಹಸ್ಯ, ಗೀತಾ ಮುಂತಾದವುಗಳನ್ನು ಉದಾಹರಿಸಿ ಹರಿದಾಸರ ವಾಣಿಗಳನ್ನು ಸ್ಪಷ್ಟೀಕರಿಸಿ ಓದುಗರ ಹೃದಯಂಗಮವಾಗುವಂತೆ ಬರೆದಿರುವುದು ಇವರ ಲೇಖನದ ವೈಶಿಷ್ಟ್ಯ. ಇವರ ಪ್ರಯತ್ನವು ಅಭಿನಂದನೀಯವಾಗಿದೆ. ಸಜ್ಜನರಿಗೆ ಉಪಕಾರವಾಗಿದೆ. ಇವರಿಂದ ಇನ್ನೂ ಅನೇಕ ಗ್ರಂಥಗಳು ರಚಿತವಾಗಿ ಲೋಕೋಪಕಾರವಾಗಲೆಂದು ಗ್ರಂಥಕರ್ತೃಗಳಿಗೂ, ಓದುಗರಿಗೂ ಸುದೀರ್ಘ ಆಯುರಾರೋಗ್ಯಗಳನ್ನು ಜ್ಞಾನಭಕ್ತಿವೈರಾಗ್ಯಗಳನ್ನು ಅನುಗ್ರಹಿಸಲೆಂದು ಅಸ್ಮದುಪಾಸ್ಯಹಯವದನ ರಂಗವಿಠಲ ಗೋಪಿನಾಥಾಭಿನ್ನ ಲಕ್ಷ್ಮೀನರಸಿಂಹದೇವರನ್ನು ಪ್ರಾರ್ಥಿಸುತ್ತೇವೆ. ಇತಿ

- ಸಹಿ -

ಶ್ರೀ ಪ್ರಾಜ್ಞಾನ ನಿಧಿ ತೀರ್ಥಶ್ರೀಪಾದಂಗಳವರು

12.9.1992 ಮುಳಬಾಗಿಲು

# ಮುನ್ನುಡಿ - ೨

## ಗ್ರಂಥಕರ್ತರಿಂದ

'ಧರ್ಮೋ ರಕ್ಷತಿ ರಕ್ಷಿತಃ' ಎಂಬ ವಚನವು ನಮ್ಮ ಪ್ರಾಚೀನರ ಪ್ರಸಿದ್ಧೋಕ್ತಿ. ಈ ಶೀರ್ಷಿಕೆಯು ಒಂದು ಸಾಮಾನ್ಯ ವಾಕ್ಯದಂತೆ ತೋರಿದರೂ ವಿಚಾರಮಥನ ಮಾಡಿದ ಹಾಗೆಲ್ಲ ಬಹಳ ವಿಸ್ತಾರವಾದ ವಿಷಯಗಳು ಮತ್ತು ಶಾಸ್ತ್ರ ಸಾರವು ಇದರಲ್ಲಿ ಲೀನವಾದದ್ದು ತೋರುತ್ತದೆ.

ವಿಷ್ಣು ಸಹಸ್ರನಾಮದಲ್ಲಿ 'ಧರ್ಮ' ಎಂಬುದು ಭಗವಂತನ ನಾಮವೆಂಬದನ್ನು ಕಾಣುತ್ತೇವೆ. ಧರ್ಮಪ್ರವರ್ತಕನಾದ್ದರಿಂದಲೂ ಮತ್ತು ವಿಹಿತ ಧರ್ಮಾಚರಣೆ ಉಳ್ಳವನನ್ನು, ಅಧಃ ಪತನಾದಿಗಳಿಂದ ಅಂದರೆ ನಾರಕಾದ್ಯನರ್ಥಗಳು ಸಂಭವಿಸದಂತೆ ಧಾರಣಮಾಡುವದರಿಂದಲೂ 'ಧರ್ಮ' ಎಂದು ಅವನ ಸಾರ್ಥಕ ನಾಮಧೇಯ.

ಈ ಇಪ್ಪತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಜಗತ್ತಿನಲ್ಲಿ ಅತಿ ತೀವ್ರವೇಗದ ಬದಲಾವಣೆಗಳಾಗಹತ್ತಿವೆ. ನಮ್ಮ ಭವ್ಯ ಸಂಸ್ಕೃತಿಗೂ ಮತ್ತು ನಿಜಜೀವನಕ್ಕೂ ಬಹಳ ಅಂತರವಿದೆ. ಇದಕ್ಕೆ ಕಾರಣ ಪ್ರಾಯಶಃ ಆಧುನಿಕತೆಯ ಪ್ರಭಾವ ಮತ್ತು ಧಾರ್ಮಿಕ ಮೌಲ್ಯಗಳಲ್ಲಿ ಉದಾಸೀನತೆ. ಆಧುನಿಕ ವ್ಯಾಸಂಗ, ವೃತ್ತಿ, ಸಾಂಸಾರಿಕ ಕಲಾಪಗಳು, ಮನಸೆಳೆಯತಕ್ಕ ಉಪಕರಣಗಳು ಅವುಗಳನ್ನು ಪಡೆಯುವ ಸಂಭ್ರಮ, ಅನೇಕಾನೇಕ ಲೋಕವ್ಯವಹಾರಗಳಲ್ಲಿ ಮಗ್ನರಾದಾಗ ಮೊದಮೊದಲಿಗೆ ದೇವರ ಕಡೆಗಾಗಲಿ ಧರ್ಮದ ಕಡೆಗಾಗಲಿ ನಮ್ಮ ಗಮನವು ಸೆಳೆಯುವುದಿಲ್ಲ. ಆಯಸ್ಸಿನ ಅರ್ಧಮುಕ್ಕಾಲು ಕಳೆದ ಮೇಲೆ ಜೀವನದ ಸಿಹಿ-ಕಹಿ, ಸುಖ-ದುಃಖ, ಆಶೆ-ನಿರಾಶೆ, ರೋಗ-ರುಜಿನ, ನಂಬಿಕೆ-ಮೋಸ, ಲಾಭ-ಹಾನಿ ಇತ್ಯಾದಿಗಳ ಅನುಭವ ಆಗುತ್ತ-ಆಗುತ್ತ ಪುನರ್ವಿಚಾರ ಮಾಡುತ್ತ-ಮಾಡುತ್ತ, ಯಾರಿಂದಲೂ ನಮ್ಮ ಸಮಸ್ಯೆಗಳು

ಬಗೆಹರಿಯದಾಗ ನಮ್ಮ ಆಪತ್ತಿಗೆ ಯಾರೂ ಒದಗದಾಗ ಅನೇಕ ಸುಜೀವರುಗಳಿಗೆ ದೇವರಕಡೆ ದೃಷ್ಟಿ ಹರಿಯಲು ಸಾಧ್ಯ. ದೇವರನ್ನು ಮೊರೆಯಿಟ್ಟರೆ ಧರ್ಮಮಾರ್ಗವನ್ನು ಅಂಗೀಕರಿಸಿದಂತೆಯೇ. ಅನನ್ಯ ಭಕ್ತಿಯಿಂದ ಭಗವಂತನನ್ನನುಸರಿಸಿದಾಗ **'ಯೋಗ ಕ್ಷೇಮಂ ವಹಾಮ್ಯಹಂ'** ಎಂದು ಶ್ರೀಕೃಷ್ಣನ ಧೃಡ ಆಶ್ವಾಸನೆ.

ಸಮಾಜದಲ್ಲಿ ನಮ್ಮ ಸೋದರರಿಗೆ ಅಂಥಸಂದರ್ಭ ಒದಗಿದಾಗ ಇಂಥ ಗ್ರಂಥಗಳು ಬಲು ಆಪ್ಯಾಯಮಾನವಾಗುತ್ತವೆ. ಸ್ನೇಹಿತನಂತೆ, ಅಧ್ಯಾತ್ಮಬಂಧುವಿನಂತೆ ಮತ್ತು ಮಾರ್ಗದರ್ಶಕನಂತೆ ಸಹಾಯವಾಗುತ್ತವೆ ಇಂಥ ಗ್ರಂಥಗಳು.

ಧಾರ್ಮಿಕ ದೈವಿಕ ವಿಷಯದಲ್ಲಿ ಕುತೂಹಲ, ಆಸಕ್ತಿ, ಶ್ರದ್ಧೆ ಅಂಕುರಿಸಿದಾಗ ಈ/ಇಂಥ ಗ್ರಂಥವನ್ನು ಸ್ವಲ್ಪ ಸ್ವಲ್ಪವಾಗಿ ಅವಲೋಕನ ಮಾಡಲು ಸಾಧ್ಯವಾಗಬಹುದು. ಇದು ಕಥೆ ಕಾದಂಬರಿಗಳಂತೆ ಒಂದೇ ಸಲ ಓದಿ ಮುಗಿಸತಕ್ಕಂಥಹದಲ್ಲ. ಸಾವಧಾನವಾಗಿ ಅಧ್ಯಯನ, ತದನಂತರ ಹಂತ ಹಂತವಾಗಿ ಕ್ರಿಯಾಶೀಲತೆ. ದಯಾಮಯನಾದ ಭಗವಂತನ ಉಸುರಿದ ಧರ್ಮಾಕರ್ಮಗಳಲ್ಲಿ ಒಂದು ಸಲ ವಿಶ್ವಾಸ ಪೂರ್ವಕ ಆಸಕ್ತಿ ಬಂದರೆ ಸಾಕು. ಅಂದಿನಿಂದಲೇ ಆ ದೇವನ ವಿಶೇಷ ಕೃಪಾದೃಷ್ಟಿಗೊಳಗಾದಂತೆಯೇ. ಅವನು ನಮ್ಮ ಆಗುಹೋಗುಗಳಲ್ಲಿ ಉದಾಸೀನ ಭಾವದಿಂದ ಸುಮ್ಮನೆ ಇರಲಾರ. ಒಂದು ವಿಶೇಷ ಸಂಬಂಧವೇರ್ಪಡುತ್ತದೆ, ನಮ್ಮ ಮತ್ತು ಸ್ವಾಮಿಯ ಮಧ್ಯ. ಈ ಸಂದರ್ಭದಲ್ಲಿ ಶ್ರೀ ವಿಜಯದಾಸರ ಅಮೃತವಾಣಿಯನ್ನು ಜ್ಞಾಪಿಸಿಕೊಳ್ಳಬಹುದು.

'ನಿನ್ನ ನಾನು ಬಿಡುವನಲ್ಲ। ನೀನು ಎನ್ನ ಬಿಡಲು ಸಲ್ಲ।
ಘನ್ನಮಹಿಮ ವಿಜಯವಿಠಲ। ನಿನ್ನ ಭಕುತರ ಕೇಳೋ ಸೊಲ್ಲ॥'

ಈ ಸ್ಥಿತಿಗೆ ಬಂದರೆ ಸಾಕು. ಜೀವನ ಸಾಫಲ್ಯವಾದಂತೆಯೇ.

ಈ ಗ್ರಂಥವು ಮೊದಲು ಲೇಖನರೂಪವಾಗಿ 'ಧರ್ಮ ಸಂದೇಶ' ಎಂಬ ಮುಂಭೈ ಮಾಸಿಕ ಸಂಚಿಕೆಯಲ್ಲಿ ಎರಡು–ಮೂರು ವರ್ಷಗಳ ಕಾಲ ಪ್ರಸಾರವಾಯಿತು. ಓದುಗರಿಂದ ವಿಶೇಷ ಮೆಚ್ಚಿಗೆ ಪಡೆದ ವಿಷಯವನ್ನು ಆ ಸಂಚಿಕೆಯ ಪ್ರಧಾನ ಸಂಪಾದಕರಾದ ಶ್ರೀ ವಿದ್ವಾನ್ ಪಿ.ಆರ್.ನಾಗರಹಳ್ಳಿಯವರಿಂದ ಸಮಕ್ಷಮ ತಿಳಿದೆನು ಮತ್ತು ಅನೇಕ ಸ್ನೇಹಿತರು ಬೆಂಗಳೂರು–ಹೈದರಾಬಾದುಗಳಿಂದ ತಿಳಿಸಿದರು. ಅವರೆಲ್ಲರ ಸದಭಿಪ್ರಾಯಗಳಿಂದ ಪ್ರೋತ್ಸಾಹ ಹೊಂದಿ ಪ್ರಕೃತ ಈ ಗ್ರಂಥರೂಪದಲ್ಲಿ ಪ್ರಕಟವಾಗುತ್ತಿರುವದು ಒಂದು ಹರ್ಷದ ಸಂಗತಿ. ಅವರೆಲ್ಲರಿಗೂ ನಮ್ಮ ಧನ್ಯವಾದಗಳು.

ಈ ಮೇಲಿನ ಶೀರ್ಷಿಕೆಯ ಹಸ್ತಲಿಖಿತ ಗ್ರಂಥವನ್ನು ಓದಿ, ತಿದ್ದಿ, ಸೂಕ್ತ ಸಲಹೆಗಳೊಂದಿಗೆ ಒಂದು ಮುನ್ನುಡಿ ಬರೆದು ಕೊಡಬೇಕೆಂದು ಶ್ರೀ ೧೦೮ಶ್ರೀ ಪ್ರಜ್ಞಾನನಿಧಿ ತೀರ್ಥ ಶ್ರೀ ಪಾದಂಗಳವರಿಗೆ ಪ್ರಾರ್ಥಿಸಿದೆನು. ನಮ್ಮ ಪ್ರಾರ್ಥನೆಯನ್ನು ಮನ್ನಿಸಿ ಗ್ರಂಥವನ್ನೋದಿ ಉತ್ತಮ ಸಲಹೆಗಳೊಂದಿಗೆ ಸುಂದರವಾದ ಮುನ್ನುಡಿಯನ್ನು ದಯಪಾಲಿಸಿದ್ದಾರೆ. ಅವರಿಗೆ ನಮ್ಮ ಅನಂತ ವಂದನೆಗಳು ಮತ್ತು ಧನ್ಯವಾದಗಳು.

ನಮ್ಮ ಎಲ್ಲ ಪ್ರಕಟಣೆಗಳಲ್ಲಿಯೂ ವಿಶೇಷಾಸಕ್ತಿವಹಿಸಿದವರೂ, ಆತ್ಮ ಸ್ನೇಹಿತರೂ, ಪೂರ್ವಸಹೋದ್ಯೋಗಿಗಳೂ ಮತ್ತೂ ಅಭಿಮಾನಿಗಳೂ ಆದ ಶ್ರೀ ಬಿ.ರಾಘವೇಂದ್ರರಾವ್ (ನಿವೃತ್ತ ಸೀನಿಯರ್ ಸೈಂಟಿಫಿಕ್ ಆಫೀಸರ್, ರಕ್ಷಣಾ ವಿಭಾಗ, ಬೆಂಗಳೂರು) ಅವರು ಅಚ್ಚುಪೂರ್ವಕಾಪಿಗಳನ್ನು ಸೂಕ್ಷ್ಮ ದೃಷ್ಟಿಯಿಂದ ಪರಿಶೀಲನೆ ಶುದ್ಧೀಕರಣ ಮಾಡಿದ್ದು ಶ್ಲಾಘನೀಯ ವಿಷಯವಾಗಿದೆ, ಆತ್ಮೀಯರಿಗೆ ನಮ್ಮ ಧನ್ಯವಾದಗಳು.

ಮುಖ ಪುಟದ ಅಂದವಾದ ಚಿತ್ರಕಲೆ ಅಸಿಸ್ಟೆಂಟ್ ಪ್ರೊಫೆಸರ್ ಬಿ.ಜಿ.ಕುಲ್ಕರ್ಣಿ ಅವರ ಕೊಡುಗೆ. ಶ್ರೀಯುತರಿಗೆ ನಮ್ಮ ಹೃತ್ಪೂರ್ವಕ ಅಭಿನಂದನೆಗಳು.

ಆಸಕ್ತಿವಹಿಸಿ . ಅಂದವಾಗಿ, ಶುದ್ಧವಾಗಿ ಗ್ರಂಥವನ್ನು ಸಕಾಲದಲ್ಲಿ ಅಚ್ಚುಮಾಡಿ ಕೊಟ್ಟ ಶ್ರೀ ರಂಗನಾಥರಾವ್, ಪರಿಶ್ರೀ ಪ್ರಿಂಟರ್ಸ್, ಶೇಷಾದ್ರಿಪುರಂ, ಬೆಂಗಳೂರು ಇವರಿಗೆ ಧನ್ಯವಾದಗಳು.

ಈ ಗ್ರಂಥವನ್ನು ಓದತಕ್ಕ ಆಸ್ತಿಕ ಮಹನೀಯರುಗಳಿಗೆ ನಾವು ಧನ್ಯವಾದಗಳನ್ನು ಹೇಳುವೆವಲ್ಲದೇ ಭಗವಂತನು ಅವರಿಗೆ ಇಹಪರಗಳಲ್ಲಿ ಅಭ್ಯುದಯ ನಿಶ್ರೇಯಸನ್ನು ದಯಪಾಲಿಸಲೆಂದು ಆ ದಯಾಮಯನಾದ ಭಗವಂತನಲ್ಲಿ ಅನಂತ ವಂದನಾಯುಕ್ತ ಸವಿನಯ ಪ್ರಾರ್ಥನೆ.

ಪಾಂಡುರಂಗಾಚಾರ್ಯ ಶ್ರೀನಿವಾಸಾಚಾರ್ಯ ವಾಯಿಕರ್
(ಪಿ.ಎಸ್. ವಾಯಿಕರ್)
ಡೈರೆಕ್ಟರ್ (ನಿವೃತ್ತ)
(ಕಂಟ್ರೋಲೆರೇಟ್ ಆಫ್ ಕ್ವಾಲಿಟೀ ಅಶ್ಯೂರೆನ್ಸ ರಾಡಾರ್,
ರಕ್ಷಣಾ ವಿಭಾಗ, ಬೆಂಗಳೂರು.)

ದಿನಾಂಕ ೨೧.ಡಿಸೆಂಬರ್.೧೯೯೨

ವಸತಿ ವಿಳಾಸ

606/607,14 ನೇ ಕ್ರಾಸ್
ಮಾಗಡಿ ಕಾರ್ಡ ರೋಡ್
ವಿಜಯನಗರ
ಬೆಂಗಳೂರು. 560040.

# –ಅನುಕ್ರಮಣಿಕೆ–


| ವಿಷಯ | ಪುಟ ಸಂಖ್ಯೆ |
|---|---|
| 1. ಧರ್ಮ ಸ್ವರೂಪ | 1-10 |
| 2. ಧರ್ಮಾಚರಣೆಯೇ–ಧರ್ಮರಕ್ಷಣೆ | 11-25 |
| 3. ಧರ್ಮಪಥದಲ್ಲಿ ಛಾಂದೋಗ್ಯ ಚೆಲ್ಲಿದ ಬೆಳಕು | 26-35 |
| 4. ಆಧ್ಯಾತ್ಮಿಕ–ಆಶಾಕಿರಣಗಳು–ಭಾಗ–೧ (ಕೃಷ್ಣಾಮೃತ – ಮಹಾರ್ಣವದಿಂದ) | 36-49 |
| 5. ಆಧ್ಯಾತ್ಮಿಕ ಆಶಾಕಿರಣಗಳು–ಭಾಗ–೨ (ಗೀತಾದಿಂದ) | 50-64 |
| 6. ಆಧ್ಯಾತ್ಮಿಕ ಆಶಾಕಿರಣಗಳು–ಭಾಗ–೩ (ಭಾಗವತದಿಂದ) | 65-86 |
| 7. ಆಧ್ಯಾತ್ಮಿಕ ಆಶಾಕಿರಣಗಳು–ಭಾಗ–೪ (ವಿಷ್ಣು ಪುರಾಣ--ವಿಷ್ಣುರಹಸ್ಯಗಳಿಂದ) | 87-105 |
| 8. ಆಧ್ಯಾತ್ಮಿಕ ಆಶಾಕಿರಣಗಳು–ಭಾಗ–೫ (ದಾಸಸಾಹಿತ್ಯದಿಂದ) | 106-120 |

॥ ಶ್ರೀ ಗುರುರಾಜೋವಿಜಯತೆ ॥ಹರಿಃ ಓಂ॥

ಶ್ರೀ ಮಧ್ವನುಮಭೀಮಮಧ್ವಾಂತರ್ಗತ ಶ್ರೀರಾಮಕೃಷ್ಣವೇದವ್ಯಾಸಾತ್ಮಕ
ಶ್ರೀ ಲಕ್ಷ್ಮೀಹಯಗ್ರೀವಾಯನಮಃ॥

# ಧರ್ಮೋ ರಕ್ಷತಿ ರಕ್ಷಿತಃ

## ಧರ್ಮಸ್ವರೂಪ – ೧

'ಯಃ ಧರ್ಮಂ ರಕ್ಷತಿ ಸಃ ಧರ್ಮೇಣ ರಕ್ಷಿತೋಭವತಿ' "ಯಾವನು ಧರ್ಮವನ್ನು ರಕ್ಷಣೆ ಮಾಡುತ್ತಾನೋ, ಅವನು ಧರ್ಮದಿಂದ ರಕ್ಷಿಸಲ್ಪಡುತ್ತಾನೆ", ಎಂದು ಸಾಮಾನ್ಯವಾಗಿ ತಿಳಿಯಬಹುದು. ಇದೇನ್ರೀ; ಹೀಗೆ ಹೇಳಿದರೆ ಅನ್ಯೋನ್ಯಾಶ್ರಯವೆಂಬ ತರ್ಕದೋಷ ಬರಬಹುದಲ್ಲ. ಅಂದರೆ, ಹಾಗೆ ತಿಳಿಯಬಾರದು. ಧರ್ಮದ ಸ್ವರೂಪ, ರಕ್ಷಣೆ ಹೇಗೆ ಎಂದು ತಿಳಿದ ಮೇಲೆ ಅನ್ಯೋನ್ಯಾಶ್ರಯವಿಲ್ಲವೆಂದು ವಿದಿತವಾಗುವದು.

ರಾಷ್ಟ್ರ ರಕ್ಷಣೆಗೆ – ಸೈನ್ಯದ ಸಿದ್ಧತೆ ಮಾಡುತ್ತಾರೆ. ಪ್ರಾಂತಗಳಲ್ಲಿ ರಕ್ಷಣೆಗೆ ಪೋಲಿಸ್ ಸಿಬ್ಬಂದಿ ಇಡುತ್ತಾರೆ. ಕೆಲವು ಮನೆಗಳಲ್ಲಿ ಕಾವಲುಗಾರರನ್ನೋ ಅಥವಾ ನಾಯಿಗಳನ್ನೋ ರಕ್ಷಣೆಗಾಗಿ ಇರಿಸಿರುತ್ತಾರೆ. ಆದರೆ ಧರ್ಮರಕ್ಷಣೆ ಹೇಗೆ? ಪಹರೆಯಿಂದಾಗಲಿ, ಖಡ್ಗದಿಂದಾಗಲಿ, ಬಂದೂಕಿನಿಂದಾಗಲಿ ಧರ್ಮರಕ್ಷಣೆ ಆಗದು. ಮೊದಲು ಧರ್ಮಸ್ವರೂಪ ತಿಳಿದರೆ ಅದಕ್ಕೆ ವಿಹಿತವಾದ ರಕ್ಷಣೋಪಾಯಗಳನ್ನು ಕೈಕೊಳ್ಳಬಹುದು. ಧರ್ಮರಕ್ಷಣೆಗೂ ಬೇಕು, ಧರ್ಮದಲ್ಲಿ ಶ್ರದ್ಧೆಯುಳ್ಳ ಭಟರು. ಧರ್ಮವು ಪ್ರತ್ಯಕ್ಷಗೋಚರವಲ್ಲ. ಅನುಮಾನ ವೇದ್ಯವೂ ಅಲ್ಲ. ಅದರ ಸ್ವರೂಪ

ಅಥವಾ ಲಕ್ಷಣ ಶ್ರುತಿ ಸ್ಮೃತಿಗಳಿಂದ ಮಾತ್ರ ತಿಳಿಯುವದು. ಇವೆಲ್ಲವೂ ಅತೀಂದ್ರಿಯ ವಿಷಯಗಳು.

ಧರ್ಮದ ಸ್ವರೂಪ ಅಥವಾ ಲಕ್ಷಣವನ್ನು ಶ್ರುತಿ ಸ್ಮೃತಿಗಳು ಮತ್ತು ಪ್ರಾಚೀನ ಋಷಿಗಳು/ಜ್ಞಾನಿಗಳು ಅನೇಕ ರೀತಿ ವಿವರಿಸಿದ್ದಾರೆ. ಇಲ್ಲಿ ಕೆಲವನ್ನು ಮಾತ್ರ ಸಂಗ್ರಹಮಾಡಲಾಗಿದೆ:-

೧) "ಧಾರಯತೀತಿ ಧರ್ಮಃ"। ಅಧಃಪತನಾತ್ ಧಾರಯತಿ ಇತಿ ಧರ್ಮಃ॥

ಮಾನವನನ್ನು ಅಧೋಗತಿಗೆ ಹೋಗದಂತೆ ಹಿಡಿಯುವದೇ ಧರ್ಮ

(to hold at least where one is)

೨) "ಯತಃ ಅಭ್ಯುದಯ ನಿಶ್ರೇಯಸಃ ಸ ಧರ್ಮಃ"।

ಯಾವ ಆಚರಣೆ (ಕಾಯಾ, ವಾಚಾ, ಮನಸಾ) ಅಥವಾ ಅನುಷ್ಠಾನದಿಂದ, ಇಹ ಪರ ಲೋಕಗಳಲ್ಲಿ ಮಾನವನ ಉನ್ನತಿ ಆಗುತ್ತದೆಯೋ ಅದು ಧರ್ಮ.

೩) "ಧರ್ಮಾಧರ್ಮೌ ಪುಣ್ಯಪಾಪೌ"। (ಪದಾರ್ಥಸಂಗ್ರಹ)

ಧರ್ಮಾಧರ್ಮಗಳೆಂದರೆ ಕ್ರಮವಾಗಿ ಪುಣ್ಯಪಾಪಗಳೆಂದೇ ಅರ್ಥ. ಅಂದರೆ ಧರ್ಮವು ಪುಣ್ಯವಾಗಿಯೂ ಮತ್ತು ಅಧರ್ಮವು ಪಾಪವಾಗಿಯೂ ಪರಿಣಮಿಸುತ್ತದೆ.

೪) "ವೇದ ಪ್ರಣಿಹಿತೋಧರ್ಮಃ ಅಧರ್ಮಸ್ತದ್ವಿಪರ್ಯಯಃ" ॥ಭಾಗವತ॥"

ವೇದವು ವಿಧಿಪೂರ್ವಕ ಹೇಳಿದ್ದು ಧರ್ಮ. ವೇದವು ನಿಷೇಧಪೂರ್ವಕ ಹೇಳಿದ್ದು ಅಧರ್ಮ.

೫) "ಸ್ವವಿಹಿತ ವೃತ್ತ್ಯಾ ಭಕ್ತ್ಯಾ ಭಗವದಾರಾಧನಮೇವ ಪರಮೋಧರ್ಮಃ" ॥ ಗೀ.ಭಾಷ್ಯ)

ತಮ್ಮ ತಮ್ಮ ವರ್ಣಾಶ್ರಮೋಚಿತ ವೃತ್ತಿಯಿಂದ ಭಗವಂತನಲ್ಲಿ ಭಕ್ತಿಯಿಂದ ಆರಾಧನಾರೂಪವಾಗಿ ಮಾಡುವ ಅನುಷ್ಠಾನವೇ ಶ್ರೇಷ್ಠವಾದ ಧರ್ಮವು.

ಮೇಲಿನ ಎಲ್ಲ ವಿವರಣೆಗಳ ಸಾರಾಂಶವನ್ನು ಹೀಗೆ ಹೇಳಬಹುದು-

"ಸಕಲ ಸ್ತ್ರೀಪುರುಷರಿಗೂ ಅಭಿಹಿತವಾದ ವಿಧಿನಿಷೇಧ ಸಹಿತವಾದ ಇಹಪರ ಲೋಕಗಳಲ್ಲಿ ಸುಖಸಾಧನವಾದ ಮತ್ತು ಸಕಲ ಪುರುಷಾರ್ಥಗಳನ್ನು ಕೊಡತಕ್ಕ ಶ್ರುತಿ ಸ್ಮೃತ್ಯುಕ್ತವಾದ ಸಾಧನಾನುಷ್ಠಾನಗಳೇ ಧರ್ಮ".

ವೇದವಿಹಿತ ಧರ್ಮಕರ್ಮಾಚರಣೆಗೆ ಶಿಷ್ಟಾಚಾರ ಪರಂಪರೆ ಎಂದು ಹೇಳುತ್ತಾರೆ. ಶಿಷ್ಟಾಚಾರವೆಂದರೆ ಫಲಪ್ರಾಪ್ತಿಯ ವಿಷಯದಲ್ಲಿ ಸಂದೇಹಾಭಾವ. ಒಂದು ವೇಳೆ ಉಕ್ತಫಲ ದೊರೆಯದೇ ಹೋದರೆ ಕರ್ತೃ, ಕರ್ಮ ಅಥವಾ ಕ್ರಿಯಾದಿಗಳಲ್ಲಿ ವೈಗುಣ್ಯವಿದೆಯೆಂದು ಸಂದೇಹ ಪಡಬೇಕೇ ವಿನಾ ವೇದವಾಣಿಯಲ್ಲಿ ಸಂದೇಹ ಪಡಲವಕಾಶವಿಲ್ಲ.

ಅದೆಲ್ಲ ಸರಿ, ಆದರೆ ವೇದದಲ್ಲಿ ಹೇಳಿದ ಮಾತ್ರಕ್ಕೆ ಅದನ್ನು ಪ್ರಮಾಣವಾಗಿ ಒಪ್ಪಿ ಅದನ್ನು ಅನುಷ್ಠಾನ ಮಾಡಬೇಕೆಂದು ಏನು? ನಿಯಮ ಒಪ್ಪುವುದು ಹೇಗೆ? ಎಂದರೆ

i) ಧರ್ಮ-ಅಧರ್ಮ, ಸ್ವರ್ಗ-ನರಕ, ಪುಣ್ಯ-ಪಾಪ, ದೇವ-ದೇವತೆಗಳು ಇತ್ಯಾದಿಗಳು ಅತೀಂದ್ರಿಯ ಪದಾರ್ಥಗಳು. ಆದ್ದರಿಂದ ಇವುಗಳು ಇಂದ್ರಿಯ ಪ್ರತ್ಯಕ್ಷದಿಂದಾಗಲಿ ಅಥವಾ ಊಹಾಪೋಹಾತ್ಮಕವಾದ ಅನುಮಾನಗಳಿಂದಾಗಲಿ ತಿಳಿಯುವುದಿಲ್ಲವೆಂದು ಅನುಭವವೂ ಉಪನಿಷದ್ವಾಕ್ಯಗಳೂ ಇವೆ.

"ನೇಂದ್ರಿಯಾಣಿ ನಾನು ಮಾನಂ ವೇದಾಹ್ಯೈವೈನಂ ವೇದಯಂತಿ"।
"ನೈಷಾ ತರ್ಕೇಣ ಮತಿರಾಪನೇಯ"। ಇತ್ಯಾದಿ ॥ ಕಠ. ಉ॥

ii) ಕೇವಲ ಊಹೆ ಅಥವಾ ತರ್ಕಮಾಡುವದೆಂದರೆ ಒಬ್ಬೊಬ್ಬರದು ಒಂದೊಂದು ತರಹದ ಊಹೆ, ಅನೇಕ ವ್ಯತ್ಯಾಸಗಳು, ವಿರೋಧಗಳು

ಕಂಡು ಬಂದಾಗ ಯಾವದು ಧರ್ಮ ಯಾವದು ಅಧರ್ಮ ಎಂದು ತಿಳಿಯಲಾಗುವುದಿಲ್ಲ. ಅನುಷ್ಠಾನವೂ ಸಾಧ್ಯವಿಲ್ಲ. ಹಾಗೆಯೇ ಉತ್ತಮ ಫಲೋಪಲಬ್ಧಿಯೂ ಇಲ್ಲ. ಆಗಮ ಸಹಾಯ ರಹಿತವಾದ ಅನುಮಾನವು ಧರ್ಮದಿಗಳ ವಿಷಯದಲ್ಲಿ ಪ್ರಮಾಣವಾಗಲಾರದು, ಯಾಕೆಂದರೆ ಧರ್ಮದಿಗಳು ಅತೀಂದ್ರಿಯವಾದ್ದರಿಂದ.

iii) "ಓಂ ಪತ್ಯುರಸಾಮಂಜಸ್ಯಂ ಓಂ" (ಬ್ರ.ಸೂ) ಪಶುಪತಿ ಆಗಮ ವಾಕ್ಯಗಳಂತೆ ನಿರಾಧಾರವಾದ ಪೌರುಷೇಯ ವಾಕ್ಯಗಳು ಪ್ರಮಾಣವಾಗುವುದಿಲ್ಲ.

iv) "ನ ಚ ಪೌರುಷೇಯೇಣ ವಾಕ್ಯೇನ ತತ್ಸಿದ್ಧಿಃ। ಅಜ್ಞಾನ ವಿಪ್ರಲಂಭಯೋಃ ಪ್ರಾಪ್ತೇಃ।' ವಿ.ತ.ನಿ

ಯಾವುದಾದರೊಂದು ಪುರುಷವಾಕ್ಯವನ್ನವಲಂಬಿಸಿ ಧರ್ಮಾಧರ್ಮ ಗಳನ್ನು ಸಿದ್ಧಮಾಡಲಾಗುವುದಿಲ್ಲ. ಪುರಷನಲ್ಲಿರಬಹುದಾದ ಅಜ್ಞಾನ ಮತ್ತು ವಂಚಕ ಸ್ವಭಾವಾದಿಗಳಿಂದ ವಾಕ್ಯಗಳಲ್ಲಿ ದೋಷಗಳು ಬರುತ್ತವೆ.

ಇಲ್ಲ, ಅನೇಕರು ಸರ್ವಜ್ಞರು ಇದ್ದಾರೆ. ಎಂದರೆ, ಹಾಗೆ ಸಹ ಊಹಿಸಲೂ ಸಾಧ್ಯವೇ ಇಲ್ಲ.

> "ನಚತದರ್ಥತ್ವಂ ಸರ್ವಜ್ಞತ್ವಂ ಕಲ್ಪೇತ । ತಸ್ಯಸರ್ವಜ್ಞತ್ವ ಕಲ್ಪನಂ,
> ತಸ್ಯ ಅವಿಪ್ರಲಂಭಕತ್ವ ಕಲ್ಪನಂ ತಸ್ಯ ತತ್ಕೃತತ್ವ ಕಲ್ಪನಂ ಚೇತಿ
> ಕಲ್ಪನಾಗೌರವ ಪ್ರಾಪ್ತೇಃ ॥ (ವಿ.ತ.ನಿ)

ಯಾವದಾದರೊಂದು ಪೌರುಷೇಯ ವಾಕ್ಯವನ್ನು ಪ್ರಮಾಣತ್ವೇನ ಒಪ್ಪುವದಕ್ಕೋಸ್ಕರ ಯಾವನೊಬ್ಬ ವ್ಯಕ್ತಿಯಲ್ಲಿ ಸರ್ವಜ್ಞತ್ವವನ್ನು ಕಲ್ಪನೆ ಮಾಡಕೂಡದು. ಹಾಗೆ ಸರ್ವಜ್ಞತ್ವ ಕಲ್ಪನೆ, ಅವನು ವಂಚಕನಲ್ಲವೆಂಬ ಕಲ್ಪನೆ ಮತ್ತು ಅವನೇ ಈ ಶಾಸ್ತ್ರಗಳನ್ನೆಲ್ಲ ಬರೆದನೆಂಬ ಕಲ್ಪನೆ ಹೀಗೆ ಕಲ್ಪನಾಗೌರವವೆಂಬ ದೋಷವು ಬರುತ್ತದೆ. ಆದ್ದರಿಂದ ಅಂಥವಾಕ್ಯಗಳು ಪ್ರಮಾಣವಾಗುವದಿಲ್ಲ.

"ಯಸ್ಯ ತೌ ನಾಭಿಮತೌ ನಾಸೌ ಸಮಯೀ ।
ಸಮಯ ಪ್ರಯೋಜನಾಭಾವಾತ್ ॥ (ವಿ.ತ.ನಿ)

ಆದ್ದರಿಂದ ಸರ್ವಶಾಸ್ತ್ರಕಾರರೂ ಯಾವದಾದರೊಂದು ಅಪೌರುಷೇಯ ವಾಕ್ಯವನ್ನು ಅಂಗೀಕಾರಮಾಡಲೇಬೇಕು. ಹಾಗೆ ಸಮ್ಮತಿ ಪಡದೇ ಇದ್ದವರು ಶಾಸ್ತ್ರಕಾರರೇ ಅಲ್ಲ. ಅಂಥ ಶಾಸ್ತ್ರಗಳಿಂದ ಪ್ರಯೋಜನವೂ ಸಹ ಇಲ್ಲ. ಹಾಗಾದರೆ ವೇದ? ಅದರ ಲಕ್ಷಣದಿಂದಲೇ ತಿಳಿಯುವದು. "ನಿರ್ದೋಷಃ ಶಬ್ದಃ ಆಗಮಃ" ಎಂಬದು ಆಗಮ ಸಾಮನ್ಯಲಕ್ಷಣ. ಆಗಮಗಳು ಎರಡು ತರಹ. (1) ಪೌರುಷೇಯ ಆಗಮಗಳು ವ್ಯಾಸಪ್ರಣೀತ ಪುರಾಣಾದಿಗಳು. ಇವು ಪ್ರಮಾಣಗಳು.

(2) ಅಪೌರುಷೇಯ ವಾಕ್ಯಗಳು :- ಅಕತೃಕತ್ವಪ್ರಸಿದ್ಧಿ ಇರುವದು. ಇವುಗಳನ್ನು "ಶೃತಿ" ಎಂದು ಕರೆಯುತ್ತಾರೆ. ಯಾಕೆಂದರೆ ಯಾರೂ ರಚಿಸಿದ್ದಲ್ಲ. ಒಬ್ಬರಿಂದೊಬ್ಬರು ಕೇಳಿದ್ದಾರೆ ಮಾತ್ರ.

ಈ ವಾಕ್ಯಗಳ ಸಾಮಾನ್ಯ ಲಕ್ಷಣವನ್ನು ಹೀಗೆ ತಿಳಿಸಿದ್ದಾರೆ ನಮ್ಮ ಪ್ರಾಚೀನರು. "ಕತೃಪ್ರಸಿದ್ಧಿ ಇಲ್ಲದ, ಪರಂಪರಾ ಅಧ್ಯಯನ ಕ್ರಮದಲ್ಲಿರತಕ್ಕ, ವಿಶಿಷ್ಠ ಅನುಪೂರ್ವಿ ಇರತಕ್ಕ ವಾಕ್ಯಸಮುದಾಯಕ್ಕೆ ವೇದವೆಂದು ಹೆಸರು."

ಅಕತೃಕತ್ವ ಪ್ರಸಿದ್ಧಿ ಎಂದರೆ – ಪ್ರತ್ಯಕ್ಷಾದಿ ಪ್ರಮಾಣಗಳಾಗಲಿ ವಿಪ್ರಲಂಭಾದಿಮೂಲಗಳಾಗಲಿ ಇಲ್ಲವೆಂಬರ್ಥ.

ವಶಿಷ್ಠಾದಿಗಳು ವೇದದ್ರಷ್ಟುಗಳು. ಕೆಲವು ವೇದವಾಕ್ಯಗಳು ಅವರ ಬುದ್ಧಿಗೋಚರವಾಗಿವೆ. ತಾವತಃ ಅವರು ರಚನೆಮಾಡಿಲ್ಲ. ಇದು ವೇದದ್ರಷ್ಟು ಋಷಿಗಳ ಅಭಿಪ್ರಾಯ.

"ಓಂ ಶಾಸ್ತ್ರಯೋನಿತ್ವಾತ್ ಓಂ" (ಭ್ರಸೂ) ಎಂಬ ಬ್ರಹ್ಮ ಸೂತ್ರದ ವ್ಯಾಖ್ಯಾನವಸರದಲ್ಲಿ ತ್ರಿಮತದ ಭಾಷ್ಯಕಾರರೂ ವೇದಾಪೌರುಷೇಯ ಸಮರ್ಥನೆ ಮಾಡಿದ್ದಾರೆ. ಶೃತ್ಯನುಸಾರಿಯಾದ

ಸ್ಮೃತಿಗಳೂ ಸಹ ಪ್ರಮಾಣಗಳೇ. "ಶ್ರುತಿಸ್ಮೃತಿ ಹರೇರಾಜ್ಞಾ" ಎಂಬದು ಜ್ಞಾನಿಗಳ ಮತ.

ಆಗಲಿ. "ವೇದ ಪ್ರಣಿಹಿತೋ ಧರ್ಮಃ" ಎಂದೇ ಇಟ್ಟುಕೊಳ್ಳೋಣ. ಮುಂದೇನು. ಅವು ನಮಗೆ ಕೊಡತಕ್ಕ ಆದೇಶವೇನು?

ಅದು ಮೊದಲು ನೀಡುವ ಆಶ್ವಾಸನೆ ಹೀಗದೆ.

"ಅದುಃಖಮಿತರತ್ಸರ್ವಂ ಜೀವಾ ಏವತು ದುಖಿಃನಃ।
ತೇಷಾಂ ದುಖಃ ಪ್ರಹಾಣಾಯ ಶ್ರುತಿರೇಷಾ ಪ್ರವರ್ತತೇ॥"

ಈಶ, ಜೀವ ಮತ್ತು ಪ್ರಕೃತಿ ಈ ಮೂರರಲ್ಲಿ, ಈಶ ಮತ್ತು ಪ್ರಕೃತಿ (ಜಡ) ಇವು ದುಖಃರಹಿತವಾದವುಗಳು. ಜೀವರಾಶಿಯೊಂದೇ ದುಃಖಕ್ಕೆ ಸಿಕ್ಕಿದೆ. ಈ ಜೀವರಾಶಿಗಳಿಗೆ ಬಂದ ದುಃಖವನ್ನು ನಿವಾರಣೆ ಮಾಡುವದೇ ಶ್ರುತಿಗಳ ಉದ್ದೇಶ.

ಮಾನವನ ಉಧೃತಿಗಾಗಿ ಧರ್ಮಸ್ವರೂಪವನ್ನು ತಿಳಿಸಿಕೊಡತಕ್ಕ ಕೆಲವು ಶುತಿ ಮತ್ತು ಸ್ಮೃತಿವಾಕ್ಯಗಳು ಈ ಕೆಳಗಿನಂತೆ ಇವೆಃ-

(i) "ಧರ್ಮೋ ವಿಶ್ವಸ್ಯ ಜಗತಃ। ಪ್ರತಿಷ್ಠಾ ಲೋಕೇ ಧರ್ಮಿಷ್ಠ ಪ್ರಜಾ ಉಪಸರ್ಪಂತಿ। ಧರ್ಮೇಣ ಪಾಪ ಮಪನುದತಿ।
ಧರ್ಮೇ ಸರ್ವಂ ಪ್ರತಿಷ್ಠಿತಂ। ತಸ್ಮಾತ್ ಧರ್ಮಂ
ಪರಮಂ ವದಂತಿ॥ " (ನಾರಾಯಣೋಪನಿಷತ್)

ಜಗತ್ತಿನಲ್ಲಿ ಧರ್ಮವು ಸರ್ವತೋ ಶ್ರೇಷ್ಠವಾದದ್ದು. ಧರ್ಮಿಷ್ಠನಾದ ಮಾನವನು ಜಗತ್ತಿನಲ್ಲಿ ಒಂದು ವಿಶಿಷ್ಠ ಗೌರವಸ್ಥಾನವನ್ನು ಸಂಪಾದಿಸುವದಲ್ಲದೇ ಅವನು ಪೂಜ್ಯ ನೆನಿಸುತ್ತಾನೆ. ವಿಧ್ಯುಕ್ತ ಧರ್ಮಾನುಷ್ಠಾನದಿಂದ ಪಾಪಗಳನ್ನು ಕಳೆದು ಕೊಳ್ಳಬಹುದು. ಧರ್ಮಾಚರಣೆಯಲ್ಲಿಯೇ ಎಲ್ಲವೂ ಅಡಕವಾಗಿದೆ. ಆದ್ದರಿಂದ ಧರ್ಮವನ್ನು ಸರ್ವಶ್ರೇಷ್ಠವೆಂದು ಜ್ಞಾನಿಗಳು ಹೇಳುತ್ತಾರೆ.

**(ii)** "ಓಂ ಅಥಾತೋ ಬ್ರಹ್ಮ ಜಿಜ್ಞಾಸಾ ಓಂ".

ಅಧಿಕಾರಾನಂತರ್ಯದಲ್ಲಿ, ಮೋಕ್ಷವನ್ನು ಹೊಂದಲು ಬ್ರಹ್ಮ ವಿಷಯಕ ಶ್ರವಣ ಮಾನನ ನಿದಿಧ್ಯಾನಾದಿಗಳನ್ನು ಮಾಡಬೇಕು

**(iii)** "ಆತ್ಮಾರೇ ದ್ರಷ್ಟವ್ಯೋ ಶ್ರೋತವ್ಯೋ ಮಂತವ್ಯೋ ನಿದಿಧ್ಯಾಸಿತವ್ಯಃ" (ಬೃ.ಉ)

ಎಲವೋ ಜನನ ಮರಣ ಪ್ರವಾಹ ಸಂಸಾರರೂಪದಲ್ಲಿ ಸಿಕ್ಕ ಬದ್ಧರಾದ ಜೀವರುಗಳಿರಾ, ಒಂದು ವೇಳೆ ನಿಮಗೆ ಈ ಸಂಸಾರ ಬಂಧನದಿಂದ ಪಾರಾಗಬೇಕೆಂಬ ಅಭಿಲಾಷೆ ಇರುವದಾದರೆ ಪರಮಾತ್ಮನನ್ನು ಅಪರೋಕ್ಷೀಕರಿಸಿಕೊಳ್ಳಬೇಕು. ಯಾಕೆಂದರೆ ಆತನೇ ಮೋಕ್ಷದಾತ. ಪರಮಾತ್ಮನನ್ನು ಒಂದು ವೇಳೆ ನೋಡಲು ಅಭಿಲಾಷೆ ಪಡುವದಾದರೆ ಆಗ ಬ್ರಹ್ಮ (ವಿಷ್ಣು) ವಿಷಯಕ ಶ್ರವಣ, ಮನನ ನಿದಿಧ್ಯಾಸನಾದಿಗಳನ್ನು ಮಾಡಬೇಕು.

ಶ್ರೇಯಃಸಾಧನಗಳಾದ ತೈತ್ತರೀಯ ಉಪನಿಷತ್ತಿನ ವಾಕ್ಯಗಳುಃ

**(iv)** "ಸತ್ಯಂವದ, ಧರ್ಮಂಚರ, ಸ್ವಾಧ್ಯಾಯ ಪ್ರವಚನೇ ಚ...."

ಸತ್ಯವನ್ನು ಮಾತನಾಡಬೇಕು. ವೇದವಿಹಿತ ಧರ್ಮಗಳನ್ನು ಆಚರಣೆಯಲ್ಲಿಡಬೇಕು, ವೇದಾಧ್ಯಯನವನ್ನು ಮಾಡಬೇಕು. ಇತ್ಯಾದಿ.

**(v)** "ಅಹರಹಃ ಸಂಧ್ಯಾ ಮುಪಾಸೀತ ।
ಪಾತರುತ್ಥಾಯ ಸಂಧ್ಯಾಮುಪಾಸೀತ ।
ಯಃ ಸಂಧ್ಯಾಮುಪಾಸತೇ ತಸ್ಯೈವ ಸಮುಪಾಸತೇ॥"
ಎಂಬದು ವೇದಗಳ ಆದೇಶ

ಪ್ರತಿದಿನವೂ ಸಂಧ್ಯಾಕಾಲದಲ್ಲಿ ಸಂಧ್ಯಾವಂದನೆಯನ್ನು ಆಚರಿಸಬೇಕು. ಪ್ರಾತಃ ಕಾಲದಲ್ಲಿ ಪ್ರಾಥಮಿಕ ನಿತ್ಯ ಅನುಷ್ಠಾನ ಸಂಧ್ಯಾ,

ಯಾವ ಅಧಿಕಾರಿಯು ಸಂಧ್ಯೋಪಾಸನೆ ಮಾಡುತ್ತಾನೋ ಅವನು ಉತ್ತಮ ಉಪಾಸನೆ ಮಾಡಿದವನು.

(vi) "ಯ ಇದಂ ಸಾಯಂ ಪ್ರಾತರಧೀಯಾನೋ....
ಬ್ರಹ್ಮವಾನ್‌ಭವತಿ" ।

ಈ ರೀತಿಯ ವಾಕ್ಯಗಳನ್ನು ಅನೇಕ ಉಪನಿಷತ್‌ಗಳಲ್ಲಿ ಕಾಣಬಹುದು. ಅರ್ಥಸಹಿತ ಉಪನಿಷತ್ ಪಠನಾದಿಗಳನ್ನು ಮಾಡುವವನೂ ಸಹ ಬ್ರಹ್ಮಜ್ಞಾನಿ ಬ್ರಹ್ಮದರ್ಶಿ – ಅಪರೋಕ್ಷ ಜ್ಞಾನಿಯಾಗುವನೆಂದು ಫಲಶ್ರುತಿ.

(vii) "ಏಷ ಪಂಥಾ ಏತತ್ ಕರ್ಮ।" (ಐತರೇಯ ಉಪನಿಷತ್)

ಇದು ಮುಮುಕ್ಷುಗಳು ಆಚರಿಸಿದ ಮತ್ತು ಭಗವಂತನನ್ನರಸಲು ಹೋಗತಕ್ಕ ಮಾರ್ಗ. ಇವುಗಳು ಮುಮುಕ್ಷುಗಳು ಆಚರಿಸಿದ ಮತ್ತು ಆಚರಿಸತಕ್ಕ ಕರ್ಮಗಳು.

(viii) "ಓಮಿತ್ಯೇಕಾಕ್ಷರ ಮುದ್ಗೀಥಮುಪಾಸೀತ"। (ಛಾಂದೋಗ್ಯ ಉಪನಿಷತ್)

"ಓಂ" ಎಂಬ ಏಕಾಕ್ಷರ ಮಂತ್ರದಿಂದ ಬ್ರಹ್ಮೋಪಾಸನೆ ಮಾಡಬೇಕು. ಹೀಗೆ ವೇದವು ಅನೇಕ ವಿದ್ಯೆ ಅವಾಂತರ ವಿದ್ಯೆಗಳಿಂದ ಕೂಡಿದೆ. ಯಾವದನ್ನು ಯಾರು ಉಪಾಸನೆ ಮಾಡಬೇಕು ಎಂಬದನ್ನು ಆಯಾಗುರುಗಳು ತಮ್ಮ ತಮ್ಮ ಶಿಷ್ಯರಿಗೆ ಬೋಧೆಮಾಡಬೇಕು.

ಈ ವಿಷಯದಲ್ಲಿ ಕೆಲವು ಸ್ಮೃತಿ ವಾಕ್ಯಗಳು ಹೀಗೆ ಇವೆ.–

(i) "ಶ್ರವಣಂ ಮನನಂ ಚೈವ ಧ್ಯಾನಂ ಭಕ್ತಿಸ್ತಥೈವಚ ।
ಕರ್ತವ್ಯಮೇವ ಮನುಜೈಃ ಬ್ರಹ್ಮದರ್ಶನಮಿಚ್ಛುಭಿಃ॥"

ಯಾವ ಅಧಿಕಾರಿ ಮಾನವನು ಬ್ರಹ್ಮದರ್ಶನಕ್ಕಾಗಿ ಅಭಿಲಾಷೆಪಡುತ್ತಾನೋ ಅವನು ಶ್ರವಣ, ಮನನ, ನಿದಿಧ್ಯಾಸನಾದಿ ಗಳನ್ನು ಭಕ್ತಿಯಿಂದ ಮಾಡಬೇಕು.

(II) "ಚಾತುರ್ವರ್ಣ್ಯಂ ಮಯಾಸೃಷ್ಟಂ ಗುಣಕರ್ಮ ವಿಭಾಗಶಃ"। ಗೀತಾ

ಗುಣಕರ್ಮ ವಿಭಾಗದಿಂದ ನಾಲ್ಕು ವರ್ಣಗಳು ಪರಮಾತ್ಮನಿಂದ ಸೃಷ್ಟಿಸಲ್ಪಟ್ಟಿವೆ. ಎಂದು ಶ್ರೀಕೃಷ್ಣನ ವಚನ.

(iii) "ಸ್ವೇ ಸ್ವೇ ಕರ್ಮಣ್ಯಭಿರತಃ ಸಂಸಿದ್ಧಿಂ ಲಭತೇನರಃ"। ಗೀತಾ।
"ಸ್ವಕರ್ಮಣಾ ತಮಭ್ಯರ್ಚ ಸಿದ್ಧಿಂವಿಂದತಿ" ಮಾನವಃ ॥ ಗೀತಾ।

ಅಧಿಕಾರಿಗಳು ತಮ್ಮ ತಮ್ಮ ವರ್ಣಾಶ್ರಮೋಚಿತ ಕರ್ಮಗಳನ್ನು ಮಾಡಿ ಮೋಕ್ಷವನ್ನು ಹೊಂದುತ್ತಾರೆ. ಸ್ವವರ್ಣಾಶ್ರಮೋಚಿತ ಕರ್ಮಗಳನ್ನು ಪರಮಾತ್ಮನ ಪೂಜಾತ್ವೇನ ಮಾಡಿ ಅಧಿಕಾರಿಗಳು ಮೋಕ್ಷವನ್ನು ಹೊಂದುತ್ತಾರೆ.

(iv) "ಶ್ರೇಯಾನ್‌ಸ್ವಧರ್ಮೋವಿಗುಣಃ ಪರಧರ್ಮಾತ್ಸ್ವನುಷ್ಠಿತಾತ್"। ಗೀತಾ।

ಸ್ವವರ್ಣಾಶ್ರಮೋಚಿತ ಧರ್ಮಾಚರಣೆ ಇತರರ ಧರ್ಮಾಚರಣೆಯನ್ನು ಆಚರಿಸುವದಕ್ಕಿಂತಲೂ ಶ್ರೇಯಸ್ಸನ್ನು ಕೊಡುತ್ತದೆ.

(v) "ಸ್ವಲ್ಪಮಪ್ಯಸ್ಯ ಧರ್ಮಸ್ಯ ತ್ರಾಯತೇ ಮಹತೋ ಭಯಾತ್" .
ಗೀತಾ

ಸ್ವವಿಹಿತ ಅಲ್ಪ ಧರ್ಮಾಚರಣೆಗಳೂ ಸಹ ಮಹತ್ತರ ಭಯದಿಂದ ರಕ್ಷಸುತ್ತವೆ.

(vi) "ಕೋಧರ್ಮಃ ಸರ್ವಧರ್ಮಾಣಾಂಧರ್ಮೋಧಿಕ ತಮೋಮತಃ"।
"ಏಷಮೇಸರ್ವಧರ್ಮಾಣಾಂ ಧರ್ಮೋಧಿಕ ತಮೋಮತಃ।
ಯದ್ಭಕ್ತ್ಯಾ ಪುಂಡರೀಕಾಕ್ಷಂ ಸ್ತವೈರರ್ಚೈನರಃ ಸದಾ"॥

ಸರ್ವಧರ್ಮಗಳಲ್ಲಿ ಯಾವಧರ್ಮವು ಶ್ರೇಷ್ಠ ಎಂಬ ಧರ್ಮರಾಯನ ಪ್ರಶ್ನೆಗೆ ಭೀಷ್ಮರ ಉತ್ತರ – ಯಾವನು ಪುಂಡರೀಕಾಕ್ಷನಾದ ಶ್ರೀ ವಿಷ್ಣುವನ್ನು ಸ್ತೋತ್ರಮಾಡುವನೋ ಮತ್ತು ಅರ್ಚಿಸುವನೋ ಅವನೇ ಸರ್ವೋತ್ಕೃಷ್ಟ ಧರ್ಮಪರಿಪಾಲನೆ ಮಾಡಿದವನೆಂದು ಮತ್ತು ಅದೇ ಉತ್ತಮಧರ್ಮವೆಂದು, ಭೀಷ್ಮರು ತಿಳಿಸುತ್ತಾರೆ.

(vii) "ಧರ್ಮಂತು ಸಾಕ್ಷಾತ್ ಭಗವತ್ಪ್ರಣೀತಂ"

ಜೀವರುಗಳ ಉದ್ಧಾರಕ್ಕೆ ಸರ್ವಧರ್ಮಗಳನ್ನು ಭಗವಂತನೇ ಉಪದೇಶಿಸಿದ್ದಾನೆ.

(viii) "ನೃಣಾಮಯಂ ಪರೋಧರ್ಮಃಸರ್ವೇಷಾಂ ಸಮುದಾಹೃತಃ ।
ತ್ರಿಂಶಲ್ಲಕ್ಷಣ ಸಂಯುಕ್ತಃ ಸರ್ವಾತಾ ಏನ ತುಷ್ಯತಿ"॥

ಭಾಗವತೋಕ್ತ ಮೂವತ್ತು ಭಾಗವತ ಧರ್ಮಗಳು ಪರಮಾತ್ಮನಿಗೆ ತೋಷಕರ ಮತ್ತು ಅವುಗಳ ಅನುಷ್ಠಾನದಿಂದ ಪ್ರಸನ್ನನಾಗುತ್ತಾನೆ.

ಈ ರೀತಿಯಾಗಿ ಧರ್ಮಸ್ವರೂಪವನ್ನು ಶ್ರುತಿ ಸ್ಮೃತಿಗಳಲ್ಲಿ ವರ್ಣಿಸಲಾಗಿದೆ. ಇಂಥ ಧರ್ಮವನ್ನವಲಂಬಿಸಿ ಮಾನವನುಹೇಗೆ ಉಧ್ಧೃತನಾಗುವನು ಎಂಬದನ್ನು ಮುಂದೆ ಕಾಣುವಾ.

---

# ಧರ್ಮಾಚರಣೆಯೇ – ಧರ್ಮರಕ್ಷಣೆ - ೨

ಧರ್ಮರಕ್ಷಣೆ ಎಂದರೆ ಧರ್ಮಾಚರಣೆಯೇ. ಮಾನವನ ಸ್ವವಿಹಿತ ಧರ್ಮಾಚರಣೆಯಿಂದ ಪರಮಾತ್ಮನು ಪ್ರೀತನಾಗುತ್ತಾನೆ. ಪ್ರೀತನಾದ ಶ್ರೀಹರಿಯು ಅಂಥ ಅನುಷ್ಠಾನ ಉಳ್ಳವನನ್ನು ರಕ್ಷಿಸುತ್ತಾನೆ. ಹೀಗೆ ಧರ್ಮವೂ ಧರ್ಮವಂತನೂ ರಕ್ಷಿತರಾಗುತ್ತಾರೆ.

ಧರ್ಮಸ್ವರೂಪವನ್ನು ಶ್ರುತಿಸ್ಮೃತಿಗಳು ತಿಳಿಸಿದಂತೆ ಆಚರಣೆಯ ವಿಧಾನವನ್ನೂ ಆ ಪ್ರಮಾಣಗಳೇ ನಿರ್ದೇಶನ ಮಾಡುತ್ತವೆ. ವಿಧಿಯಾವದು ನಿಷೇಧಯಾವದು ಯಾವದನ್ನು ಆಚರಿಸಬೇಕು ಯಾವದನ್ನು ಬಿಡಬೇಕು ಯಾವದು ಹರಿಗೆ ಪ್ರೀತಿಕರ ಯಾವದು ವಿರೋಧ ಈ ಎಲ್ಲ ವಿಷಯಗಳನ್ನೂ ಆ ಪ್ರಮಾಣಗಳೇ ಹೇಳುತ್ತವೆ. ಮೋಕ್ಷ – ಅದರ ಸ್ವರೂಪ ಅದನ್ನು ಹೊಂದುವ ಮಾರ್ಗ ಇದನ್ನೂ ಅವೇ ಹೇಳುತ್ತವೆ.

ಈ ಮೇಲೆ ಹೇಳಿದ ಎಲ್ಲ ಧರ್ಮಗಳೂ – ಧರ್ಮಾಚರಣೆಗಳೂ ಚೇತನರಾಶಿಗೆ ಸಂಬಂಧಪಟ್ಟದ್ದು. ಈಶಗೂ ಅಲ್ಲ. ಪ್ರಕೃತಿಗೂ ಅಲ್ಲ. ಆ ಮುಕ್ತಿಯೋಗ್ಯ ಸೃಷ್ಟರಾದ ಎಲ್ಲ ಚೇತನರೂ ಒಂದಿಲ್ಲೊಂದು ದಿನ ಮುಕ್ತರಾಗಬೇಕಾಗುತ್ತದೆ. ಇದು ಪರಮಾತ್ಮನ ಸಂಕಲ್ಪ. ಆದರೆ ಸಕಲ ಜೀವರಿಗೂ ಒಂದೇ ತರಹದ ಮುಕ್ತಿಯಾಗುವದೋ ಅಥವಾ ವೈವಿಧ್ಯತೆ ಉಂಟೋ. ಇದನ್ನು ತಿಳಿಯಬೇಕಾದರೆ ಚೇತನರಾಶಿಗಳ ಕಡೆಗೆ ಒಂದು ಸಲ ನೋಡುವಾ ಅವರವರ ಸ್ವರೂಪ ಸ್ವಭಾವಗಳ ಮೇಲೆ ಶಾಸ್ತ್ರಗಳು ವಿವರ ತಿಳಿಸುವವು. ಪರಮಾತ್ಮನು ಸೃಷ್ಟಿಗೆ ತಂದ ಜೀವರುಗಳು ಮೂರು ವಿಧ ಇದ್ದಾರೆ. ಸಾತ್ವಿಕ, ರಾಜಸ, ತಾಮಸರೆಂದು. ಇವರುಗಳನ್ನು ಇನ್ನೊಂದು ರೀತಿಯಲ್ಲಿಯೂ ಶಾಸ್ತ್ರಗಳು ವಿಭಾಗಮಾಡಿವೆ. ಮುಕ್ತಿಯೋಗ್ಯರು, ನಿತ್ಯಸಂಸಾರಿಗಳು ಮತ್ತು ತಮೋಯೋಗ್ಯರು.

ಮುಕ್ತಿಯೋಗ್ಯರು ಐದು ಪ್ರಕಾರ ಇದ್ದಾರೆ.

ದೇವತೆಗಳು, ಋಷಿಗಳು, ಪಿತೃಗಳು, ಚಕ್ರವರ್ತಿಗಳು, ಮನುಷ್ಯರು (ಮನುಷ್ಯೋತ್ತಮರು).

ನಿತ್ಯಸಂಸಾರಿಗಳು – ಮನುಷ್ಯಮಧ್ಯಮರು.

ತಮೋಯೋಗ್ಯರು – ಇವರಲ್ಲಿ ನಾಲ್ಕು ವಿಧ. ದೈತ್ಯರು, ರಾಕ್ಷಸರು, ಪಿಶಾಚರು, ಮನುಷ್ಯಾಧಮರು.

ಮುಕ್ತಿಯೋಗ್ಯರು – ಭಗವದಾರಾಧಕರು, ಭಗವಂತನಲ್ಲಿ ಭಕ್ತಿಯುಳ್ಳವರು, ಉತ್ತಮ, ಮಧ್ಯಮ, ಅಧಮಾರಿಕಾರಿಗಳೆಂದೂ ಜ್ಞಾನ, ಭಕ್ತಿ, ಕರ್ಮ ಯೋಗಿಗಳೆಂದೂ ಇವರಲ್ಲಿ ಅವರವರ ಯೋಗ್ಯತಾನುಸಾರವಾಗಿ ಧರ್ಮಕರ್ಮಾನುಷ್ಠಾನಗಳುಂಟು. ಇವರಿಗೆ ಮುಕ್ತಿಯಲ್ಲಿ ಕೇವಲ ಆನಂದ ಅನುಭವ.

ನಿತ್ಯಸಂಸಾರಿಗಳು – ಭಗವಂತನಲ್ಲಿ ಮತ್ತು ಧರ್ಮದಲ್ಲಿ ಉದಾಸೀನ ಬುದ್ಧಿಯುಳ್ಳವರು. ಧರ್ಮಕರ್ಮಾನುಷ್ಠಾನಗಳಲ್ಲಿ ಆಸಕ್ತಿ ಇಲ್ಲದವರು. ಮುಕ್ತಿಯಲ್ಲಿಯೂ ಸಹ ಇವರಿಗೆ ಸುಖದುಃಖ ಮಿಶ್ರ, ಸಂಸಾರದಂತೆ.

ತಮೋಯೋಗ್ಯರು – ಇವರು ಭಗವಂತನಲ್ಲಿ, ಭಗವದ್ಧರ್ಮಗಳಲ್ಲಿ ಭಗವದ್ಭಕ್ತರಲ್ಲಿ ದ್ವೇಷಿಗಳು. ಇವರಿಗೆ ಮುಕ್ತಿ ಕೇವಲ ದುಃಖರೂಪ.

ಭಗವಂತನನ್ನು ಪ್ರತಿಪಾದಿಸುವ ಶಾಸ್ತ್ರಗಳಲ್ಲಿ ವಿವರಿಸಿದ ಪ್ರಕಾರ ಮುಕ್ತಿಯೋಗ್ಯರಲ್ಲಿ ದೇವತೆಗಳು ಉತ್ತಮಾಧಿಕಾರಿಗಳು. ಅದರಲ್ಲಿಯೂ ಬ್ರಹ್ಮವಾಯುಗಳು ಉತ್ತಮೋತ್ತಮ ಅಧಿಕಾರಿಗಳು. "ಓಂ ಇಯದಾಮನನಾತ್ ಓಂ" ಎಂಬ ಸೂತ್ರದಿಂದ.. ಮನಷ್ಯೋತ್ತಮರು ಕೊನೆಯ ಅಧಿಕಾರಿಗಳು.

ಪ್ರಕೃತ ನಾವು ನಿತ್ಯಸಂಸಾರಿಗಳನ್ನೂ ಮತ್ತು ತಮೋಯೋಗ್ಯರನ್ನೂ ಬಿಟ್ಟುಬಿಡೋಣ. ಅವರ ಗೊಡವೆಗೆ ಹೋದರೆ ನಮ್ಮ ಕಾಲವೂ ವ್ಯರ್ಥವಾಗುವದು.

ಮನುಷ್ಯೋತ್ತಮರಗಿಂತ ಉತ್ತಮರ ವಿಚಾರವೂ ಬೇಡ. ಯಾಕೆಂದರೆ ಭಗವದಾರಾಧನೆ ಮಾಡಿ ಅವರು ಹೇಗಾದರೂ ಮುಕ್ತಿಯನ್ನು ಹೊಂದುವರು.

ಆದ್ದರಿಂದ ಮನಷ್ಯೋತ್ತಮರಗಿಂತಲೂ ಉತ್ತಮರನ್ನು ಮತ್ತು ಅಧಮರನ್ನು ಬಿಟ್ಟು, ಮತ್ತು ನಾವು ಮನಷ್ಯೋತ್ತಮರ ಗುಂಪಿಗೆ ಸೇರಿದ್ದೇವೆಂದು ತಿಳಿದು, ಅವರು ಮುಕ್ತಿಹೊಂದಲು ಶಾಸ್ತ್ರರೀತ್ಯಾ ಯಾವಧರ್ಮಗಳು ವಿಹಿತವಾಗಿವೆ. ಆಚರಣೆ ಅನುಷ್ಠನಾಗಳೇನು ಎಂದು ಸ್ವಲ್ಪವಿಚಾರಗಳನ್ನು ಸಂಗ್ರಹಿಸುವಾ.

ವಿಹಿತ ನಿಯತ ಸಾಮಾನ್ಯಧರ್ಮಗಳು:-

"ವೇದ ಪ್ರಣಿಹಿತೋ ಧರ್ಮಃ"

ಎಂಬದು ನಿಯಮಸಾಮಾನ್ಯ.

'ಅಹರಹಃ ಸಂಧ್ಯಾಮುಪಾಸೀತ"

ತ್ರಿಕಾಲ ಸಂಧ್ಯಾ ಅಥವಾ ಗಾಯತ್ರೀ ಅನುಷ್ಠಾನ - ಬ್ರಹ್ಮಚಾರಿ, ಗೃಹಸ್ಥ, ವಾನಪ್ರಸ್ಥ, ಸನ್ಯಾಸಿ ಎಲ್ಲರಿಗೂ ಅನ್ವಯಿಸುತ್ತದೆ.

"ಓಂ ಆನಂದಾದಯಃ (ಪ್ರಧಾನಸ್ಯ ಓಂ) -

ಮೋಕ್ಷಾಪೇಕ್ಷಿಗಳು ಸತ್, ಚಿತ್, ಆನಂದ ಮತ್ತು ಆತ್ಮ ಎಂದು ಚತುರ್ಗುಣೋಪಾಸನೆ ಅನುಷ್ಠಾನ ಮಾಡಬೇಕು.

"ಓಂ ಅಥಾತೋ ಬ್ರಹ್ಮ ಜಿಜ್ಞಾಸಾ ಓಂ"

ಅಧಿಕಾರಿಗಳು ಮೋಕ್ಷವನ್ನು ಹೊಂದಲು ಬ್ರಹ್ಮ (ವಿಷ್ಣು) ವಿಷಯಕ ಶ್ರವಣಮನನ ನಿದಿಧ್ಯಾನಾದಿಗಳನ್ನು ಆಚರಿಸಬೇಕು.

"ಪ್ರವಣಂ ಕುರು ಮಾನಸವಿಶಪದೇ"

ಪ್ರವಣ ಎಂದರೆ ಶ್ರೀಹರಿಗೆ ಪ್ರೀತಿಕರವಾದ ಸ್ವವಿಹಿತ ಧರ್ಮ ಕರ್ಮಕಲಾಪಗಳನ್ನು ಆಚರಿಸುವದು. ಅಧ್ಯಯನ, ಅಧ್ಯಾಪನ, ಜಪ, ತಪ, ಹೋಮ, ಸತ್ಯ, ಪೂಜಾ, ಅಹಿಂಸಾ, ಭಗವದ್ಭಕ್ತಿ, ಯಮ,

ನಿಯಮ, ಶಮ, ದಮ, ಶ್ರವಣ, ಮನನ, ಧ್ಯಾನಾದಿ, ದಾನ, ಯಾತ್ರಾ, ನಿಯತ ಉಪೋಷಣೆ, ಗುರುಭಕ್ತಿ ಪರೋಪಕಾರ ಇತ್ಯಾದಿ.

ಮುಮುಕ್ಷುಸ್ತ್ರೀಧರ್ಮ

ಸ್ತೋತ್ರ, ಸ್ತವನ, ಪಾಲನ, ಪೋಷಣ, ಪಾತಿವ್ರತ್ಯ, ಹರಿಭಕ್ತಿ, ಶ್ರವಣ, ಮನನ, ನಿದಿಧ್ಯಾನಾದಿಗಳು, ಸ್ವವರ್ಣಾಶ್ರಮೋಚಿತ ವೃತ್ತಿ ನಿಯಮಾದಿಗಳು ಇತ್ಯಾದಿ

ಮುಮುಕ್ಷು ಪುರುಷಧರ್ಮ

ವರ್ಣಾಶ್ರಮೋಚಿತಧರ್ಮ ಕರ್ಮಗಳು, ಶ್ರವಣಮನನಾದಿಗಳು, ಭಗವದ್ಭಕ್ತಿ, ಭಗವತ್ಪೂಜೆ, ಸ್ವವಿಹಿತ ವೃತ್ತ್ಯಾಭಕ್ತ್ಯಾಭಗವದಾರಾಧನೆ. ಸತ್ಯ, ಧರ್ಮ, ನೀತಿ, ಪರೋಪಕಾರ ದಾನ, ಯಾತ್ರೆಗಳು, ಇತ್ಯಾದಿ.

ಸಾಧನಾನುಷ್ಠಾನ ಸರಣಿ :

ಭಾರತಂ ಸರ್ವಶಾಸ್ತ್ರೇಷು ತತ್ರ ನಾಮಸಹಸ್ರಕಂ ।
ವೈಷ್ಣವಂ ಕೃಷ್ಣಗೀತಾಚ ತಜ್ಞ್ಜ್ಞಾನಾನ್ಮುಚ್ಯತೇಂಜಸಾ ॥
ಶಾಸ್ತ್ರೇಷು ಭಾರತಂ ಸಾರಂ ತತ್ರನಾಮಸಹಸ್ರಕಂ ।
ವೈಷ್ಣವಂ ಕೃಷ್ಣಗೀತಾ ಚ ಜ್ಞೆಯಂ ಪಾಠ್ಯಂ ಚ ಸರ್ವದಾ ॥

ಶಾಸ್ತ್ರಗಳಲ್ಲಿ ಭಾರತವು ಸಾರರೂಪ. ಅದರಲ್ಲಿಯೂ ಕೃಷ್ಣಗೀತಾ, ಮತ್ತು ವಿಷ್ಣು ಸಹಸ್ರನಾಮಗಳು ಸಾರತಮ. ಅವುಗಳನ್ನು ತಿಳಿಯಬೇಕು ಮತ್ತು ಪಠನ ಮಾಡಬೆಕು. ಜ್ಞಾನ ಪಠನಾದಿಗಳಿಂದ ಮುಕ್ತಿಯು ಲಭಿಸುತ್ತದೆ.

"ನಿಯತಂ ಕುರು ಕರ್ಮತ್ವಂ ಕರ್ಮಜ್ಯಾಯೋಹ್ಯಕರ್ಮಣಃ"

ವರ್ಣಾಶ್ರಮೋಚಿತ ನಿಯತಕರ್ಮಗಳನ್ನು ಮಾಡಬೇಕು ಯಾಕೆಂದರೆ ನಿಯತ ಕರ್ಮಾನುಷ್ಠಾನವು ಮಾಡದಿರುವದಕ್ಕಿಂತ ಅತ್ಯಂತ ಶ್ರೇಯಸ್ಕರವು.

"ಕರ್ಮಣೋಹ್ಯಪಿ ಬೊಧ್ದವ್ಯಂ ಬೊಧ್ದವ್ಯಂಚ ವಿಕರ್ಮಣಃ ।
ಅಕರ್ಮಣಶ್ಚಬೋದ್ಧವ್ಯಂ ಗಹನಾಕರ್ಮಣೋಗತಿಃ::॥

ವಿಧ್ಯುಕ್ತ ಕರ್ಮಗಳನ್ನು ತಿಳಿಯಬೇಕು. ವಿರೋಧಕರ್ಮಗಳಾವವು ಎಂಬದನ್ನು ತಿಳಿಯಬೇಕು. ನಿಷೇಧ ಕರ್ಮಗಳಾವವು ಎಂದು ತಿಳಿಯಬೇಕು. ಸತ್ಕರ್ಮಗಳನ್ನು ಮಾಡಿ ತದ್ವಾರಾಭಗವಂತನನ್ನು ಪ್ರೀತಿಪಡಿಸುವ ಮಾರ್ಗವು ಸ್ವಲ್ಪಗಹನವಾಗಿಯೇ ಇದೆ.

"ಕರ್ಮಣ್ಯಕರ್ಮಯಃ ಪಶ್ಯೇದಕರ್ಮಣಿಚ ಕರ್ಮಯಃ ।
ಸ ಬುದ್ಧಿಮಾನ್ ಮನುಷ್ಯೇಷು....॥"

ಮಾಡತಕ್ಕ ಕರ್ಮಾದಿಗಳಲ್ಲಿ ಯಾವನು ಸ್ವಾತಂತ್ರ್ಯವನ್ನು ವಹಿಸಿಕೊಳ್ಳುವದಿಲ್ಲವೋ, ತಾನು ಕರ್ಮ ಮಾಡದಿರುವಾಗ ಅಂದರೆ ಸುಪ್ತಾವಸ್ಥೆಯಲ್ಲಿ ಆಗತಕ್ಕ ಕೆಲಸಗಳು ಪರಮಾತ್ಮನಿಂದಾಗುವವು ಎಂದು ತಿಳಿಯತ್ತಾನೋ ಅವನು ಮನುಷ್ಯರಲ್ಲಿ ಬುದ್ಧಿವಂತನು.

"ನೇಹಾಭಿ ಕ್ರಮನಾಶೋಸ್ತಿ ಪ್ರತ್ಯವಾಯೋ ನ ವಿದ್ಯತೆ ।
ಸ್ವಲ್ಪಮಪ್ಯಸ್ಯಧರ್ಮಸ್ಯ ತ್ರಾಯತೇ ಮಹತೋ ಭಯಾತ್"॥

ನಿಷ್ಕಾಮನಾದಿಂದ ಪ್ರಾರಂಭಮಾಡಿದ ಕೆಲಸಗಳಿಗೂ ಕೂಡ (ಅಂದರೆ ಮುಗಿಯಲೇ ಬೇಕೆಂಬ ನಿಯಮವಿಲ್ಲ) ಭಗವಂತನು ಫಲಗಳನ್ನು ಕೊಡುತ್ತಾನೆ. ನಿಷ್ಫಲವಾಗುವದಿಲ್ಲ. ಇಂಥ ಅಲ್ಪಧರ್ಮಾನುಷ್ಠಾನಗಳೂ ಸಹ ನರಕಾದ್ಯನರ್ಥ ಭಯಗಳಿಂದ ರಕ್ಷಣೆ ಮಾಡುತ್ತವೆ.

"ಪ್ರಾರಂಭ ಮಾತ್ರ ಮಿಚ್ಛಾವಾ ವಿಷ್ಣುಧರ್ಮೋನ ನಿಷ್ಫಲಾ"॥

ವಿಷ್ಣು ಪ್ರೀತಕರ ಧರ್ಮಗಳು ಕೇವಲ ಪ್ರಾರಂಬಮಾಡಿದಾಗ್ಯೂ ನಿಷ್ಫಲಗಳಲ್ಲ.

"ಯತತೋಪಿಹರೇಃ ಪದಸಂಸ್ಮರಣೇ ಸಕಲಂ ಹಿ ಅಘುವಾಶುಲಯಂ ವ್ರಜತಿ"॥ (ದ್ವಾದಶಸ್ತೋತ್ರ).

ಹರಿ ಪಾದಸ್ಮರಣೆಯನ್ನು ಮಾಡಲು ಪ್ರಯತ್ನ ಮಾತ್ರದಿಂದ ಸಕಲ ಪಾಪ ಪರಿಹಾರ ಶ್ರದ್ಧೆಯಿಂದ ಮಾಡಿದರಂತೂ ಮುಕ್ತಿ ನಿಶ್ಚಯ.

"ಕುರ್ವನ್ನೇವೇಹ ಕರ್ಮಾಣಿ ಜಿಜೀವಿಶೇತ್ ಶತಗುಂಸಮಾಃ"। (ಈ.ಉ)
"ಕುರುಭುಂಕ್ಷ್ವಚ ಕರ್ಮನಿಜಂನಿಯತಂ ಹರಿಪಾದವಿನಮ್ರಧಿಯಾ
ಸತತಃ"॥ (ದ್ವಾದಶಸ್ತೋತ್ರ)

ಈಶಾವಸ್ಯೋಪನಿಷತ್ತಿಗೆ ದ್ವಾದಶಸ್ತೋತ್ರದಲ್ಲಿ ವ್ಯಾಖ್ಯಾನ. ಸ್ವವಿಹಿತ ನಿಯತಕರ್ಮಗಳನ್ನು ಹರಿ ಸ್ಮರಣೆ ಪೂರ್ವಕ ಪೂಜಾತ್ವೇನ ಮಾಡು ಮತ್ತು ಹರಿಕೊಟ್ಟದ್ದನ್ನು ಭೋಗಿಸು ಅವನಸ್ಮರಣೆ ಸಹಿತ.

ತ್ರಿವಿಧಾಭವತಿಶ್ರದ್ಧಾ ದೇಹಿನಾಂ ಸಾಸ್ವಭಾವಜಾ ।
ಸಾತ್ವಿಕೀರಾಜಸೀಚೈವ ತಾಮಸೀ ಚೇತಿ ಮಾಂಶೃಣು ॥ಗೀತಾ॥

ಜೀವರುಗಳ ಶ್ರದ್ಧಾದಿಗಳು ಸ್ವಾಭಾವಿಕವಾಗಿಯೇ ಸಾತ್ವಿಕ, ರಾಜಸ ಮತ್ತು ತಾಮಸವೆಂದು ಮೂರು ಪ್ರಕಾರ ಇವೆ.

ಇವರಲ್ಲಿ ಸಾತ್ವಿಕರು ಮುಕ್ತಿಯೋಗ್ಯರು. ಅವರ ಬುದ್ಧಿಜ್ಞಾನ ಕರ್ಮಾದಿಗಳು ಹೇಗಿರಬೇಕೆಂಬ ಕೃಷ್ಣನ ಆಶಯವನ್ನು, ಅವನ ವಾಕ್ಯಗಳಿಂದಲೇ ತಿಳಿಯುವ.

"ಮುಕ್ತಸಂಗೋ ಅನಹಂವಾದೀ ಧೃತ್ಯುತ್ಸಾಹ ವಿವರ್ಜಿತಃ ।
ಸಿದ್ಧ್ಯಸಿದ್ಧ್ಯೋರ್ನಿರ್ವಿಕಾರಃ ಕರ್ತಾಸಾತ್ವಿಕ ಉಚ್ಯತೇ ॥ಗೀತಾ॥

ಫಲಸಂಗ ರಹಿತನಾಗಿ (devoid of emotions) ಸಿದ್ಧಿ ಅಸಿದ್ಧಿಗಳಲ್ಲಿ ವಿಕಾರರಹಿತನಾಗಿ ಇರುವವನು ಸಾತ್ವಿಕಕರ್ತಾ ಎನಿಸಿಕೊಳ್ಳುತ್ತಾನೆ.

"ಪ್ರವೃತ್ತಿಂಚ ನಿವೃತ್ತಿಂಚ ಕಾರ್ಯಾಕಾಯೆ ೯ ಭಯಾಭಯೋ।
ಬಂಧಮೋಕ್ಷಂಚ ಯೋ ವೇತ್ತಿ ಬುದ್ಧಿಃ ಸಾಪಾರ್ಥಸಾತ್ವಿತೀ॥"

ಪ್ರವೃತ್ತಿಧರ್ಮಯಾವದು ನಿವೃತ್ತಿಧರ್ಮಯಾವದು, ಕಾರ್ಯ ಯಾವದು, ಅಕಾರ್ಯಯಾವದು, ಯಾವದಕ್ಕೆ ಭಯಪಡಬೇಕು ಯಾವದರಲ್ಲಿ ಭಯಪಡಬಾರದು, ಯಾವದು ಬಂಧಕ್ಕೆ ಕಾರಣ ಯಾವಕರ್ಮ ಮೋಕ್ಷಕ್ಕೆ ಕಾರಣ ಇವುಗಳ ವಿವೇಚನೆ ಸಾತ್ವಿಕ ಬುದ್ಧಿ ಎನಿಸಿಕೊಳ್ಳುತ್ತದೆ.

"ಶಮೋದಮಃ ತಪಃಶೌಚಂ ಕ್ಷಾಂತಿರಾರ್ಜವಮೇವಚ ।
ಜ್ಞಾನಂ ವಿಜ್ಞಾನಮಾಸ್ತಿಕ್ಯಂ ಬ್ರಹ್ಮಕರ್ಮಸ್ವಭಾವಜಂ ॥"

ಪರಮಾತ್ಮನಲ್ಲಿ ಬುದ್ಧಿ, ಇಂದ್ರಿಯನಿಗ್ರಹ, ತಪಸ್ಸು, ಶುಚಿ, ಕ್ರೋಧರಾಹಿತ್ಯ, ಮನೋವಾಕ್‌ಕಾರ್ಯದಲ್ಲಿ ಏಕವಿರುವದು, ಪರೋಕ್ಷನಿಶ್ಚಯ ಅಪರೋಕ್ಷ ಜ್ಞಾನ, ಆಸ್ತಿಕ್ಯ ಬುದ್ಧಿ ಇವು ಬ್ರಾಹ್ಮಣನ ಸ್ವಾಭಾವಿಕ ಕರ್ಮಗಳು.

ಇದೇ ರೀತಿ ಸಾತ್ವಿಕ ಜೀವರ ಆಹಾರ, ಯಜ್ಞ, ತಪಸ್ಸು, ಧ್ಯಾನ ಇತ್ಯಾದಿಗಳು ರಾಜಸ ತಾಮಸರಕ್ಕಿಂತ ಅತ್ಯಂತ ಭಿನ್ನವಾಗಿವೆ. ಸಾತ್ವಿಕರ ಕರ್ಮಗಳು ಪರಮಾತ್ಮನಿಗೆ ಪ್ರಿಯ, ಯಾಕೆಂದರೆ ಅವರ ಸಕಲಕರ್ಮಗಳೂ ಪರಮಾತ್ಮನ ಪೂಜಾರೂಪವಾದವು ಮತ್ತು ಸರ್ವಕರ್ಮಗಳನ್ನು ಭಗವತ್ಪ್ರೀತಿಗಾಗಿ ಮಾಡಿ ಭಗವದರ್ಪಣೆ ಮಾಡುತ್ತಾರೆ.

ಶ್ರೀಕೃಷ್ಣನು ಭಗವದ್ಗೀತೆಯಲ್ಲಿ ತನಗೆ ಇಷ್ಟವಾದ ಜೀವರುಗಳು, ಅವರ ಸ್ವಭಾವ, ಜ್ಞಾನ, ಕರ್ಮ, ಜ್ಞಾನಿಯ ಲಕ್ಷಣ, ವಿಷಯಗಳನ್ನೂ ಮತ್ತು ತನಗೆ ಇಷ್ಟವಿಲ್ಲದ ವಿಷಯಗಳನ್ನೂ ಸ್ಪಷ್ಟವಾಗಿ ತಿಳಿಸಿದ್ದಾನೆ. ಗೀತೆಯನ್ನು ನೋಡಿದರೆ ಮುಮುಕ್ಷು ಅವಲಂಬಿಸಬೇಕಾದ ನಿಯಮಗಳು ಸ್ಪಷ್ಟವಾಗಿವೆ. ಭಾರತಾಂತರ್ಗತ ಮೋಕ್ಷಧರ್ಮೋಕ್ತ ವಿಷ್ಣುಸಹಸ್ರನಾಮದಲ್ಲಿಯೂ ಯುಧಿಷ್ಠಿರನ ಪ್ರಶ್ನೆಗೆ ಭೀಷ್ಮರು ಯಾವದು ಉತ್ತಮ ಧರ್ಮವೆಂದು ಸ್ಪಷ್ಟಪಡಿಸುತ್ತಾರೆ.

ಯುಧಿಷ್ಠಿರ ಉವಾಚ :

"ಕೋ ಧರ್ಮಃ ಸರ್ವಧರ್ಮಾಣಾಂ ಭವತಃ ಪರಮೋಮತಃ
ಕಿಂ ಜಪನ್ ಮುಚ್ಯತೇ ಜಂತುಃ ಜನ್ಮ ಸಂಸಾರ ಬಂಧನಾತ್ ॥

ಚೇತನರು ಜನ್ಮ ಮೃತ್ಯುರೂಪವಾದ ಸಂಸಾರಬಂಧವನ್ನು ಕಳೆದುಕೊಳ್ಳಲು ಅನುಸರಿಸತಕ್ಕ ಧರ್ಮಗಳಲ್ಲಿ ಉತ್ತಮೋತ್ತಮ ಧರ್ಮಯಾವದು. ಏನನ್ನು ಜಪಿಸಬೇಕು.?

ಭೀಷ್ಮ ಉವಾಚ :

"ಏಷಮೆ ಸರ್ವಧರ್ಮಾಣಾಂ ಧರ್ಮೋಧಿಕ ತಮೋಮತಃ ।
ಯದ್ಭಕ್ತ್ಯಾ ಪುಂಡರೀಕಾಕ್ಷಂ ಸ್ತವೈರರ್ಚ್ಯೆ ನ್ನರಸ್ಸದಾ॥

"ನನ್ನ ಅಭಿಪ್ರಾಯದಲ್ಲಿ ಅತ್ಯಂತ ಉತ್ತಮ ಧರ್ಮವೆಂದರೆ ಶ್ರೀ ಪುಂಡರೀಕಾಕ್ಷನ ಸ್ತವನ, ಅರ್ಚನ ಮತ್ತು ಜಪ. ಇದರಿಂದ ಬಂಧ ಬಿಡುಗಡೆ ಹೊಂದಿ ಮುಕ್ತಿ."

ತೈತ್ತರೀಯ ಉಪನಿಷತ್‌ನಲ್ಲಿಯೂ – ಶಿಕ್ಷಾವಲ್ಲಿಯಲ್ಲಿ ವೇದ ಮನೂಚ್ಯಾಚಾರ್ಯೋ ಅಂತೇವಾಸಿನಮನುಶಾಸ್ತಿ -

"ಸತ್ಯಂವದ, ಧರ್ಮಂಚರ, ಸ್ವಾಧ್ಯಾಯಾನ್ಮಾಪ್ರಮದ
.....ಸ್ವಾಧ್ಯಾಯ ಪ್ರವಚನಾಭ್ಯಾಂ ನ ಪ್ರಮದಿತವ್ಯಂ"

ವೇದ ಪಾಠಕಗುರುಗಳು ತಮ್ಮ ಶಿಷ್ಯರನ್ನುದ್ದೇಶಿಸಿ ಅಧ್ಯಯನದ ಆದಿಯಲ್ಲಿ ಅಂತ್ಯದಲ್ಲಿ ಮುಮುಕ್ಷುವಿಗೆ ಅನುಕೂಲವಾದ ಕೆಲವು ಧರ್ಮಕರ್ಮಾಚರಣೆಗಳನ್ನು ಉಪದೇಶಿಸುತ್ತಾರೆ.

ಸತ್ಯವನ್ನು ಮಾತನಾಡಿರಿ. ನಿಯತ ವಿಹಿತ ಧರ್ಮಾಚರಣೆಯನ್ನು ಮಾಡಬೇಕು. ವೇದಾಧ್ಯಯನಾದಿಗಳಿಗೆ ಪ್ರಮಾದವನ್ನೆಸಗಬೇಡಿರಿ. ಆಚಾರ್ಯರಿಗೆ ಪ್ರಿಯವಾದ ಧನವನ್ನು ಯೋಗ್ಯರೀತಿಯಲ್ಲಿ ಸಂಪಾದಿಸಿ ಕೊಡಬೇಕು. ಅಧ್ಯಯನ ಪರಂಪರೆ – ಶಿಷ್ಯಪರಂಪರೆ – ಪ್ರಜಾಪರಂಪರೆ ವಿಚ್ಛೇದವಾಗದಂತೆ ಜಾಗರೂಕತೆ ವಹಿಸಬೇಕು. ಸತ್ಯ ಆಚಾರಣೆಗೆ ಪ್ರಮಾದವಾಗದಂತೆ ನಡೆಯಬೇಕು. ಧರ್ಮಾಚರಣೆಗೆ ಪ್ರಮಾದವಾಗದಂತೆ ನಡೆದುಕೊಳ್ಳಬೇಕು. ಕುಶಲ ಮಾತುಗಳನ್ನಾಡಬೇಕು. ಪ್ರಮಾದಬಾರದಂತೆ ನಡೆದುಕೊಳ್ಳಬೇಕು. (Refined culture, atticates and manners should not be violated) ವೇದಾಧ್ಯಯನ ಅಧ್ಯಾಪನಗಳನ್ನು ಮಾಡುತ್ತಲೇ ಇರಬೇಕು. ಪ್ರಮಾದವಾಗದಂತೆ ನೋಡಿಕೊಳ್ಳಬೇಕು.

"ದೇವಪಿತೃಕಾರ್ಯಾಭ್ಯಾಂ ನ ಪ್ರಮದಿತವ್ಯಂ. ಮಾತೃದೇವೋಭವ,
ಪಿತೃ ದೇವೋಭವ, ಆಚಾರ್ಯದೇವೋಭವ, ಅತಿಥಿದೇವೋಭವ,

ಯಾನ್ಯನವದ್ಯಾನಿ ಕರ್ಮಾಣಿ ತಾನಿ ಸೇವಿತ ವ್ಯಾನಿ ನೋ ಇತರಾಣಿ.
ಯಾನ್ಯಸ್ಮಾಕಂಸುಚರಿತಾನಿ. ತಾನಿ ತ್ವಯೋಪಾಸ್ಯಾನಿ." (2)

ದೇವಪೂಜಾದಿಗಳು ಮತ್ತು ಪಿತೃಕಾರ್ಯಗಳು (ಶ್ರಾದ್ಧಾದಿಗಳು) ಇವುಗಳ ಆಚರಣೆಯಲ್ಲಿ ಪ್ರಮಾದವನ್ನೆಸಗಬಾರದು. ಮಾತೆಯನ್ನು ಗೌರವದಿಂದ ಕಾಣು. ಪಿತನನ್ನು ಗೌರವದಿಂದ ಕಾಣು. ಆಚಾರ್ಯರನ್ನು ಗೌರವಿಸು. ಅತಿಥಿಯನ್ನು ಗೌರವದಿಂದ ಸತ್ಕರಿಸು. ಯಾವವು ನಿಂದ್ಯವಲ್ಲವೋ ಅಥವಾ ಯಾವ ಕರ್ಮಗಳು ಪಾಪರಹಿತವೋ - ದೋಷದಿಂದ ರಹಿತವೋ ಅಥವಾ ವಿಹಿತವೋ ಅವುಗಳನ್ನು ಆಚರಿಸಬೇಕು. ಪಾಪಕರ್ಮಗಳನ್ನು ಮತ್ತು ಅವಿಹಿತ ಕರ್ಮಗಳನ್ನಾಚರಿಸ ಬಾರದು. ಯಾವ ಕರ್ಮಗಳ ಆಚರಣೆ ನಮಗೂ ನಮ್ಮ ಪೂರ್ವಿಕರಿಗೂ ಕೀರ್ತಿಯನ್ನು ತಂದಿದೆಯೋ ಅಂಥ ಶ್ಲಾಘ್ಯ ವಿಹಿತ ನಿಯತಕರ್ಮಗಳನ್ನು ನೀನು ಆಚರಿಸು.

ಯೇ ಕೇ ಚೋಸ್ಮಾಚ್ಛ್ರೇಯಾಂಸೋ ಬ್ರಾಹ್ಮಣಾಃ ॥
ತೇಷಾಂ ತ್ವಯಾಸನೇನ ಪ್ರಶ್ವಸಿತವ್ಯಃ ।
ಶ್ರದ್ಧಯಾದೇಯಂ । ಅಶ್ರದ್ಧಯಾದೇಯಮ್ ।....
ಯದಿ ತೇ ಕರ್ಮವಿಚಿಕಿತ್ಸಾವಾ ವೃತ್ತಿವಿಚಿಕಿತ್ಸಾವಾಸ್ಯಾತ್ ॥

ನಮಗೆ ಶ್ರೇಯಸ್ಸು ಕೋರತಕ್ಕ ಬ್ರಾಹ್ಮಣರು ಮನಗೆ ಬಂದಾಗ ಆಸನವನ್ನು ಕೊಟ್ಟು ತ್ವಯಾ ಆಸನೇನ ಪ್ರಶ್ವಸಿತವ್ಯಂ - ನಮಗಿಂತ ದೊಡ್ಡವರು ಬಂದರೆ ಅವರ ಆಸನದಲ್ಲಿ, ಅವರೆದುರಿನಲ್ಲಿ ಕೂಡದೆ ಉಪಚರಿಸಬೇಕು. ಅವರ ಆಯಾಸ ನಿವಾರಣೆಯಾಗುವ ರೀತಿಯಲ್ಲಿ ಅವರನ್ನು ಉಪಚರಿಸಬೇಕು. ಶ್ರದ್ಧೆಯಿಂದ ದಾನಮಾಡಿರಿ. ಅಶ್ರದ್ಧೆಯಿಂದಾದರೂ ಸರಿ ದಾನಮಾಡಿರಿ. ಬೇರೆಯವರು ಮಾಡಿದರಲ್ಲ ಎಂಬ ನಾಚಿಕೆಯಿಂದಾದರೂ ಮಾಡಿರಿ. ಸಂತೋಷದಿಂದಲಾದರೂ ಕೊಡಿರಿ, ಅನುಸಂಧಾನ ಪೂರ್ವಕವಾಗಿಯಾದರೂ ಕೊಡಿರಿ. ಯಾವಾಗ ನಿಮಗೆ ಕರ್ಮಾಚರಣೆಯಲ್ಲಿ, ಸ್ವವಿಹಿತ ವೃತ್ತಿಗಳ ಆಚರಣೆಯಲ್ಲಿ ಏನಾದರೂ ಸಂದೇಹ ತಲೆದೋರಿದರೆ.(3)

ಯೇ ತತ್ರಬ್ರಾಹ್ಮಣಾಃ ಸಮ್ಮರ್ಶಿನಃ । ಯುಕ್ತಾ ಆಯುಕ್ತಾ । ಅಲೂಕ್ಷಾ ಧರ್ಮಕಾಮಾಸ್ಯುಃ॥...
ಏಷಾವೇದೋಪನಿಷತ್ । ಏತದನುಶಾಸನಂ । ಏವಮುಪಾಸಿತವ್ಯಂ । ಏವಮುಚೈತದುಪಾಸ್ಯಂ ॥॥

ಎಲ್ಲಿ ಶಮದಮಾದಿಸಂಪನ್ನರಾದ ಬ್ರಹ್ಮಜ್ಞಾನಿಗಳಿರುವರೋ, ಕೋಪಾದಿಗಳಿಂದ ರಹಿತರಾಗಿರುವರೋ, ಧರ್ಮನಿರತರಾಗಿರುವರೋ ಅವರ ಆಚರಣೆ ವರ್ತನೆ ಹೇಗೆ ಇದೆಯೋ ನೋಡಿ, ಅವರಿಂದ ತಿಳಿದು ಅದರಂತೆ ತಿದ್ದಿಕೊಳ್ಳಬೇಕು. ಇದೇ ಆದೇಶ. ಇದೇ ಉಪದೇಶ, ಇದೇ ವೇದೋಪನಿಷತ್. ಇದೇ ಅನುಶಾಸನವು. ಈ ರೀತಿ ಉಪಾಸನೆಯನ್ನು ಮಾಡಬೇಕು. ಈ ರೀತಿಯಾಗಿಯೇ ಧರ್ಮಾಚರಣೆ ಮಾಡಬೇಕು. (4)

ಹೀಗೆ ಹೇಳುತ್ತದೆ ತೈತ್ತರೀಯ ಉಪನಿಷತ್. ಮುಮುಕ್ಷುವಿಗೆ ಇದಕ್ಕಿಂತಲೂ ಹೆಚ್ಚು ಸ್ಪಷ್ಟೀಕರಣ ಇರತಕ್ಕ ಯಾವವೇದಭಾಗವೂ ಇಲ್ಲ. ಇಷ್ಟು ಆಚರಣೆಗಳನ್ನು ಭಗವಂತನಲ್ಲಿ ಭಕ್ತ್ಯನುಸಂದಾನಗಳಿಂದ ಮಾಡಿದರೆ ಶ್ರೀಹರಿ ಪ್ರೀತನಾಗಿಯೇ ಆಗುತ್ತಾನೆ ಮೋಕ್ಷ ದೂರವಿಲ್ಲ.

ಇನ್ನು ಪುರಾಣದೀಪವೆನಿಸಿದ ಭಾಗವತದಲ್ಲಿ ಈ ಧರ್ಮ ವಿಷಯವಾಗಿ ಏನು ವಿಚಾರ ಮಾಡಿದ್ದಾರೆಂದು ಸ್ವಲ್ಪಮಟ್ಟಿಗೆ ನೋಡುವಾ.

"ಧರ್ಮಂತು ಸಾಕ್ಷಾತ್‌ಭಗವತ್ಪ್ರಣೀತಂ ನವೈವಿದುಃಋಷಯೋನಾಪಿ ದೇವಾಃ ।
ನ ಸಿದ್ಧ ಮುಖ್ಯಾ ಅಸುರಾ ಮನುಷ್ಯಾಃ ಕುತೋನು ವಿದ್ಯಾಧರ ಚಾರಣಾದಯಃ ॥

ಮುಕ್ತಿಲಕ್ಷಣ ಫಲವನ್ನುದ್ದೇಶಿಸಿ ಯಾವ ಧರ್ಮವು ಭಗವಂತನಿಂದ ವಿಸ್ತಾರವಾಗಿ ನಿರೂಪಿಸಲ್ಪಟ್ಟಿದೆಯೋ ಆ ಗ್ರಂಥವೇ ಭಾಗವತ. ಈ ಧರ್ಮವನ್ನು ಯಾರೋ ಅಧುನಿಕರು ತಿಳಿಸಿದ್ದಲ್ಲ. ಯಾಕೆಂದರೆ ಈ ಮೋಕ್ಷ ಧರ್ಮಸ್ವರೂಪವನ್ನು ಋಷಿಗಳಾಗಲಿ, ದೇವತೆಗಳಾಗಲಿ, ಸಿದ್ಧರಾಗಲಿ ಮನಷ್ಯೋತ್ತಮ ಭಾಗವತರಾಗಲಿ ತಿಳಿದಿಲ್ಲ. ಹೀಗಿರುವಾಗ ವಿದ್ಯಾಧರ ಚಾರಣರಿಗಂತೂ ನಿಲಕುವದಿಲ್ಲ.

ಭಾಗವತದಲ್ಲಿ ಧರ್ಮಸ್ವರೂಪ ಅದರ ಲಕ್ಷಣಗಳನ್ನು ಸಪ್ತಮ ಸ್ಕಂಧದಲ್ಲಿ ಮತ್ತು ಏಕಾದಶಸ್ಕಂಧದಲ್ಲಿ ವರ್ಣಿಸಲಾಗಿದೆ. ಸಪ್ತಮ ಸ್ಕಂಧದಲ್ಲಿ ಯುಧಿಷ್ಠಿರ - ನಾರದ ಸಂವಾದರೂಪದಲ್ಲಿದೆ. ಏಕಾದಶ ಸ್ಕಂಧದಲ್ಲಿ ಶ್ರೀ ಕೃಷ್ಣ - ಉದ್ಧವರ ಸಂವಾದರೂಪದಲ್ಲಿದೆ.

ಯುಧಿಷ್ಠಿರನಿಂದ ಪ್ರಶ್ನಿಸಲ್ಪಟ್ಟ ನಾರದರು ಉತ್ತರ ಕೊಡುತ್ತಾರೆ.

ಧರ್ಮಮೂಲಂ ಹಿ ಭಗವಾನ್ ಸರ್ವವೇದಮಯೋ ಹರಿಃ ॥
ಸ್ಮೃತಿಶ್ಚತದ್ವಿದಾಂರಾಜನ್ ಯೇನ ಚಾತ್ಮಾಪ್ರಸೀತದತಿ ॥

ಧರ್ಮ ವಿಷಯನಾದವನು ಭಗವಂತನೇ. ಸರ್ವವೇದಗಳಿಂದ ಪ್ರತಿಪಾದ್ಯನಾಗಿದ್ದಾನೆ. ಸ್ಮೃತಿಗಳೂ ಸಹ ಅವುಗಳನ್ನೇ ತಿಳಿಸುತ್ತವೆ.

ಯಾವ ಧರ್ಮಾಚರಣೆಯಿಂದ ಭಗವಂತನು ಪ್ರೀತನಾಗಿ ಪುರುಷಾರ್ಥವನ್ನು ಕೊಡುತ್ತಾನೋ ಆ ಗೌಪ್ಯಧರ್ಮಗಳನ್ನು ಧರ್ಮವೆಂದು ಹೇಳಿ ಶ್ರುತಿ ಸ್ಮೃತಿ ಮೂಲದಿಂದ ಅವುಗಳ ವಿಭಾಗವನ್ನು ತೋರಿಸುತ್ತಾರೆ.

1 2 3 4 5 6 7 8
ಸತ್ಯಂ ದಯಾ ತಪಃ ಶೌಚಂ ತಿತಿಕ್ಷೇ ಕ್ಷಾ ಶಮೋ ದಮಃ ॥
9 10 11 12 13
ಅಹಿಂಸಾ ಬ್ರಹ್ಮಚರ್ಯಂಚ ತ್ಯಾಗಃ ಸ್ವಾಧ್ಯಾಯ ಆರ್ಜವಂ
14 15 16
ಸಂತೋಷಃ ಸಮದೃಕ್ಸೇವಾ ಗ್ರಾಮೇ ಹ್ಯೋಪರಮಃ ಶನೈಃ
17 18 19
ನೃಣಾಂ ವಿಪರ್ಯಯೇಹೇಷಾ ಮೌನಂ ಆತ್ಮವಿಮರ್ಶನಂ
20
ಅನ್ನಾದ್ಯಾದೇಃ ಸಂವಿಭಾಗೋ ಭೂತೇಭ್ಯಶ್ಚಯಥಾರ್ಹತಃ ॥
21
ತೇಷ್ವಾತ್ಮದೇವತಾಬುದ್ಧಿಃ ಸುತರಾಂ ನೃಷು ಪಾಂಡವ
22 23 24 25
ಶ್ರವಣಂ ಕೀರ್ತನಂ ಚಾಸ್ಯ ಸ್ಮರಣಂ ಮಹತಾಂಗತೇಃ॥

26 27 28 29 30
ಸೇವೆ ಜ್ಯಾವನತಿಃ ಸಖ್ಯಂ ದಾಸ್ಯ ಮಾತ್ಮಸಮರ್ಪಣಂ
ನೃಣಾಮಯಂ ಪರೋಧರ್ಮಃ ಸರ್ವೇಷಾಂ ಸಮುದಾಹೃತಃ।
ತ್ರಿಂಶಲ್ಲಕ್ಷಣಸಂಯುಕ್ತಃ ಸರ್ವಾತ್ಮಾ ಏನತುಷ್ಯತಿ

ಮೇಲೆ ಹೇಳಲ್ಪಟ್ಟ ಮೂವತ್ತು ಧರ್ಮವಿಭಾಗ ಲಕ್ಷಣಗಳು ಮನುಷ್ಯರ ಸಾಧನಕ್ಕೆ ಉತ್ಕೃಷ್ಟವಾದವುಗಳು ಮತ್ತು ಇವುಗಳ ಆಚರಣೆಯಿಂದ ಭಗವಂತನು ಪ್ರೀತನಾಗುತ್ತಾನೆ. ಇವೇ ವರ್ಣಾಶ್ರಮಾಚಾರ ಧರ್ಮಗಳು, ಎಲ್ಲರಿಗೂ ಶ್ರೇಷ್ಠಧರ್ಮಗಳು.

ಏಕಾದಶಸ್ಕಂಧದಲ್ಲಿ ಉಕ್ತವಾದ ಧರ್ಮ–ವಿಭಾಗ ಲಕ್ಷಣಗಳು ಈ ಪ್ರಕಾರ ಇವೆ.

ಮೋಕ್ಷಾರ್ಥವಾಗಿ ಯಾವ ಉಪಾಯಗಳನ್ನು ಭಗವಂತನು ಹೇಳಿದ್ದಾನೋ ಅವೇ ಭಾಗವತ ಧರ್ಮಗಳು, ಭಗವತ್‌ಪ್ರಾಪ್ತಿಯೇ ಮೋಕ್ಷ. ಅದಕ್ಕೆ ಸಾಧನ ಭಗವತ್ಪ್ರಸಾದ. ಅದಕ್ಕೆ ಸಾಧನ ಮುಂದೆ ಹೇಳತಕ್ಕ ಉಪಾಯ – ಸಮುದಾಯವು. ಇವುಗಳ ಅಚರಣೆ ಹರಿತೋಷಕರ ಹೇಗೆ ಆಗಬೇಕೋ ಹಾಗೆ.

ಅಮಾಯಯಾನುವೃತ್ಯಾಚ ತುಷ್ಯೇದಾತ್ಮಾತ್ಮದೋಹರಿಃ ॥
1 2
ಸರ್ವತೋಮನಸೋಽಸಂಗಮಾದೌ ಸಂಗಂಚಸಾಧುಷು ॥
3 4 5
ದಯಾಂ ಮೈತ್ರೀಂ ಪ್ರಶ್ರಯಂಚ ಭೂತೇಷ್ವದ್ಧಾ ಯಥೋಚಿತಂ ॥
6 7 8 9 10 11
ಶೌಚಂ ತಪಃ ತಿತೀಕ್ಷಾಂಚ ಮೌನಂ ಸ್ವಾಧ್ಯಾಯ ಮಾರ್ಜವಂ ॥
12 13 14
ಬ್ರಹ್ಮಚರ್ಯ ಮಹಿಂಸಾಂಚ ಸಮತ್ವಂ ದ್ವಂದ್ವಸಂಜ್ಞಯೋಃ ॥
15 16 17
ಸರ್ವತ್ರಾತ್ಮೇಶ್ವರಾನ್ವೀಕ್ಷಾಂ ಕೈವಲ್ಯಂ ಅನಿಕೇತನಂ ॥
18 19 20
ವಿವಿಕ್ತ ಚೀರವಸನಂ ಸಂತೋಷಂ ಯೇನಕೇನಚಿತ್ ॥

21 22
ಶ್ರದ್ಧಾಂ ಭಗವತೇಶಾಸ್ತ್ರಃ ನಿಂದಾಮನ್ಯತ್ರಚಾಪಿಹಿ ॥
23 24 25 26
ಮನೋವಾಕ್ಕಾಯ ದಂಡಂಚ ಸತ್ಯಂ ಶಮದಮಾವಪಿ ॥
27 28 29
ಶ್ರವಣಂ ಕೀರ್ತನಂ ಧ್ಯಾನಂ ಹರೇರದ್ಭುತ ಕರ್ಮಣಃ
ಜನ್ಮಕರ್ಮಗುಣಾನಾಂಚ ತದರ್ಥೇಽಖಿಲಚೇಷ್ಟಿತಂ ॥
30
ಇಷ್ಟಂ ದತ್ತಂ ತಪೋ ಜಪ್ತಂ ಪೂರ್ತಂಯಚ್ಚಾತ್ಮನಃಪ್ರಿಯಂ ॥

ಈ ಮೂವತ್ತು ಭಾಗವತ ಧರ್ಮಗಳು.

ನಾಹಂಕರ್ತಾ ಹರಿಃ ಕರ್ತಾ ತ್ವತ್ಪೂಜಾ ಕರ್ಮಚಾಖಿಲಂ ।
ತಥಾಪಿ ಮತ್ಕೃತಾ ಪೂಜಾ ತ್ವತ್ಪ್ರಸಾದೇನ ನಾನ್ಯಥಾ ॥

ಶ್ರೀ ಹರಿಯೇ ಸ್ವತಂತ್ರ ಕರ್ತಾ ನಾನು ಅವನಧೀನಕರ್ತಾ. ನಾನು ಮಾಡುವದೆಲ್ಲ ಹರಿಪೂಜೆ. ನಾನು ಮಾಡಿದಂತೆ ಕಂಡದ್ದೂ ಅವನ ಪ್ರಸಾದದಿಂದಲೇ.

ಮೇಲೆ ಹೇಳಿದ ಮಾರ್ಗವು ಭಕ್ತಿಮಾರ್ಗವು. ಅನೇಕ ಅಧಿಕಾರಿಗಳು ಈ ಮಾರ್ಗದಲ್ಲಿ ಹೋಗಿ ಮೋಕ್ಷವನ್ನು ಹೊಂದಿದ್ದಾರೆ. ಇದು ಸುಖಕರ. ಭಯಲವಲೇಶವೂ ಇಲ್ಲ. ರಾಜಮಾರ್ಗ. ಆತಂಕಗಳಂತೂ ಇಲ್ಲವೇ ಇಲ್ಲ. ಸ್ಖಲನ ಭಯವಂತೂ ಸುತರಾಂ ಇಲ್ಲ. ಕಣ್ಣುಮುಚ್ಚಿಕೊಂಡು ಈ ಭಾಗವತ ಧರ್ಮಗಳನ್ನವಲಂಬಿಸಿ ಕೇವಲ ನಡೆಯುವದೇನು ಓಡಬಹುದು. ಪತನ ಭಯವಿಲ್ಲ. ಇದರಲ್ಲಿ ಎಷ್ಟು ಅನುಷ್ಠಾನ ಮಾಡಿದರೂ ಅಷ್ಟು ಹರಿಪ್ರೀತಿ. ಈ ವಿಚಾರ ವಿಸ್ತಾರವನ್ನು ಪೂಜ್ಯ ಶ್ರೀವಿಷ್ಣುತೀರ್ಥರ ಭಾಗವತ ಸಾರೋದ್ಧಾರದಲ್ಲಿ ನೋಡಬಹುದು.

ಕೊನೆಯದಾಗಿ ನಿರ್ಣಾಯಕ ಶಾಸ್ತ್ರವಾದ ಬ್ರಹ್ಮಸೂತ್ರದ ಸಂದೇಶವೇನೆಂದು ತಿಳಿದು ಲೇಖನದ ಎರಡನೇ ಭಾಗವನ್ನು ಮುಕ್ತಾಯಗೊಳಿಸುವಾ.

ಮುಮುಕ್ಷು, ಸಾಮಾನ್ಯ ವಿಚಾರ ಆಧ್ಯಾತ್ಮ ವಿಷಯದ
ತಿಳಿದುಕೊಂಡಮೇಲೆ ಮೂರು ಪ್ರಶ್ನೆ ಒಡಮೂಡುವವು.

(1) ಏನು ತಿಳಿಯಬೇಕು?
(2) ಏನು ಮಾಡಬೇಕು?
(3) ಫಲವೇನು?

"ಸ್ವರೂಪ ಸಾಧನ ಫಲ ಜಿಜ್ಞಾಸಾಹಿ ಬ್ರಹ್ಮಜಿಜ್ಞಾಸೋಚ್ಯತೆ "
(ಶ್ರೀ.ನ್ಯಾ.ಸುಧಾ)

ಮೊದಲನೆಯದು ಭಗವತ್ ಸ್ವರೂಪವಿಚಾರ
ಎರಡನೆಯದು ತತ್ಪ್ರಾಪ್ತಿ ಸಾಧನ ವಿಚಾರ.
ಮೂರನೆಯದು ಆತ್ಯಂತಿಕ ಫಲ ವಿಚಾರ.

ಮೊದಲನೆಯ ಪ್ರಶ್ನೆಗೆ ಉತ್ತರವಾಗಿ ಬ್ರಹ್ಮಸೂತ್ರದ ಎರಡು ಅಧ್ಯಾಯಗಳು. ಸಮನ್ವಯಾಧ್ಯಾಯ ಮತ್ತು ಅವಿರೋಧಾಧ್ಯಾಯ. "ಗುಣೈಃಸರ್ವೈರುದೀರ್ಣಂ" ಗುಣಪೂರ್ಣನೆಂದು ಪರಮಾತ್ಮನನ್ನು ತಿಳಿಯಬೇಕೆಂದು ಮೊದಲನೇ ಅಧ್ಯಾಯ. ಅಷ್ಟೇ ಸಾಲದು "ದೋಷವರ್ಜಿತಂ" ದೋಷರಹಿತನೆಂದು ತಿಳಿಯಬೇಕೆಂದು ಸಾರುತ್ತದೆ ಎರಡನೆಯ ಅಧ್ಯಾಯ.

ಅಂತೂ ಪರಮಾತ್ಮನನ್ನು ಗುಣಪೂರ್ಣ ಮತ್ತು ದೋಷದೂರನೆಂದು ತಿಳಿಯಬೇಕೆಂದು ಬ್ರಹ್ಮಸೂತ್ರೋಕ್ತ ಸಂದೇಶ, ಸೂತ್ರಗಳಲ್ಲಿ ಹೇಳಿದ ಹೇಳಿಕೆಗಳಿಂದ ವಿಷ್ಣುವಿನ ಅಥವಾ ಬ್ರಹ್ಮನ ಸ್ವರೂಪವನ್ನು ನಿಶ್ಚಯ ಮಾಡಿಕೊಳ್ಳಬೇಕು ಗುರುಮುಖದಿಂದ.

ಎರಡನೆಯ ಪ್ರಶ್ನೆಗೆ ಉತ್ತರ "ಜ್ಞೇಯಂ" ಎಂಬ ಭಾಷ್ಯಪದ. ಬ್ರಹ್ಮಸೂತ್ರದ ಮೂರನೆಯ ಅಧ್ಯಾಯ – ಸಾಧನಾಧ್ಯಾಯವೇ ಉತ್ತರ. ಜ್ಞಾನ ಭಕ್ತಿವೈರಾಗ್ಯ ಸಾಮಗ್ರಿಯೊಂದಿಗೆ ಅಪರೋಕ್ಷ ಜ್ಞಾನ ಪ್ರಾಪ್ತಿಗಾಗಿ ಉಪಾಸನಾ ಮಾಡಬೇಕೆಂದು ಉಪದೇಶಿಸುತ್ತವೆ ಸೂತ್ರಗಳು.

ಮೂರನೆಯ ಪ್ರಶ್ನೆಗೆ ಉತ್ತರ "ಗಮ್ಯಂ" ಭಾಷ್ಯೋಕ್ತಿ. ನಾಲ್ಕನೆಯ ಅಧ್ಯಾಯ – ಫಲಾಧ್ಯಾಯವೆಂದು. ಯಾವಮಾರ್ಗ ಎಲ್ಲಿಗೆ ಹೋಗುವದು. ಗರುಡ ಶೇಷ ಅರ್ಚಿರಾದಿ ಮಾರ್ಗಗಳಿಂದ ವೈಕುಂಠಾದಿ ಲೋಕಗಳಿಗೆ ಮಾರ್ಗ.

ಆತ್ಯಂತಿಕ ಫಲ ಮುಕ್ತಿ ಸ್ವಸ್ವರೂಪಾನಂದಾವಿರ್ಭಾವ, ಮುಕ್ತರ ಆವಾಸ ಸ್ಥಾನಗಳೇ ವೈಕುಂಠಾದಿ ಲೋಕಗಳು.

ಬ್ರಹ್ಮಸೂತ್ರಗಳು ಮಾತ್ರ ನಿರ್ದಿಷ್ಟವಾಗಿ ನಿಷ್ಕೃಷ್ಟವಾಗಿ ನಿಸ್ಸಂದೇಹವಾಗಿ ಸ್ವರೂಪ, ಸಾಧನ, ಫಲವಿಷಯವಾಗಿ ತಿಳಿಸುತ್ತವೆ. ಸಾಧಕರು ಅದನ್ನು ಅಧ್ಯಯನ ಮಾಡಿ ಲಾಭ ಪಡೆಯಬೇಕು.

ಪರಮಾತ್ಮ ಪ್ರೀತಿಕರವಾದದ್ದು ಧರ್ಮ – ಸಾಕ್ಷಾತ್ಕಾರಾನುಕೂಲ ಮೋಕ್ಷಸಾಧನ. ಧರ್ಮವಿರೋಧಿ – ತಮಸ್ಸಾಧಕ ವ್ಯರ್ಥ.

ಈಗ ನೋಡಿ ಧರ್ಮರಕ್ಷಣೆ ಎಂದರೆ ಧರ್ಮಾಚರಣೆ. ಧರ್ಮಾಚರಣೆ ಮಾಡಿದವರನ್ನು ಧರ್ಮವು ರಕ್ಷಿಸುತ್ತದೆ. ಹೀಗೆಂದರೆ ಯಾವ ಅನ್ಯೋನ್ಯಾಶ್ರಯ ದೋಷವೂ ಬರುವದಿಲ್ಲ. ಇಲ್ಲಿಗೆ ಎರಡನೆಯ ಭಾಗ ಮುಗಿದುದು.

---

# ಧರ್ಮಪಥದಲ್ಲಿ ಛಾಂದೋಗ್ಯ ಚೆಲ್ಲಿದ ಬೆಳಕು - ೩

"ಧರ್ಮಂಚರ" ಎಂಬುವದು ವೇದಗಳ ಆದೇಶ ಮತ್ತು ಉಪದೇಶ. ಈ ವಿಷಯವನ್ನು ಎರಡನೆಯ ಭಾಗದಲ್ಲಿ ಈಗಾಗಲೇ ಸೂಚಿಸಿದೆ. ಮುಮುಕ್ಷುಗಳು ತಮ್ಮ ತಮ್ಮ ಗುರಿಗಳನ್ನು ಗುರುತಿಸಿದ ಮೇಲೆ ಪರಮಾತ್ಮನ ಜ್ಞಾನ ಪ್ರಸಾದದ್ವಾರಾ ಮೋಕ್ಷವನ್ನು ಪಡೆಯಲು ಅಥವಾ ಗುರಿಯನ್ನು ಸಾಧಿಸಲು ಸದಾ ಪ್ರಯತ್ನಮಾಡುತ್ತಲೇ ಇರುತ್ತಾರೆ. ಇದಕ್ಕಾಗಿಯೇ ವೇದೋಕ್ತಧರ್ಮಾಚರಣೆ.

ಧರ್ಮಾಚರಣೆ ಎಂದರೆ ಅದರ ನಿತ್ಯಾನುಷ್ಠಾನ. ಬೌದ್ಧಿಕ, ಮಾನಸಿಕ ಮತ್ತು ಕಾಯಿಕ ಸಾಧನಗಳು ಕ್ರಮವಾಗಿ ಜ್ಞಾನಾರ್ಜನೆ, ಮಾನಸಿಕ ಸಂತತ ಅನುಸಂಧಾನ ಮತ್ತು ಕರ್ಮಾಚರಣೆ. ಕೆಲವು ಕರ್ಮಾಚರಣೆಗಳು ಇತರರಿಗೆ ಕಾಣತಕ್ಕವುಗಳು ದೇವಪೂಜಾ, ಪಾರಾಯಣ ಇತ್ಯಾದಿ. ಇನ್ನು ಕೆಲವು ಜಪಾದಿಗಳು ಧ್ಯಾನ ಇತ್ಯಾದಿ ಮಾನಸಿಕ.

ಧರ್ಮದ ಕಟ್ಟಳೆಗಳನ್ನು ನಿಯತವಾಗಿ ಧೃಡವಾಗಿ ಆಚರಿಸತಕ್ಕವರನೇಕರಿದ್ದಾರೆ. ಈ ರೀತಿಯಾಗಿ ಧರ್ಮಕರ್ಮಾಚರಣೆಗಳನ್ನು ಚಿರಕಾಲ ತಪ್ಪದೇ ಆಚರಿಸಿದಲ್ಲಿ ಅವು ನಮ್ಮ ಸ್ವಭಾವದಲ್ಲಿ ಅಡಕವಾಗಿ ಬಿಡುತ್ತವೆ. ಅಲ್ಪಸ್ವಲ್ಪ ವಿಘ್ನಗಳನ್ನು ನಿವಾರಿಸಿಕೊಂಡು ಆಚರಣೆ ಮಾಡಿಬಿಡಬಹುದು. ಆದರೆ ಕೆಲವೊಂದು ಸಮಯದಲ್ಲಿ ಬಲವತ್ತರ ವಿಘ್ನಗಳು, ಪ್ರತಿಕೂಲಗಳು, ಪ್ರತಿಬಂಧಕಗಳು, ವಿರೋಧಗಳು ಒದಗಿದಾಗ ಸಾಧಕನಿಗೆ ಏನು ಮಾಡಬೇಕೆಂಬದು ದೊಡ್ಡಪ್ರಶ್ನೆ. ಎಷ್ಟು ಮಾಡಬೇಕು - ಎಷ್ಟು ಬಿಡಬೇಕು. ಎಲ್ಲವನ್ನೂ ಬಿಟ್ಟಾಗ - ಅಥವಾ ಅಲ್ಪ ಆಚರಿಸಿದಾಗ ಅಂಥ ಧರ್ಮೋಲ್ಲಂಘನೆಗಳಿಗೆ ಪ್ರಾಯಶ್ಚಿತ್ತ ಉಂಟೇ ಅಥವಾ ಪ್ರತ್ಯವಾಯವು ಅಪರಿಹಾರ್ಯವೇ. ಈ ತಾತ್ಕಾಲಿಕ ಧರ್ಮೋಲ್ಲಂಘನೆಗಳನ್ನು ಸರಿಪಡಿಸಿಕೊಂಡು ಪುನಃ ಧರ್ಮ ಪಥದ ಹೆದ್ದಾರಿಯಲ್ಲಿ ನಡೆಯಲು

ಸಾಧ್ಯವೇ. ಇಂಥ ಎಷ್ಟೋ ಸಂದರ್ಭಗಳನ್ನು ಸಾಧಕನು ಎದುರಿಸ ಬೇಕಾಗುತ್ತದೆ.

"ಆಚಾರಃ ಪ್ರಭವೋಧರ್ಮಃ ಧರ್ಮಸ್ಯಪ್ರಭುರಚ್ಯುತಃ" ॥ ವಿ.ಸ.ನಾ.। "ಧರ್ಮವು ಅನುಷ್ಠಾನ ಪ್ರಾಚುರ್ಯವನ್ನು ಹೊಂದಿದೆ. ಅದಕ್ಕೆ ಪ್ರಭು ಅಚ್ಯುತ." ಈ ಧರ್ಮಾಚರಣೆ ಮಾಡುವಾಗ ಸಾಧಕನಿಗೆ ಒಂದಿಲ್ಲೊಂದು ಸಮಯದಲ್ಲಿ ಹಾಗೆ ಮಾಡಬೇಕೋ ಬಿಡಬೇಕೋ ಎಂಬ ಪ್ರಶ್ನೆಗಳು ಒಡಮೂಡಿ ಬರುತ್ತವೆ. ಉದಾಹರಣೆಗೆ - ಅರ್ಜುನನು ಕ್ಷತ್ರಿಯನಾದರೂ – ಕ್ಷತ್ರಿಯನಿಗೆ ಯುದ್ಧವು ಪರಮಧರ್ಮವಾದರೂ ಮಹಾಭಾರತ ಯುದ್ಧ ಆದಿಯಲ್ಲಿ ಅರ್ಜುನನಿಗೆ ಯುದ್ಧಮಾಡಬಾರದೆಂದೆನಿಸಿತು. ಸಾರಥ್ಯವನ್ನು ವಹಿಸಿದ ಶ್ರೀ ಕೃಷ್ಣನು ಯಾವದು ಧರ್ಮ - ಯಾವದು ಅಧರ್ಮ ಎಂಬ ವಿಷಯವನ್ನು ವಿಸ್ತಾರವಾಗಿ ಬೋಧಿಸಿದನು. ಮಹಾಭಾರತಾಂತರ್ಗತ ಈ ಭಾಗವೇ ಶ್ರೀಮದ್ಭಗವದ್ಗೀತೆ ಎಂಬ ಜಗತ್ಪ್ರಸಿದ್ಧ ಗ್ರಂಥ, ಅರ್ಜುನನಿಗೆ ಬೋಧಿಸಿದರೂ ಅದರಲ್ಲಿರತಕ್ಕ ವಿಷಯಗಳು ಸಾರ್ವಕಾಲಿಕ ಸರ್ವಾಧಿಕಾರಿಗಳಿಗೂ ಅನ್ವಯಿಸತಕ್ಕವು. ಕಾಲಕಳೆದಂತೆ ಹಳೆಯದಾಗುವದಲ್ಲ. ನಿತ್ಯನೂತನವೇ. ಶ್ರೀ ಕೃಷ್ಣನ ಕೆಲವು ಪ್ರಚೋದಕ ವಾಕ್ಯಗಳು ಈ ರೀತಿ ಇವೆ.

"ಅಶೋಚ್ಯಾನನ್ವಶೋಚಸ್ತ್ವಮ್ ಪ್ರಜ್ಞಾವಾದಾಂಶ್ಚಭಾಷಸೇ" ॥
"ಕಿಂಕರ್ಮಕಿಮಕರ್ಮೇತಿ ಕವಯೋಪ್ಯತ್ರಮೋಹಿತಾಃ" ॥
"ಸ್ವಧರ್ಮೇನಿಧನಂಶ್ರೇಯಃ ಪರಧರ್ಮೋಭಯಾವಹಃ" ॥
"ಸ್ವಕರ್ಮಣಾತಮಭ್ಯರ್ಚ್ಯಸಿದ್ಧಿಂವಿಂದತಿ ಮಾನವಾಃ" ॥
"ಯೋಗಸ್ಥಃಕುರುಕರ್ಮಾಣಿ ಸಂಗಂ ತ್ಯಕ್ತ್ವಾಧನಂಜಯ" ॥
"ಸಿಧ್ಯಸಿಧ್ಯೋಃಸಮೋಭೂತ್ವಾಸಮತ್ವಂ ಯೋಗ ಉಚ್ಯತೇ" ॥
"ಬುದ್ಧಿಯುಕ್ತೋಜಹಾತೀಹ ಉಭೇಸುಕೃತ ದುಷ್ಕೃತೇ" ॥
"ತಸ್ಮಾದ್ಯೋಗಾಯ ಯುಜ್ಯಸ್ವಯೋಗಃ ಕರ್ಮಸುಕೌಶಲಂ" ॥
"ಕರ್ಮಣ್ಯೇವಾಧಿಕಾರಸ್ತೇ ಮಾಫಲೇಷುಕದಾಚನ" ।
"ಮಾಕರ್ಮಫಲಹೇತುರ್ಭೂರ್ಮಾತೇಸಂಗೋಸ್ತ್ವಕರ್ಮಣಿ" ॥
"ನೇಹಾಭಿ ಕ್ರಮನಾಶೋಸ್ತಿಪ್ರತ್ಯವಾಯೋನವಿದ್ಯತೇ ॥
ಸ್ವಲ್ಪಮಪ್ಯಸ್ಯಧರ್ಮಸ್ಯ ತ್ರಾಯತೇ ಮಹತೋಭಯಾತ್" ॥

"ಏತದ್ಬುಧ್ವಾ ಬುದ್ಧಿಮಾನ್‌ಸ್ಯಾತ್‌ಕೃತಕೃತ್ಯಸ್ಯ ಭಾರತ" ॥
"ನಷ್ಟೋಮೋಹಃ ಸ್ಮೃತಿಲಬ್ಧಾಸ್ತತ್ ಪ್ರಸಾದಾನ್ಮಯಾಚ್ಯುತ ॥
ಸ್ಥಿತೋಸ್ಮಿಗತಸಂದೇಹಃ ಕರಿಷ್ಯೇ ವಚನಂ ತವ" ॥

ಈ ರೀತಿಯಾಗಿ ಗೀತೆಯು ಧರ್ಮಕರ್ಮಗಳ ವಿಷಯಗಳ ನಿಘಂಟಾಗಿದೆ.

ಧರ್ಮದ ಸ್ವರೂಪವು ಒಂದೇ ರೀತಿ ಇದ್ದರೂ ಅದರ ಆಚರಣೆಯ ಕಾಲಕಾಲಕ್ಕೆ ಬದಲಾವಣೆಗಳಾಗುತ್ತಲೇ ಇರುತ್ತವೆ. ದೈಶಿಕ, ಕಾಲಿಕ ರಾಜಕೀಯ ಮತ್ತು ಸಾಮಾಜಿಕ ವಿಪ್ಲವಗಳೊದಗಿದಾಗ ಧರ್ಮಾಚರಣೆ ಕೆಲವು ಅಡ್ಡಿ, ಅಡಚಣೆ, ಆತಂಕ ಮತ್ತು ಬಲವತ್ತರ ಪ್ರತಿಬಂಧಕ ವಿಘ್ನಗಳು ಬಂದೊದಗುವವು. ಇದಲ್ಲದೇ ವೈಯುಕ್ತಿಕ ಮತ್ತು ಅನ ವ್ಯಕ್ತಿಗಳಿಂಥ ವಿಘ್ನಗಳು ಉಂಟಾಗುತ್ತಿರುತ್ತವೆ.

"ದಾಕ್ಷಿಣ್ಯಾದರ್ಥಲೋಭಾದ್ವಾ ಭಯಾದ್ವಾ ದುಷ್ಟಸಂಗತೇಃ ॥
ಯದನ್ಯತೆ ಕುರುತೇ ಪಾಪಂ ಕುರು ಮಾಧವ ರಕ್ಷಣಂ" ॥
ಮಾಘಮಾಸ ಮಾಹಾತ್ಮೆ ॥

"ಪರರದಾಕ್ಷಿಣ್ಯಕ್ಕಾಗಿ, ಹಣದಾಸೆಗೆ, ಲೋಭದಿಂದ, ಭಯದಿಂದ, ದುಷ್ಟರ ಸಹವಾಸದಿಂದ ಧರ್ಮಚ್ಯುತಿ ಆಗಿ ಪಾಫ ಸಂಘಟಿಸುತ್ತದೆ. ಇವೆಲ್ಲವುಗಳಿಂದ ಹೇ ಅಚ್ಯುತ ರಕ್ಷಣೆ ಮಾಡು."

ಸಕಲಧರ್ಮಾಚರಣೆಗಳೂ ಶ್ರೀಹರಿಯ ಪ್ರೀತಿಗಾಗಿ. ಅದೇ ಸಾಧಿಸದೇ ಹೋದರೆ ಮಾಡಿದ್ದೆಲ್ಲ ವ್ಯರ್ಥವಲ್ಲವೇ..

ಆಪತ್ಕಾಲದಲ್ಲಿ ಆಪದ್ಧರ್ಮಗಳನ್ನು ಅನುಸರಿಸಿರೆಂದು ಧರ್ಮ-ಶಾಸ್ತ್ರಗಳು ತಿಳಿಸಿವೆ. ಕೆಲವು ರಿಯಾಯಿತಿಗಳನ್ನೂ ತೋರಿಸಿವೆ. ಈಗ ಇಪ್ಪತ್ತನೆಯ ಶತಮಾನದಲ್ಲಂತೂ ಧರ್ಮಾಚರಣೆಗೆ ಸಾಕಷ್ಟು ವಿಪತ್ತುಗಳು ಒದಗಿವೆ. ನಮ್ಮ ರಾಜ್ಯ ಬ್ರಿಟಿಷರ ಕೈಗೆ ಎರಡು – ಮೂರು ಶತಮಾನಗಳ ಕಾಲ ಸಿಕ್ಕಿ ಅವರ ಸಾಮಾಜಿಕ ರೀತಿ ನೀತಿಗಳ ಪ್ರಭಾವ ನಮ್ಮ ಸಮಾಜದಲ್ಲಿ ಕೋಲಾಹಲವನ್ನೇ ಉಂಟುಮಾಡಿದೆ. ಕಾಲಕೃತ ಪ್ರಭಾವವಂತೂ ಹೇಳುವ ಹಾಗಿಲ್ಲ. ಮೊದಲೇ ಕಲಿಕಾಲ. ಉದರ ನಿಮಿತ್ತವಾಗಿ ಭಿನ್ನ ಭಿನ್ನ ವೃತ್ತಿಗಳನ್ನವಲಂಬಿಸಬೇಕಾಗಿದೆ. ಅವೆಲ್ಲವೂ

ಧರ್ಮಕರ್ಮಾಚರಣೆಗೆ ಪ್ರತಿಕೂಲಗಳೇ, ಇಂಥ ಸಂದರ್ಭದಲ್ಲಿ ಒಬ್ಬ ಮಹನೀಯರು ಆಪತ್ಕಾಲದಲ್ಲಿ ಧರ್ಮವನ್ಹೇಗೆ ಆಚರಿಸಿದರು, ಎಂಬ ಬಗ್ಗೆ ಶಾಸ್ತ್ರಗಳಲ್ಲಿ ಒಬ್ಬ ಮಹನೀಯರ ಉದಾಹರಣೆಯು ಅನೇಕ ಸಂದೇಹಗಳನ್ನು ನಿವಾರಣೆ ಮಾಡುತ್ತದೆ. ರಾಶಿ ರಾಶಿ ಗ್ರಂಥಗಳನ್ನು ತಿರುವಿ ಹಾಕಿದರೂ ಎಷ್ಟು ರಿಯಾಯಿತಿ ಪಡೆಯಬಹುದು. ಎಷ್ಟು ಉಲ್ಲಂಘನೆಯಾದರೆ ಧರ್ಮಕ್ಕೆ ಧಕ್ಕೆಬಾರದು. ನಂತರ ಪ್ರಾಯಶ್ಚಿತ್ತವೇನು ? ಸರಿ / ತಪ್ಪು ಮತ್ತು ಪುಣ್ಯ / ಪಾಪ ಇವುಗಳನ್ನು ನಿಷ್ಕೃಷ್ಟವಾಗಿ ತಿಳಿಯಲಾಗುವದಿಲ್ಲ.

ವರ್ಣಾಶ್ರಮ ವೃತ್ತಿ ಮತ್ತು ಲೌಕಿಕ-ವೃತ್ತಿ (ಉದರೋಪಾಯ) ಬೇರೆ ಬೇರೆಯಾದರೆ ಸಮಸ್ಯೆ ಇನ್ನೂ ಜಟಿಲವಾಗುತ್ತದೆ. ಏನು ಮಾಡಬೇಕು ಏನು ಬಿಡಬೇಕು ಎಂಬ ಬಗ್ಗೆ ಮನಸ್ಸಿನಲ್ಲಿ ಯುದ್ಧವೇ ನಡೆಯುತ್ತದೆ. ಎಂಥ ದುರಂತ ಪ್ರಸಂಗವೇ ಇರಲಿ ಧರ್ಮಾಚರಣೆಯನ್ನು ಬಿಡುವದಿಲ್ಲವೆಂಬದಕ್ಕೆ ಸಾಕಷ್ಟು ಬಲ, ಧೈರ್ಯ ಸ್ಥೈರ್ಯಗಳು ಬೇಕಾಗುತ್ತವೆ. ಇದು ಎಲ್ಲರಿಗೂ ಸಾಧ್ಯವಿರದ ಮಾತು.

ಮಹಾಭಾರತ ಪ್ರಸಿದ್ಧ ಭೀಮಸೇನನಂಥವರಿಗೆ ಸಾಧ್ಯ. ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ ಒಂದು ಘಟನೆ ಈ ವಿಷಯವನ್ನು ಸ್ಪಷ್ಟಪಡಿಸುತ್ತದೆ. ಭೀಮಸೇನ ಬಕಾಸುರನ ಸಂಹಾರಕ್ಕೆ ಹೋದಾಗ, ಬಂಡಿ ಅನ್ನವನ್ನೂ ಹರಿಗರ್ಪಣೆ ಮಾಡಿ ಊಟ ಮಾಡಿದನು. ದೂರದಿಂದಲೇ ಇದನ್ನು ನೋಡಿದ ಅಸುರ ಬಕನು ಹೆಮ್ಮರವನ್ನೆತ್ತಿಕೊಂಡು ಆರ್ಭಟದಿಂದ ಹೊಡೆಯಲುದ್ಯುಕ್ತನಾಗಿ ರಭಸದಿಂದ ಬಂದನು. ಭೀಮಸೇನನು ಊಟಮುಗಿಸಿ - ಕೈತೊಳೆದುಕೊಂಡು - ಅಸುರನ ಆರ್ಭಟವನ್ನು ಲೆಕ್ಕಿಸದೇ - ಭೋಜನೋತ್ತರದಲ್ಲಿ ಆಚರಿಸಬೇಕಾದ ಆಚಮನಾದಿ ಕ್ರಿಯೆಗಳನ್ನು ಮುಗಿಸಿದನು. ಇಂಥ ಕಾಲ ವೈಪರೀತ್ಯವಿದ್ದರೂ ಅದನ್ನು ಲೆಕ್ಕಿಸದೆ ನಿರ್ಭೀತರಾಗಿ ಈ ಸೂಕ್ಷ್ಮಧರ್ಮಾಚರಣೆಗಳನ್ನು ಸಹ ಬಿಡದಿರುವ ಎದೆಗಾರಿಕೆ ಇನ್ನಾರಿಗಿದೆ? ಭೀಮಸೇನಗಲ್ಲದೇ ಮಿಕ್ಕದೇವತೆಗಳಿಗಿಲ್ಲ, ಪರರ ಪಾಡೇನು! ಆಮೇಲೆ ಆಯಿತು ಬಕಾಸುರನ ಸಂಹಾರ. ಭೀಮಸೇನ ದೇವರ ಈ ಮೇಲ್ಮಟ್ಟ ನನ್ನಂಥಪಾಮರರಿಗಲ್ಲ.

ಹೆಚ್ಚುಪಾಪಘಟಿಸದಂತೆ ಧರ್ಮಾಚರಣೆಯಲ್ಲಿ ರಿಯಾಯಿತಿ ಪಡೆದ ವ್ಯಕ್ತಿಗಳನ್ನು ಶಾಸ್ತ್ರಗಳಲ್ಲಿ ಅರಸುವಾ.

ಹಾ! ಈಗ ಒಬ್ಬಮಹಾಶಯರ ದರ್ಶನವಾಗಲಿದೆ.

ಛಾಂದೊಗ್ಯ ಉಪನಿಷತ್ತಿನಲ್ಲಿ ಉಲ್ಲೇಖ ಮಾಡಿದ ಉಷಸ್ತಿ ಚಾಕ್ರಾಯಣರ ಕಡೆಗೆ ಒಂದು ಸಲ ದೃಷ್ಟಿ ಹರಿಸುವ. ಆಪದ್ಧರ್ಮಾಚರಣೆಯಲ್ಲಿ ಎಷ್ಟು ರಿಯಾಯಿತಿ ಪಡೆಯಬೇಕು ಎಂಬ ವಿಷಯದಲ್ಲಿ ಚಾಕ್ರಾಯಣರದು ಸಕ್ರಿಯಾತ್ಮಕ ಸೂಚನೆ.

ಕುರುದೇಶದಲ್ಲಿ ಉಷಸ್ತಿ ಚಾಕ್ರಾಯಣರೆಂಬ ಒಬ್ಬ ಯುವ ಋಷಿ ಇದ್ದರು. ಅವರಿಗೆ ಯುವತಿಯಾದ ಒಬ್ಬ ಹೆಂಡತಿ ಇದ್ದಳು. ಆ ಪ್ರದೇಶವು ಒಂದು ಸಲ ಬಹಳ ದೀರ್ಘಕಾಲ ಕ್ಷಾಮದಿಂದ ಪೀಡತವಾಯಿತು. ಜನರೆಲ್ಲರೂ ಬಹಳ ಕಷ್ಟದಿಂದ ಕಾಲಕಳೆಯುತ್ತಿದ್ದರು.

ಆ ಸಮಯದಲ್ಲಿ ಹತ್ತಿರದಲ್ಲಿದ್ದ ರಾಜ್ಯದಲ್ಲಿ ರಾಜನು ಒಂದು ಯಜ್ಞವನ್ನು ಆಚರಿಸುವ ವಾರ್ತೆಯು ಚಾಕ್ರಾಯಣರ ಸ್ಥಳಕ್ಕೂ ಮುಟ್ಟಿತು. ಚಾಕ್ರಾಯಣರ ಮಡದಿಯು ಪತಿಯನ್ನು ಕುರಿತು ಹೇಳಿದಳು. "ಪಕ್ಕದ ರಾಜ್ಯದಲ್ಲಿ ರಾಜನು ಯಜ್ಞವನ್ನಾಚರಿಸುತ್ತಿದ್ದಾನಂತೆ. ತಾವು ಆ ಕಾರ್ಯದಲ್ಲಿ ಪ್ರವೀಣರಿರುವದರಿಂದ ತಾವು ಅಲ್ಲಿಗೆ ಹೋಗಬೇಕು. ತಮಗೆ ದೊರಯತಕ್ಕ ಮರ್ಯಾದೆ / ಸಂಭಾವನೆಗಳಲ್ಲಿ ನಾವು ಈ ಕ್ಷಾಮ ದಿನಗಳನ್ನು ಸುಗ್ಗಿಯವರೆಗೆ ನಿರಾಯಾಸವಾಗಿ ಕಳೆಯಬಹುದು" ಎಂದಳು. ಚಾಕ್ರಾಯಣರು ಒಪ್ಪಿ ಹೊರಡಲು ಸಿದ್ಧರಾದರು. ಹೆಂಡತಿಯನ್ನು ಕೇಳಿದರು. "ಹಸಿವೆಯಾಗಿದೆ, ತಿನ್ನಲು ಏನಾದರೂ ಬೇಕೆಂದು ತಿಳಿಸಿದರು." "ಮನೆಯಲ್ಲಿ ಏನೂ ಇಲ್ಲವೆಂದು" ಮಡದಿ ತಿಳಿಸಿದಳು. "ಹೊಟ್ಟೆಗೆ ಏನೂ ಇಲ್ಲದೆ ಅಷ್ಟು ದೂರಹೋಗಲು ಶಕ್ತಿ ಸಾಲದೆಂದರು" ಚಾಕ್ರಾಯಣರು.. "ನೋಡಿರಿ, ಆ ಹೊಲದಲ್ಲಿ ಒಬ್ಬ ರೈತನ ಹತ್ತಿರ (ಕುಲ್ಮಾಷ) ಬೇಯಿಸಿದ ಕಡಲೆಗಳಿವೆ. ತಾವು ಕೇಳಿ ಪಡೆದು ಹಸಿವೆಯನ್ನು ಉಪಶಮನ ಮಾಡಿಕೊಂಡು ಕಾರ್ಯನಿರತರಾಗಬೇಕೆಂದು" ತಿಳಿಸಿದಳು.

"ಸ ಹ್ಯೇಭ್ಯಂಕುಲ್ಮಾಷಾನ್ ಖಾದಂತಂ ಬಿಭಿಕ್ಷೇ ತಂ ಹೋವಾಚ ।
ನೇತೋನ್ಯವಿದ್ಯಂತೇ ಯಚ್ಚಯೆ ಮ ಇಮ ಉಪನಿಹಿತಾ ಇತಿ॥"

"ಏತೇಷಾಂ ಮೆ ದೇಹೀತಿ ಹೋವಾಚ। ತಾನಸ್ಮೈಪ್ರದದೌ
ಹಂತಾನುಪಾನ
ಮಿತ್ಯುಚ್ಛಿಷ್ಟಂ ವೈ ಮೇಪೀತಂ ಸ್ಯಾದಿತಿ ಹೋವಾಚ ॥"

"ನ ಸ್ವಿದೇತ್ಯುಚ್ಛಿಷ್ಟಾ ಇತಿ। ನ ವಾ ಅಜೀವಿಷ್ಯಾಮಿ ಮಾನಖಾದಂತೀತಿ।
ಹೋವಾಚ ಕಾವೋನು ಉದಕಪಾನಮಿತಿ॥"

ಛಾಂದೋಗ್ಯ ಉಪನಿಷತ್ ॥

ಚಾಕ್ರಾಯಣರಿಗೆ ಬಂದಿತು ಸಮಸ್ಯೆ. ಚಾಕ್ರಾಯಣರು ಆಚಾರಶೀಲರು. ತಪಸ್ವಿಗಳು, ಋಷಿಗಳು, ಜ್ಞಾನಿಗಳು, ವೇದಾಧ್ಯಯನಾಧಿಗಳನ್ನು ಮಾಡಿದವರು ಯಜ್ಞಯಾಗಾದಿ ಕಾರ್ಯಗಳಲ್ಲಿ ಸಮರ್ಥರು. ಒಮ್ಮಿಂದೊಮ್ಮೆಲೆ ಆ ಕಡಲೆಗಾಗಿ ಧಾವಿಸುತ್ತಾರೆಯೇ, ಅವರ ಮನಸ್ಸು ಇಬ್ಭಾಗವಾಗಿ ಅಖಂಡ ವಾದ ಮಾಡಲಾರಂಭಿಸಿತು. ಕಡಲೆಯನ್ನು ಸ್ವೀಕರಿಸುವದು ಅಥವಾ ನಿರಾಕರಿಸುವದು ಎಂಬದೇ ವಿಷಯ.

ಚಾಕ್ರಾಯಣರು ಇಪ್ಪತ್ತನೇ ಶತಮಾನದ ನನ್ನಂಥ ಕೆಲವರಂತೆ ಪಾರ್ಟಟೈಮ್ (ಕೆಲವು ವೇಳೆ ಮಾತ್ರ) ಬ್ರಾಹ್ಮಣರಲ್ಲ. ಅವರದು ದಿನವೆಲ್ಲ, ವರ್ಷವೆಲ್ಲ, ಆಯುಸ್ಸೆಲ್ಲ ಒಂದೇ ತರಹದ ಜೀವನ. ಸ್ವವಿಹಿತ ವೃತ್ತಿಯಿಂದ ಭಕ್ತಿಯಿಂದ ಭಗವದಾರಾಧನೆಯೇ ಜೀವನ.

ಕ್ಷಾಮಡಾಮರಗಳ ಬೇಗೆಯಲ್ಲಿ ಸಂತಪ್ತರಾದ ಚಾಕ್ರಾಯಣರು, ರಾಜಧಾನಿಗೆ ಹೋಗಲು ಶಕ್ತಿ ಪಡೆಯುವದಕ್ಕೆ, ಯಜ್ಞವನ್ನು ಮಾಡಿಸುವದಕ್ಕೆ ಅದರಿಂದ ರಾಜ್ಯಕ್ಕೆ ಕ್ಷೇಮವಾಗುವದೆಂಬ ನಿಶ್ಚಯದಿಂದ ಮತ್ತು ಬಂದ ಹಣದಲ್ಲಿ ಸ್ವಕುಂಟುಂಬ ಸಂರಕ್ಷಣೆಗೆ ಇನ್ನಿತರ ಉಪಾಯಗಾಣದೆ ರೈತನ ಬಳಿಹೋದರು.

"ತಾವು ಹಸಿದಿರುವದಾಗಿಯೂ ಅವನಲ್ಲಿದ್ದ ಆಹಾರದಲ್ಲಿ ಸ್ವಲ್ಪಭಾಗವನ್ನು ತಮಗಾಗಿ ಕೊಡಲು" ರೈತನನ್ನು ಕೇಳಿದರು. ರೈತನು ಆಗಲೇ ತಿನ್ನಲಾರಂಭಿಸಿದ್ದನು. ತನ್ನ ಮುಂದಿರುವದನ್ನು ಬಿಟ್ಟರೆ ಬೇರೆ

ಇಲ್ಲವೆಂದನು. ಅವುಗಳನ್ನೇ ಕೊಡಲು ಚಾಕ್ರಾಯಣರು ಯಾಚಿಸಿದರು. ಸ್ವ
ಭಾಗ ಕಡಲೆಯನ್ನು ರೈತನು ಕೊಟ್ಟನು. ಚಾಕ್ರಾಯಣರು ಸ್ವೀಕರಿಸಿದರು. ನಂತ
ರೈತನು ತಾನಿಟ್ಟುಕೊಂಡಿದ್ದ ನೀರಿನಲ್ಲಿ ಅರ್ಧನೀರನ್ನು ಸಹ ತಂದು ಮುಂದ
ಇಟ್ಟನು. ಚಾಕ್ರಾಯಣರು ನೀರನ್ನು ಸ್ವೀಕರಿಸಲಿಲ್ಲ. ಉಚ್ಛಿಷ್ಟವೆಂದು ನಿರಾಕರಿಸಿದರು.

ರೈತನು ಚಕಿತನಾದನು. ಇದೇನಿದು! ನೀರು ಉಚ್ಛಿಷ್ಟವಾದರೆ, ಕಡಲೆ ಏಕೆ ಉಚ್ಛಿಷ್ಟವಾಗಲಿಲ್ಲ. ಅದೂ ಅರ್ಧಬಳಸಿದ್ದೇ, ಎಂದನು.

ಚಾಕ್ರಯಾಣರು ಹೇಳಿದರು. ಪ್ರಾಣಹೋಗುವ ಸಮಯ. ಕಡಲೇ ತಿನ್ನ ಬೇಕಾದದ್ದು ಅವಶ್ಯಕ ಅಪರಿಹಾರ್ಯ. "ಶರೀರಮಾದ್ಯಂ ಖಲು ಧರ್ಮಸಾಧನಂ" (ಕಾಳಿದಾಸ) . ಪ್ರಾಣ ಉಳಿದರೆ ತಾನೇ ಧರ್ಮಾಚರಣೆ. ಆದರೆ ಕಡಲೆ ತಿಂದ ಮೇಲೆ, ಸ್ವಲ್ಪ ಶಕ್ತಿ ಬಂದ ಮೇಲೆ ನೀರು ಕುಡಿಯುವದು ಐಚ್ಛಿಕ (optional). ಪವಿತ್ರವಾದದ್ದನ್ನು ಅರಸಿ ಪಡೆಯುವ ಶಕ್ತಿ ಬಂದಿದೆ. ಯಾವದು ಗ್ರಾಹ್ಯವೋ ಅದನ್ನು ಸ್ವೀಕರಿಸಲು ಶಕ್ತಿ ಬಂದಿದೆ. ಆದ್ದರಿಂದ ಈಗ ಉಚ್ಛಿಷ್ಟ ಜಲವನ್ನು ಸ್ವೀಕಾರ ಮಾಡುವದು ಅಧರ್ಮವೆಂದು ತಿಳಿಸಿದರು.

ಇಲ್ಲಿ ಧರ್ಮಾಧರ್ಮ ವಿಷಯಗಳಲ್ಲಿ ಚಾಕ್ರಾಯಣರು ಒಂದು ಗೆರೆ ಎಳೆದು ವಿಭಾಗ ಮಾಡಿದ್ದಾರೆ. ಅವರು ಕಡಲೆತಿಂದರು ಆದರೆ ನೀರು ಕುಡಿಯಲಿಲ್ಲ. ಧರ್ಮಾಧರ್ಮದ ವಿಷಯಗಳನ್ನು ಬಹಳ ಸೂಕ್ಷ್ಮವಾಗಿ ವಿಮರ್ಶೆಮಾಡಿ, ಅವಶ್ಯಕ ಅನವಶ್ಯಕ – ಧರ್ಮೋಲ್ಲಂಘನೆಗಳ ಬಗ್ಗೆ ಅವರ ಮನಸ್ಸಿನಲ್ಲಿ ಮೂರು ಪ್ರಶ್ನೆಗಳು ಉದ್ಭವವಾಗಿರಲು ಸಾಧ್ಯ.

(1) ರೈತನಲ್ಲಿದ್ದ ಆಹಾರವನ್ನು ಸ್ವೀಕಾರಮಾಡುವದು – ಅವಶ್ಯಕವೋ ? (Is it essential)

(2) ಈ ಉಚ್ಛಿಷ್ಟ ಕಡಲೆ ಸ್ವೀಕಾರ ಅನಿವಾರ್ಯವೇ – ಗತ್ಯಂತರ ವಿಲ್ಲವೇ ? (Is it inevitable)

(3) ಧರ್ಮೋಲ್ಲಂಘನೆಯು ಅತ್ಯಂತ ಕನಿಷ್ಟ ಪ್ರಮಾಣದ್ದಾಗಿದೆಯೇ.? (Is the deviation minimum)

ಕಡಲೇ ಸ್ವೀಕಾರ ವಿಷಯದಲ್ಲಿ ಅವರ ಮನಸ್ಸು ಮೊದಲನೆಯ ಎರಡು ಪ್ರಶ್ನೆಗಳಿಗೆ ಹೌದು (Yes) ಎಂದು ಉತ್ತರ ಹೇಳಿತು. ಕೇವಲ ಕಡಲೆಯನ್ನು ತಿಂದದ್ದು ಮತ್ತು ಜಲಸ್ವೀಕಾರ ಮಾಡದೇ ಇರುವದು ಮೂರನೆಯ ಪ್ರಶ್ನೆಗೆ ಹೌದು (Yes) ಎಂದು ಅವರ ಮನಸ್ಸು ಉತ್ತರ ಹೇಳಿರಬೇಕು.

ಮಾನವನು ಧರ್ಮೋಲ್ಲಂಘನೆಯನ್ನು ಸುಖಕ್ಕಾಗಿ ಮಾಡಬಾರದು. ಅದು ಹೇಯ, ವರ್ಜ ಮತ್ತು ಪಾಪ. ಆಪತ್ಕಾಲದಲ್ಲಿ ಮಾತ್ರ ಆ ವಿಚಾರ. ಆಪತ್ತು ನಿವಾರಣೆಯಾದೊಡನೆಯೇ ಧರ್ಮಮಾರ್ಗವೇ ರಾಜಮಾರ್ಗ.

ಈ ಧರ್ಮೋಲ್ಲಂಘನದಿಂದೊದಗಿದ ಕ್ಷುದ್ರ ಪಾಪಗಳನ್ನು ಚಾಕ್ರಾಯಣರು ಮುಂದಿನ ಸಂಧ್ಯಾಕಾಲದ ಸಂಧ್ಯೋಪಾಸನೆಯಿಂದ ಅದರಲ್ಲಿಯೂ ವಾಮದೇವಋಷಿ ಮಂತ್ರದ ಅನುಸಂಧಾನದಿಂದ "ಯದುಚ್ಛಿಷ್ಟಂ ಅಭೋಜ್ಯಂ ಯದ್ವಾದುಶ್ಚರಿತಂಮಮ ಸರ್ವಂಪುನಂತು ಮಾಮಾಪೋಽಶತಾಂಚ ಪ್ರತಿಗ್ರಹಿಸ್ವಾಃ" (ಸಂಧ್ಯಾವಂದನ)

ದೋಷ ಕಳೆದುಕೊಂಡಿರಲು ಸಾಧ್ಯ.

ವಾಹನಗಳನ್ನು ಮುಖ್ಯಮಾರ್ಗದಲ್ಲಿ ಚಲಿಸುವದೇ ವಾಹಕರ ಧ್ಯೇಯ. ಆದರೆ ಮುಖ್ಯ ಮಾರ್ಗದಲ್ಲಿ ಕೆಲವು ಸಲ ಹೋಗಲು ಸಾಧ್ಯವಿಲ್ಲದಿರುವಾಗ ಪಕ್ಕದ ರಸ್ತೆಯಿಂದ ಸ್ವಲ್ಪ ದೂರ ಹೋಗಿ ಪುನಃ ವಾಹನವು ಮುಖ್ಯ ರಸ್ತೆಗೇ ಸೇರುತ್ತದೆ. ಮುಖ್ಯ ಮಾರ್ಗದಲ್ಲಿ ಹೋದರೇ ಅಪಾಯಕಡಿಮೆ. ಇದರಂತಿದೆ ಧರ್ಮೋಲ್ಲಂಘನೆಯೂ ಸಹ.

ಸದಾಕಾಲದಲ್ಲಿ ಧರ್ಮಮಾರ್ಗದಲ್ಲಿರುವದು ಉತ್ತಮಪಕ್ಷ. ಭಗವತ್ಪ್ರೀತಿಕರ. ಆದರೆ ಅನಿವಾರ್ಯ ಸಂದರ್ಭ ಒದಗಿದಾಗ, ನಮ್ಮ ಶಕ್ತಿ ಮೀರಿದಾಗ, ಅತಿಕ್ರಮಣವು ಅವಶ್ಯಕವಾದಾಗ ಮಹಾಶಯರಾದ ಚಾಕ್ರಾಯಣರ ಸೂತ್ರವನ್ನು ಅತ್ಯಂತ ಪ್ರಾಮಾಣಿಕವಾಗಿ ಉಪಯೋಗಿಸುವಾ :

(1) ಇದು ಅವಶ್ಯಕವೇ? (It is essential)
(2) ಇದು ಅನಿವಾರ್ಯವೇ? (Is it inevitable)
(3) ಇದು ಕನಿಷ್ಟವೇ? (Is the deviation minimum)

ಇವು ಮೂರಕ್ಕೂ ಆತ್ಮಸಾಕ್ಷಿಯಿಂದ ಹೌದು ಎಂಬ ಉತ್ತರಗಳಿರಬೇಕು. ಧರ್ಮಾತಿಕ್ರಮಣಮಾಡಬೇಕಾದರೆ.

ಮನೆಯಲ್ಲಿ ಬರ್ನಾಲ್‌ಮಲಾಮ್ ಇದ್ದಾಕ್ಷಣಕ್ಕೆ ಬೇಕಾಗಿ ಕೈಸುಟ್ಟುಕೊಳ್ಳುವುದು ಹೇಗೆ ಮೂರ್ಖತನವೋ ಹಾಗೆಯೇ ಅಜಾಗರೂಕ-ಅತಿಕ್ರಮಣ ಧರ್ಮವಿಷಯದಲ್ಲಿ.

ಚಾಕ್ರಾಯಣರಿಗೆ ಜೀವನದಲ್ಲಿ ಒಮ್ಮೆ ಬಂದ ಆಪತ್ಸಮಯವನ್ನು ಎದುರಿಸಿ ಮುಂದೆ ಯಜ್ಞ ಯಾಗಾದಿಗಳನ್ನು ನಡೆಯಿಸಿ, ಮುಖ್ಯ ಪೌರೋಹಿತ್ಯವನ್ನು ವಹಿಸಿ ಸಾಕಷ್ಟು ಹಣವನ್ನು ಸಂಭಾವನಾರೂಪವಾಗಿ ಪಡೆದರು.

ಚಾಕ್ರಾಯಣರಿಗೆ ಜೀವನದಲ್ಲಿ ಇಂಥ ಸಂದರ್ಭ ಒಮ್ಮೆ ಬಂದರೆ, ಈಗ ಇಪ್ಪತ್ತನೆಯ ಶತಮಾನದಲ್ಲಿ ಮತ್ತು ಮುಂದೆ ಮುಮುಕ್ಷುಗಳು ಇಂಥ ಸಂದರ್ಭಗಳನ್ನು ನಿತ್ಯವೂ ಎದುರಿಸಬೇಕಾಗಿದೆ. ಹೆದರಬೇಕಾದ್ದಿಲ್ಲ. ವಿಘ್ನಗಳೆಷ್ಟಿವೆಯೋ ಉಪಾಯಗಳು ಅದಕ್ಕಿಂತಲೂ ಅಧಿಕವಾಗಿಯೇ ಇವೆ ಎಂದು ಹೇಳಬಹುದು. ಇದೊಂದು ಸಾಮಾನ್ಯ ಉದಾಹರಣೆ ಮಾತ್ರ. ಎಲ್ಲ ಆಪದ್ಧರ್ಮ ಪ್ರಾಯಶ್ಚಿತ್ತಾದಿಗಳಿಗೆ ಶಾಸ್ತ್ರಗಳೇ ಮುಖ್ಯ ಪ್ರಮಾಣಗಳು. ಗುರುಗಳಿಂದ ಧರ್ಮಜ್ಞರಿಂದ ಇವುಗಳನ್ನು ಅರಿಯಬೇಕು. ಆ ಪ್ರಕಾರ ಆಚರಿಸಬೇಕು. "ತಸ್ಮಾತ್ ಶಾಸ್ತ್ರಂ ಪ್ರಮಾಣಂ ತೇ ಕಾರ್ಯಾಕಾರ್ಯವ್ಯವಸ್ಥಿತಾ".

ಧರ್ಮಪಥದಲ್ಲಿ ಬೆಳಕು ಚೆಲ್ಲಿದ ಉಷಸ್ತಿ ಚಾಕ್ರಾಯಣರಿಗೆ ಧನ್ಯವಾದಗಳನ್ನು ಹೇಳುತ್ತ, ಛಾಂದೋಗ್ಯ ಉಪನಿಷತ್ತಿನ ಉಪಕಾರವನ್ನು ಸ್ಮರಿಸುತ್ತಾ, ಧರ್ಮವೇ ಜಯವೆಂದು ಆ ಮಾರ್ಗದಲ್ಲಿಯೇ ತತ್ವಾಭಿಮಾನಿ

ದೇವತೆಗಳಿಗೆ ಧರ್ಮಮಾರ್ಗದಲ್ಲಿಯೇ ನಮಗೆ ಪ್ರೇರಕರಾಗಿರಿ ಎಂದು ಪ್ರಾರ್ಥಿಸುತ್ತ, ಭಗವಂತನ ಪಾದಾರವಿಂದಗಳಲ್ಲಿ ಈ ಲೇಖನದ ಮೂರು ಭಾಗಗಳನ್ನೂ ಸಮರ್ಪಿಸುವಾ.

ಓಂ ತತ್ಸತ್

# ಆಧ್ಯಾತ್ಮಿಕ ಆಶಾಕಿರಣಗಳು
# ಭಾಗ – ೧

ಪ್ರಕೃತ ಪ್ರಪಂಚದ ಪ್ರವಾಹವನ್ನು ಪ್ರೇಕ್ಷಕರ ದೃಕ್ಷಿಯಿಂದ ವೀಕ್ಷಿಸಿದರೆ ಪ್ರತಿದಿನದಲ್ಲಿ ಪ್ರಯಾಸಪಡುವದೆಲ್ಲ ವಿವಿಧ ಜೀವನದ ಮತ್ತು ಸಾಂಸಾರಿಕ ಪರಿಕರಣಗಳಾದ ಅನ್ನ, ವಸ್ತ್ರ, ವಸತಿ, ಇನ್ನು ಕೆಲವು ನೂತನ ಸಾಮಗ್ರಿಗಳು ಇವುಗಳ ಸಂಪಾದನೆಯಲ್ಲಿಯೇ ಆಯುಸ್ಸಿನ ಬಹುಭಾಗ ಕಳೆದುಬಿಡುತ್ತದೆ. ಪೂರ್ವಯೌವನ ಮತ್ತು ಯೌವನದಲ್ಲಿ ಬದುಕುವ ಮಾರ್ಗವನ್ನವಲಂಬಿಸಿ ಅಥವಾ ಉದ್ಯೋಗವನ್ನವಲಂಬಿಸಿ ಅದಕ್ಕೆ ತಕ್ಕಂಥ ವಿದ್ಯೆಯನ್ನು ಕಲಿಯುವದು, ಪರೀಕ್ಷೆಗಳನ್ನು ಉತ್ತಮ ರೀತಿಯಲ್ಲಿ ಉತ್ತೀರ್ಣರಾಗುವದು ಇದೇ ಮುಖ್ಯ ಹಂಬಲ ಮತ್ತು ಧ್ಯೇಯ. ಅರ್ಹತೆ ಪಡೆದ ಮೇಲೆ ಉದ್ಯೋಗ, ಗೃಹಸ್ಥಾಶ್ರಮಸ್ವೀಕಾರ, ತರುವಾಯ ಕುಟುಂಬ ವೃದ್ಧಿ, ಹೀಗೆಯೇ ಮುಂದುವರಿಯುತ್ತದೆ ಕಾಲಗತಿ.

ಈ ಇಪ್ಪತ್ತನೆಯ ಶತಮಾನದ ವೈಶಿಷ್ಟ್ಯವೇನೆಂದರೆ ವಿದ್ಯೆಗೂ – ಉದ್ಯೋಗಕ್ಕೂ ನೇರವಾದ ಸಂಬಂಧವೇರ್ಪಟ್ಟಿದೆ. ಹತ್ತೊಂಬತ್ತನೆಯ ಶತಮಾನ – ತತ್ಪೂರ್ವದಲ್ಲಿ ವಿದ್ಯೆಗೂ ವೃತ್ತಿಗೂ ನೇರ ಸಂಬಂಧವಿದ್ದಂತೆ ಕಾಣುವದಿಲ್ಲ. ವಿದ್ಯೆಗೂ – ಬುದ್ಧಿವಿಕಾಸ ಮತ್ತು ಆತ್ಮವಿಕಾಸಗಳಿಗೆ ಸಂಬಂಧವಿತ್ತು ಮತ್ತು ಜೀವನವೂ ಸಾಗುತ್ತಿತ್ತು. ವಿದ್ಯೆಕಲಿಯುವದು ಉದ್ಯೋಗಕ್ಕಾಗಿ ಆಗಿರಲಿಲ್ಲ. ಬ್ರಿಟಿಷರ ಕಾಲದಲ್ಲಿ ಪ್ರಾರಂಭವಾಯಿತು ವಿದ್ಯೆ – ಉದ್ಯೋಗಗಳ ಸಂಬಂಧ. ಮೆಟ್ರಿಕ – ಪಾಸಾಗಿರಿ ವೃತ್ತಿ ಪಡೆಯಿರಿ (pass metric and get a job). ಈ ಶತಮಾನದ ಉತ್ತರಾರ್ಧದಲ್ಲಿಯಂತೂ ಅದೆಷ್ಟು ಶಾಲೆಗಳು, ಅಸಂಖ್ಯಾತ ಕಾಲೇಜುಗಳು, ಯುನಿವರ್ಸಿಟಿಗಳು ಉದ್ಭವವಾದವು. ಶಿಕ್ಷಕರದು ವಿದ್ಯಾರ್ಥಿಗಳದು ಬೃಹತ್ಸಂಖ್ಯೆ. ಈಗಂತೂ ವಿದ್ಯೆಸಂಪಾದನೆ ಮತ್ತು ಉದ್ಯೋಗಸಂಪಾದನೆಗೆ ಪೈಪೋಟಿ ಹೆಚ್ಚಾಗಿದೆ.

ಅಂತೂ ಈ ರೀತಿಯಲ್ಲಿ ಎಷ್ಟೇ ಕಾಲ ಕಳೇದರೂ, ನಲವತ್ತರ ವೇಳೆಗೆ ಬಹುಜನ ಬುದ್ಧಜೀವಿಗಳಿಗೆ ಒಂದು ವಿಶೇಷಪ್ರಜ್ಞೆ ಮೂಡುತ್ತದೆ. ಗತಿಸಿದ ದಿನಗಳನ್ನೂ ಹಾಗೆಯೇ ಗತಿಸತಕ್ಕ ದಿನಗಳನ್ನೂ ಕುರಿತು ಒಂದು ಸಲ ಆಲೋಚಿಸುತ್ತಾನೆ. ವಿವಿಧ ಸಾಂಸಾರಿಕ ದುಃಖದರ್ಶನಗಳಿಂದಲೂ, ಸಮಾಜದಲ್ಲಿಯ ಅನೇಕ ಸಿಹಿ–ಕಹಿ ಅನುಭವಗಳಿಂದಲೂ ಈ ನಲವತ್ತರ ವೇಳೆಗೆ, ಪ್ರತಿಯೊಬ್ಬ ವ್ಯಕ್ತಿಗೂ ತನ್ನದೇ ಆದ ಒಂದು ಅನುಭವ ಜನ್ಯ ವೈಯುಕ್ತಿಕ ವೇದಾಂತವಿಚಾರಗಳ ಉದಯವಾಗುತ್ತದೆ. ಆ ಸಮಯದಲ್ಲಿ ಇವನಿಗಿಂತ ಪೂರ್ವದಲ್ಲಿಯೇ ಸುವ್ಯವಸ್ಥಿತ ರೀತಿಯಲ್ಲಿ ಬರೆದಿಟ್ಟ ಸಿದ್ಧರ – ಜ್ಞಾನಿಗಳ ವಾಕ್ಯಗಳು ಕಣ್ಣಿಗೆ ಬಿದ್ದರೆ ಕಿವಿಗೆ ಕೇಳಬಂದರೆ ಬಹಳ ಆಪ್ಯಾಯಮಾನವಾಗಿರುತ್ತವೆ. ಅದರಲ್ಲಿಯೂ ಮುಮುಕ್ಷು ಜೀವರಿಗೆ, ತಾವು ದೈನಂದಿನ ಲೌಕಿಕ ವ್ಯವಹಾರಗಳನ್ನು ಜೀವನದ ಉದ್ದಕ್ಕೂ ಮಾಡಿದರೆ ಸಾಕೇ ಅಥವಾ ಇನ್ನೇನಾದರೂ ಹೆಚ್ಚಿನದು ಉತ್ತಮವಾದದ್ದು ಐಹಿಕ ಆಮುಷ್ಮಿಕಕ್ಕೆ ಅನುಕೂಲವಾದದ್ದು ಇದೆಯೇ ಎಂದು ಯೋಚನೆ ಬರುತ್ತದೆ. ಸಂಸಾರವು ಪ್ರೆಶ್ಶರ್ ಕುಕ್ಕರ್ ಇದ್ದಹಾಗೆ. ಎಂಥ ಗಟ್ಟಿ ಪದಾರ್ಥಗಳೂ ಮೆತ್ತಗಾಗುತ್ತದೆ. ಹಾಗೆಯೇ ಸಂಸಾರದಲ್ಲಿ ಮೆತ್ತಗಾಗದವನೇ ಇಲ್ಲ. ಅದರಲ್ಲೂ ಜನ್ಮಾಂತರ ಸಂಸ್ಕಾರದಿಂದಲೋ, ಸಜ್ಜನರ ಸಂಗದಿಂದಲೋ, ಜ್ಞಾನಿಗಳ ವಾಕ್ಯಶ್ರವಣದಿಂದಲೋ, ತೀರ್ಥಕ್ಷೇತ್ರಗಳ ದರ್ಶನಫಲವಾಗಿಯೋ, ಅಥವಾ ಮಾತಾಪಿತೃಗಳ ಹಿತವಚನ ಆಚರಣ ವಿಶೇಷ / ಫಲಾದಿದೃಶ್ಯಗಳಿಂದಲೋ ತಾವು ಭಗವಂತನನ್ನು ಕುರಿತು ಆಲೋಚಿಸಬೇಕಾದ ಕೆಲವು ವಿಚಾರಗಳಿವೆ; ಆಚರಿಸಬೇಕಾದ ಕೆಲವು ನಿತ್ಯನೈಮಿತ್ತಿಕ ಆಚರಣೆಗಳಿವೆ. ಎಂಬ ವಿಚಾರದ ಕುಡಿ ಏಳುತ್ತದೆ, ಕಳೆದ ಕಾಲ ವ್ಯರ್ಥವಾದದ್ದೂ ಮುಂದಾದರೂ ಹೇಗೆ ಸಾರ್ಥಕಪಡಿಸಬೇಕೆಂಬ ವಿಚಾರ ಒಡಮೂಡುತ್ತದೆ.

ಏನ್ರೀ, ಇದೆಲ್ಲ ಕೇವಲ ಊಹಾತ್ಮಕ ಪ್ರಪಂಚವಾಯಿತಲ್ಲ. ಎಂದರೆ, ಹಾಗಲ್ಲ. ನನ್ನ ಅನುಭವದಲ್ಲಂತೂ ಅನೇಕ ಜನರಿಗೆ ಈ ಪ್ರಜ್ಞೆ ಒಡಮೂಡಿದ್ದು ಕಂಡುಬಂದಿದೆ. ನಿಮ್ಮ ಅನುಭವವೂ ಹೀಗೆಯೇ ಇರುತ್ತದೆ. ಎಲ್ಲ ಕೋಮಿನಲ್ಲೂ ಇಂಥ ಬುದ್ಧಿ ಜೀವರುಗಳನ್ನು ಕಾಣಬಹುದು. ಉದಾಹರಣೆಗೆ – ಜರ್ಮನ್ ದೇಶದ ಸುಪ್ರಸಿದ್ಧ

ಇಮ್ಯಾನ್ಯುಯಲ್‌ಕಾಂಟ್ ಎಂಬ ತತ್ವಜ್ಞಾನಿಯ ಜೀವನ ನಲವತ್ತರವರೆಗೆ ಅಂತಹ ಹೇಳಿಕೊಳ್ಳುವಂತಹದೇನಿಲ್ಲ. ಎಲ್ಲರಂತೆ ಅವನೂ ಒಬ್ಬ ಸಾಮಾನ್ಯ ಬುದ್ಧಿ ಜೀವಿ. ಅವನಿಗೆ ಸುಮಾರು ನಲವತ್ತರಲ್ಲಿ ವಿಶೇಷ ಪ್ರಜ್ಞೆ ಒಡಮೂಡಿತು. ಅವನು ಪೌರ್ವಾತ್ಯ ಪಾಶ್ಚಿಮಾತ್ಯ ತತ್ವಜ್ಞಾನವನ್ನು ಅಧ್ಯಯನ ಮಾಡಿದ, ಹಿಂದೂ ಧರ್ಮ ತತ್ವಗಳ ಮೇಲೆ ಬೃಹದಾಕಾರದಲ್ಲಿ ಬೃಹತ್ಸಂಖ್ಯೆಯಲ್ಲಿ ಗ್ರಂಥಗಳನ್ನು ರಚನೆ ಮಾಡಿದನು. ಇವನು ಪ್ರಸಿದ್ಧ. ಅಪ್ರಸಿದ್ಧರು ಲೆಖ್ಖವಿಲ್ಲದಷ್ಟು ಜನರಿದ್ದಾರೆ. ಇಂಥ ಉದಾಹರಣೆಗಳು ಸಾಕಷ್ಟಿವೆ.

ಹೀಗೆ ನಲವತ್ತು, ಐವತ್ತು, ಅರವತ್ತು ವರ್ಷಗಳು ಲೋಕವೃತ್ತಿಯಲ್ಲಿ ಕಾಲಕಳೆದು ನಂತರ ಅಧ್ಯಾತ್ಮ ಜೀವನದ ಕಡೆಗೆ ಮುಖ ತಿರುಗಿಸಿದಾಗ ಅಥವಾ ಭಗವಂತನ ವಿಚಾರ ಮಾಡಬೇಕೆನಿಸಿದಾಗ ಅಥವಾ ಭಗವಂತನಲ್ಲಿ ಭಕ್ತಿಸಾಮಾನ್ಯ ಒಡ ಮೂಡಿದಾಗ, ಗ್ರಂಥಮೂಲಕವೋ ಅಥವಾ ವೈಯುಕ್ತಿಕವಾಗಿಯೋ ಗುರುಸಾಮೀಪ್ಯವನ್ನು ಪಡೆದಾಗ ಅವರ ಪ್ರತಿಕ್ರಿಯೆ ಅಥವಾ ಅನಿಸಿಕೆಗಳೇನು? ನಮ್ಮೆಲ್ಲರ ಅನುಭವದಲ್ಲಿ ಒಬ್ಬರೋಗಗ್ರಸ್ಥನಾದವನು ವಿಳಂಬವಾಗಿ ವೈದ್ಯರ ಬಳಿಗೆ ಹೋದಾಗ ಅವರು ಕೇಳುತ್ತಾರೆ "ಇಷ್ಟು ತಡವಾಗಿ ಏಕೆ ಬಂದಿರಿ? ಸ್ಥಿತಿ ಆಶದಾಯಕವಾಗಿಲ್ಲ. ಭರವಸೆ ಕೊಡಲಾರೆವು." ಇತ್ಯಾದಿ ಹೇಳುತ್ತಾರೆ. ಇಲ್ಲಿಯೂ ಕೂಡ ಭವರೋಗಗ್ರಸ್ಥನಾದವನು ಜೀವನದಲ್ಲಿ ವಿಳಂಬವಾಗಿ ಅಧ್ಯಾತ್ಮ ಮಾರ್ಗಕ್ಕೆ ತಿರುಗಬೇಕೆನಿಸಿ ಗುರುಗಳನ್ನು ಸಮೀಪಿಸಿದಾಗ, ಇನ್ನು ಏನೂ ಸಾಧ್ಯವಿಲ್ಲ, ಎಲ್ಲವೂ ಕೈಮೀರಿ ಹೋಗಿದೆ, ಎನ್ನುತ್ತಾರೆಯೇ? ಇಲ್ಲ. ಅವರ ಮೊದಲಿನ ಭರವಸೆಯ ಮತ್ತು ಸ್ಫೂರ್ತಿದಾಯಕ ಆಶಾದಾಯಕವಾದ ಈ ಕೆಳಗಿನ ವಚನವನ್ನು ಶ್ರವಣ ಮಾಡುವ ನಿರೀಕ್ಷಣೆ ಇದೆ.

ಯ ಏತತ್ ಪರತಂತ್ರಂತು ಸರ್ವಮೇವ ಹರೇಸ್ಸದಾ ॥
ವಶಮಿತ್ಯೇವಜಾನಾತಿ ಸಂಸಾರಾನ್ಮುಚ್ಯತೇಹಿಸಃ ॥ ತತ್ವವಿವೇಕ ॥
ಮಧ್ವಾಚಾರ್ಯ॥

"ಆಸ್ತಿಕ ಮಹಾಶಯರೇ; ಇಷ್ಟು ದಿನಗಳಲ್ಲಿ ಸಾಧಿಸಿದ ಭೌತಿಕ ಪ್ರಪಂಚದ ಅಧ್ಯಯನ, ಅಧ್ಯಾಪನ (ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತಶಾಸ್ತ್ರ, ಭೂಗರ್ಭಶಾಸ್ತ್ರ, ಪ್ರಾಣಿಶಾಸ್ತ್ರ, ಇಂಜಿನಿಯರಿಂಗ್,

ಮೆಡಿಕಲ್, ಇತ್ಯಾದಿಗಳಲ್ಲಿ ಜೀವನಾವಧಿ ವೃತ್ತಿ) ಮತ್ತು ದೃಷ್ಟಾದೃಷ್ಟ ಚರಾಚರ ವಸ್ತುಗಳು ಇವೆಲ್ಲವೂ ಪರತಂತ್ರವೆಂದು ತಿಳಿಯಿರಿ.

ಪರ ಎಂದರೆ ಶ್ರೇಷ್ಠ/ಉತ್ಕೃಷ್ಟ. ತಂತ್ರ ಅಂದರೆ ಅಧೀನ. ಪರತಂತ್ರ ಎಂದರೆ ನಮ್ಮಗಳಿಂದ ಭಿನ್ನವಾದ ಒಬ್ಬ ಶ್ರೇಷ್ಟ ವ್ಯಕ್ತಿಯ ಅಧೀನದಲ್ಲಿದೆ ಈ ಚರಾಚರ ಪ್ರಪಂಚ. ಇಷ್ಟು ತಿಳಿದರೆ ಅಧ್ಯಾತ್ಮಪ್ರಪಂಚದಲ್ಲಿ ಅರ್ಧಕೆಲಸವಾಯಿತು. ಉಳಿದರ್ಧ ಪರನನ್ನು ತಿಳಿಯುವದು.

ವೇದಾಂತ ಸಾಮ್ರಾಜ್ಯದಲ್ಲಿ ಈ ಪರನೇ ಶ್ರೀಹರಿಯೆಂದು ಶ್ರುತಿ ಸ್ಮೃತಿಗಳ ಉಸಿರು. ಚರಾಚರರಿಗೆ ಸಂಬಂಧಪಟ್ಟ ಸರ್ವವ್ಯಾಪಾರವೂ ಶ್ರೀಹರಿಯ ಅಧೀನ ಎಂದು ಇಷ್ಟು ತಿಳಿದರೂ ಸಾಕು. ಈ ಸಂಸಾರವೆಂಬ ಜನನ ಮರಣ ಪ್ರವಾಹದಿಂದ ಮಕ್ತನಾಗುತ್ತಾನೆ. ಎಂದು ಶ್ರೀಮನ್ಮಧ್ವಾಚಾರ್ಯರ ಅಭಯ.

ಈ ಬುದ್ದಿಜೀವಿಗೆ ಆಕಾಂಕ್ಷೆ ಬರುತ್ತದೆ. ತನ್ನ ವಿಷಯಗಳೆಲ್ಲವೂ ತನ್ನ ಅಧಿನದಲ್ಲಿ ಇಲ್ಲದಿರುವಾಗ ಮತ್ತೆ ಯಾರ ಅಧಿನದಲ್ಲಿರಬೇಕು. ಅದನ್ನೇ "ಪರ"ಎಂದಾಗ ಸರ್ವವನ್ನೂ ತನ್ನ ಅಧೀನದಲ್ಲಿಟ್ಟುಕೊಂಡ ಆ ಪರನಾರು? ಎಂದು.

ಆದರೆ ಹೆಚ್ಚಿಗೆ ಕಾಲವಿಲ್ಲ. ಬಹಳ ಕ್ಲಿಷ್ಟವಾದದ್ದು ಅರ್ಥ ಮಾಡಿಕೊಳ್ಳಲು ಸಾಧ್ಯವಿಲ್ಲ. ಕೃಚ್ಛ ಚಾಂದ್ರಾಯಣಾದಿಗಳನ್ನು ಆಚರಿಸಲು ದೇಹದಲ್ಲಿ ಬಲವಿಲ್ಲ. ಮೊದಲಿನಿಂದ ಉಪೋಷಣಾದಿ ಅಭ್ಯಾಸವೂ ಇಲ್ಲ. ಎಷ್ಟು ಮಾಡುವದು, ಹೇಗೆ ಮಾಡುವದು, ಏನು ಮಾಡುವದು, ಏನು ತಿಳಿಯುವದು ಇತ್ಯಾದಿ ಕುತೂಹಲಗಳು ಮನಸ್ಸಿನಲ್ಲಿ ಉದಯವಾಗುತ್ತವೆ.

ಒಂದು ಸಲ ಅಧ್ಯಾತ್ಮ ಮಾರ್ಗದ ಕಡೆಗೆ ಗಮನ ಬಂದು ಸ್ವಲ್ಪಸ್ವಲ್ಪವಾಗಿ ಶ್ರವಣಮನನಾದಿಗಳನ್ನು ಮಾಡುತ್ತ, ಅಲ್ಪಸ್ವಲ್ಪವಾಗಿ ವಿಧ್ಯುಕ್ತ ನಿತ್ಯಕರ್ಮಾಚರಣೆಯನ್ನು ಶಕ್ಯಸಾಧನ ವಿಚಾರ ಮಾಡುತ್ತಿರುತ್ತಾನೆ.

ಈ ಜನನ ಮರಣ ಪ್ರವಾಹರೂಪವಾದ ಸಂಸಾರದಲ್ಲಿ ಸಿಕ್ಕುವ ಹೆಂಡತಿ, ಮಕ್ಕಳು, ಆಧಿ, ವ್ಯಾಧಿ, ರೋಗ, ರುಜಿನ, ಮೋಸ, ನಿರಾಸೆ,

ಕೊರತೆ ಇವುಗಳಿಗೆ ಸಿಕ್ಕು ಎಂಥ ಎದೆಗಾರನೂ ಮೆತ್ತಗಾಗಿ ಬಿಡುತ್ತಾನೆ. ಈ ಅನನ್ಯ ಅನುಭವದ ಪರಿಣಾಮವಾಗಿ ಭಗವಂತನಲ್ಲಿ ನಂಬಿಕೆಯೂ ಬರಹತ್ತಿರುತ್ತದೆ. ಡಾಲರ್ ಮತ್ತು ಸ್ಟರ್ಲಿಂಗಗಳನ್ನು ಗಳಿಸಲು ಹೋದ ನಮ್ಮ ಭಾರತ ಸೋದರರರದೂ ಹೀಗೆಯೇ ಅನುಭವ. ನಾವು ಸ್ವತಂತ್ರರಲ್ಲ. ನಾವು ಅಂದುಕೊಂಡಂತೆ ನಡೆಯುವದಿಲ್ಲವೆಂಬದು ಅನುಭವವೇದ್ಯ.

ಇಂಥ ಸಮಯದಲ್ಲಿ ಮಾನವನ ಉನ್ನತಿಗೆ ಬೇಕಾಗಿರುವದು ಸುಲಭೋಪಾಯಗಳು. ಕ್ಲಿಷ್ಟರಹಿತ ಶ್ರವಣಾದಿಗಳು, ಕಠಿಣ ವರ್ಜಆಚರಣೆಗಳು ಏನಾದರೂ ಇವೆ ಎಂದರೆ ಅವುಗಳೇ "**ಆಧ್ಯಾತ್ಮಿಕ ಆಶಾಕಿರಣಗಳು.**" ಮೂಲತಃ ವೇದಾದಿ ಶಾಸ್ತ್ರಗಳಲ್ಲಿ ಇಂಥಹ ಶಾಸ್ತ್ರೀಯ ಆಶಾಕಿರಣಗಳು ತುಂಬಿದ್ದರೂ ಇವನ್ನು ಅರ್ಥಮಾಡಿಕೊಳ್ಳಬೇಕಾದರೆ ಒಬ್ಬ ಗುರುವಿನ ಅವಶ್ಯಕತೆ ಇರುತ್ತದೆ. ಅಂತಹ ಗುರುಗಳಲ್ಲಿ ಶ್ರೀಮನ್ ಮಧ್ವಾಚಾರ್ಯರು ಒಬ್ಬ ಅತಿ ಶ್ರೇಷ್ಠಗುರುಗಳನ್ನೆಬಹುದು. ಶ್ರೀಮಧ್ವಾಚಾರ್ಯರ ಗ್ರಂಥಗಳಲ್ಲಿ ಇಂಥ ಆಶಾಕಿರಣಗಳನ್ನು ಸಾಕಷ್ಟು ಬೆಳಕಿಗೆ ತಂದು ಉಪಕಾರ ಮಾಡಿದ್ದಾರೆ. ಭಗವಂತನಲ್ಲಿ ಆಸಕ್ತಿಯುಳ್ಳ ಎಂಥ ಸಾಮಾನ್ಯರನ್ನೂ ಅವರು ನಿರಾಶೆಗೀಡುಮಾಡುವದಿಲ್ಲ. ಇಲ್ಲಿ ಅಂತಹ ಕೆಲವು ಆಶಾಕಿರಣಗಳನ್ನು ನೋಡುವಾ. ಉದಾಹರಣೆಗೆ ಹೇಳಬೇಕಾದರೆ ಕೃಷ್ಣಾಮೃತ ಮಹಾರ್ಣವ ಎಂಬ ಒಂದು ಪುಟ್ಟ ಗ್ರಂಥದಲ್ಲಿ ಶ್ರೀಮನ್‌ಮಧ್ವಾಚಾರ್ಯರು ಎಲ್ಲ ಸಾಧಕರ ಉಪಯೋಗಕ್ಕಾಗಿ ಬೇರೆ ಬೇರೆ ಶಾಸ್ತ್ರ ಮೂಲಗಳಿಂದ ವಿಶಿಷ್ಟ ವಾಕ್ಯಗಳನ್ನು ಆರಿಸಿ ಒಂದು ವಿಶಿಷ್ಟ ಸರಣಿಯಲ್ಲಿ ಜೋಡಿಸಿಟ್ಟಿದ್ದಾರೆ. ಇಲ್ಲಿ ಅಂಥ ಕೆಲವು ಆಶಾಆಕಿರಣಗಳನ್ನು ನೋಡುವಾ :

ತಾಪತ್ರಯೇಣ ಸಂತಪ್ತಂ ಯದೇತದಖಿಲಂ ಜಗತ್ ।
ವಕ್ಷ್ಯಾಮಿ ಶಾಂತಯೇ ತಸ್ಯ ಕೃಷ್ಣಾಮೃತ ಮಹಾರ್ಣವಮ್ ॥
ಕೃಷ್ಣಾಮೃತಮಹಾರ್ಣವ ॥

ಜನನಮರಣ ರೂಪವಾದ ಈ ಸಾಂಸಾರಿಕ ಜಗತ್ತಿನಲ್ಲಿ ಸಕಲಪ್ರಾಣಿಗಳೂ ತ್ರಿವಿಧ ತಾಪಗಳಿಗೆ ಒಳಗಾಗಿರುತ್ತಾರೆ. ಆ ಸಜ್ಜೀವರುಗಳ ಪಾಪೋಪಶಮನಕ್ಕಾಗಿ / ಉದ್ಧಾರಕ್ಕಾಗಿ

ಕೃಷ್ಣಾಮೃತಮಹಾರ್ಣವವೆಂಬ ಗ್ರಂಥವನ್ನು ರಚನೆ ಮಾಡುತ್ತೇವೆ. ಈ ಗ್ರಂಥಗತ ವಿಷಯದಜ್ಞಾನ ತದನುಷ್ಠನಾದಿಂದ ತಾಪೋಪಶಮನ ಹೊಂದುತ್ತಾರೆ.'' ಎನ್ನುತ್ತಾರೆ ಗ್ರಂಥಕರ್ತೃಗಳಾದ ಶ್ರೀಮದಾಚಾರ್ಯರು.

ಹೀಗೆಯೇ ನೋಡುವಾ ಈ ಗ್ರಂಥದಲ್ಲಿ ಇನ್ನೂ ಕೆಲವು ಆಶಾದಾಯಕ ಆಶ್ವಾಸನಗಳು ದೊರೆಯಬಹುದು.

ಸಂಸಾರೇಽಸ್ಮಿನ್ ಮಹಾಘೋರೇ ಜನ್ಮರೋಗ ಭಯಾಕುಲೇ ॥
ಅಯಮೇಕೋ ಮಹಾಭಾಗಃ ಪೂಜ್ಯತೇ ಯದಧೋಕ್ಷಜಃ ॥ಕೃ.ಮ.೪॥

ಈ ಮಹಾಘೋರವಾದ ಸಂಸಾರದಲ್ಲಿ ಜನನ-ಜರೆ-ಮರಣಾಖ್ಯ ವಿವಿಧ ಬದಲಾವಣೆಗಳು, ಈ ಮಧ್ಯರೋಗ ರುಜಿನಗಳು ಮತ್ತು ಮಹದ್ಭಯಕ್ಕೆ ಕಾರಣೀಭೂತವಾದ ಅನೇಕ ಸಂದರ್ಭಗಳು. ಇವುಗಳ ಜಾಲದಿಂದ ನಾವು ಸುಲಭವಾಗಿ ಪಾರಾಗಬೇಕಾದರೆ ಅಧೋಕ್ಷಜನ ಪೂಜೆಯಿಂದ ಮಾತ್ರ ಸಾಧ್ಯ. ಯಾರು ಆದೇವನನ್ನು ಪೂಜಿಸುತ್ತಾರೋ ಅವರೇ ಧನ್ಯರು.

ಸನಾಮ ಸುಕೃತೀ ಲೋಕೇ ಕುಲಂ ತೇನಾಭ್ಯಲಂಕೃತಮ್ ।
ಆಧಾರಃ ಸರ್ವಭೂತಾನಾಂ ಯೇನವಿಷ್ಣುಃ ಪ್ರಸಾದಿತಃ ॥ಕೃ.ಮ॥

ಸರ್ವಪ್ರಾಣಿಗಳಿಗೂ ಆಧಾರಭೂತನಾದ ಶ್ರೀ ವಿಷ್ಣುವನ್ನು ಯಾರು ಭಕ್ತಿಯಿಂದ ಆರಾಧಿಸುತ್ತಾರೋ ಮತ್ತು ಆ ಭಗವಂತನು ಯಾರಿಗೆ ಪ್ರಸನ್ನನಾಗಿರುವನೋ ಅವನೇ ಪುಣ್ಯವಂತನು. ಅವನು ಯಾವಕುಲದಲ್ಲಿ ಜನಿಸಿರುವನೋ, ಆ ಕುಲಕ್ಕೇ ಅವನು ಅಲಂಕಾರ ಪ್ರಾಯನು.

ಯಜ್ಞಾನಾಂ ತಪಸಾಂ ಚೈವ ಶುಭಾನಾಂ ಚೈವ ಕರ್ಮಣಾವಮ್ ॥
ತದ್ವಿಶಿಷ್ಟಫಲಂ ನೃಣಾಂ ಸದೈವಾರಾಧನಂಹರೇಃ ॥ಕೃ.ಮ॥

ಯಜ್ಞ, ತಪಸ್ಸು ಮತ್ತಿತರ ವಿಹಿತವಾದ ನಿತ್ಯನೈಮಿತ್ತಿಕ ಶುಭಕರ್ಮಗಳೂ ಇತ್ಯಾದಿಗಳಿಂದ ಯಾವ ವಿಶಿಷ್ಠ ಫಲವು

ಒದಗುವದೋ ಆ ಸಕಲಫಲಗಳು ಕೇವಲ ಶ್ರೀಹರಿಯ ಆರಾಧನೆಯಿಂದಲೇ ಲಭ್ಯ ವಾಗುವದು.

ನಾಸ್ತಿ ಶ್ರೇಯಸ್ತಮಂ ನೃಣಾಂ ವಿಷ್ಣೋರಾರಾಧನಾನ್ಮನೇ ॥
ಯುಗೇಸ್ಮಿನ್ ತಾಮಸೇಲೋಕೇ ಸತತಂ ಪೂಜ್ಯತೇ ಹರಿಃ ॥ಕೃ.ಮ.॥

ವಿಷ್ಣುವಿನ ಆರಾಧನೆಗಿಂತ ಮನುಷ್ಯನಿಗೆ ಶ್ರೇಯತಮವಾದದ್ದು ಜಗತ್ತಿನಲ್ಲಿ ಯಾವದೂ ಇಲ್ಲ. ಈ ಕಲಿಯುಗದಲ್ಲಿ ಅದರಲ್ಲಿಯೂ, ತಾಮಸ ಪ್ರವೃತ್ತಿಯೇ ಅಧಿಕವಾಗಿದ್ದ ಪ್ರಪಂಚದಲ್ಲಿ, ನಾವು ಪಾರಾಗಬೇಕಾದರೆ ಶ್ರೀಹರಿಯ ಆರಾಧನೆಯೊಂದೇ ದಾರಿ.

ಸಕೃದಭ್ಯರ್ಚಿತೋಯೇನ ಹೇಲಯಾಪಿ ನಮಸ್ಕೃತಃ ॥
ಸಯಾತಿ ಪರಮಂ ಸ್ಥಾನಂ ಯತ್ಸುರೈರಪಿ ದುರ್ಲಭಂ ॥ಕೃ.ಮ.॥

ಯಾವನಾದರೊಬ್ಬ ಮನುಜನು ಒಂದೇ ಒಂದು ಸಲ ಶ್ರೀಹರಿಯ ಪೂಜೆಯನ್ನು ಮಾಡಿ ಉಪೇಕ್ಷೆಯಿಂದಲಾಗಲಿ / ವಿಮನಸ್ಕನಾಗಿ ಯಾದರೂ ಒಂದು ಸಲ ನಮಸ್ಕಾರವನ್ನು ಮಾಡಿದರೂ ಸಹ ಅಂಥವನು ದೇವತೆಗಳಿಂದ ಸಹ ದುರ್ಲಭವಾದ ಪಾರತ್ರಿಕ ಉತ್ತಮ ಸ್ಥಾನವನ್ನು ಹೊಂದುತ್ತಾನೆ. ಅಂದಮೇಲೆ ಭಕ್ತಿಪುರಸ್ಸರವಾಗಿಯೇ ಪೂಜೆ-ನಮಸ್ಕಾರಾದಿಗಳನ್ನು ಮಾಡುವವರಿಗೆ ಸದ್ಗತಿ ಸಿಕ್ಕೇಸಿಗುವದು ಎಂದು ಪ್ರತ್ಯೇಕ ಹೇಳಬೇಕೇ.

ವಿಧಿನಾ ದೇವದೇವೇಶಃ ಶಂಖಚಕ್ರಧರೋಹರಿಃ ॥
ಫಲಂದದಾತಿ ಸುಲಭಂ ಸಲಿಲೇನಾಪಿ ಪೂಜಿತಃ ॥ಕೃ.ಮ.॥

"ಶಂಖಚಕ್ರಧಾರಿಯಾದ ಶ್ರೀ ಹರಿಯನ್ನು ಯಾವ ಮನುಜನು ವಿಧಿವತ್ತಾಗಿ (ಅಂದರೆ ವೇದಮಂತ್ರಗಳಿಂದ ಪದ್ಧತಿ ಪುರಸ್ಸರವಾಗಿ, ಹರಿಸರ್ವೋತ್ತಮ ಜ್ಞಾನದಿಂದ) ವಿಶೇಷ ಪೂಜಾಸಾಮಾಗ್ರಿ ಗಳಿಲ್ಲದೆಯೇ ಕೇವಲ ನೀರಿನಿಂದಲಾದರೂ ಪೂಜಿಸುತ್ತಾನೋ ಅಂಥವನಿಗೆ ಶ್ರೀ ಹರಿಯು ಸುಲಭವಾಗಿ ಉತ್ತಮವಾದ ಫಲಗಳನ್ನು ಕೊಡುತ್ತಾನೆ."

ಇನ್ನು ಮುಂದಿನ ಮೂರು ಶ್ಲೋಕಗಳು ಯಮಧರ್ಮರಾಯನಿಗೂ ಮತ್ತು ನರಕಯಾತನೆಯನ್ನು ಅನುಭವಿಸತಕ್ಕ ಒಬ್ಬ ವ್ಯಕ್ತಿಗೂ ಸಂಭಾಷಣರೂಪ.

ಈ ಲೋಕದಲ್ಲಿ ನಾವು ನೋಡಿದ ಹಾಗೆ ವೈದ್ಯರುಗಳು ಆಸ್ಪತ್ರೆಗಳಲ್ಲಿ, ಇಂಜನಿಯರ್‌ಗಳು ಕಾರ್ಯಸ್ಥಳಗಳಲ್ಲಿ, ಮ್ಯಾನೆಜರುಗಳು ಕಾರ್ಖಾನೆಗಳಲ್ಲಿ, ದೊಡ್ಡ ಅಧಿಕಾರಿಗಳು ಕಚೇರಿಗಳಲ್ಲಿ ಮೇಲ್ವಿಚಾರಣೆಗಾಗಿ ಸುತ್ತಾಡುತ್ತಲೇ ಇರುತ್ತಾರೆ. ರೌಂಡ್ಸ್ ಹೊಡೆಯುತ್ತಿರುತ್ತಾರೆ. ಯಮಧರ್ಮರಾಯನೂ ಸಹ ತನ್ನ ಕಾರ್ಯಕ್ಷೇತ್ರದಲ್ಲಿ ರೌಂಡ್ಸ್ ಹೊಡೆಯುತ್ತಿರುತ್ತಾನೆಂದು ಶಾಸ್ತ್ರ ಗ್ರಂಥಗಳಿಂದ ತಿಳಿಯುತ್ತದೆ. ಪ್ರಕೃತ, ಒಂದುದಿನ ಯಮರಾಯನು ಹಾಗೆ ರೌಂಡ್ಸ್ ಹೊರಟಾಗ ಶಿಕ್ಷೆ ಅನುಭವಿಸುವಾಗ ಉಂಟಾದ ಯಾತನೆಯನ್ನು ತಾಳಲಾರದೇ ಒಬ್ಬ ವ್ಯಕ್ತಿಯು ನರಳುತ್ತಾನೆ. ಗಟ್ಟಿಯಾಗಿ ಅಳುತ್ತಾನೆ. ಅದನ್ನು ನೋಡಿದ / ಕೇಳಿದ ಯಮಧರ್ಮರಾಯನು ಅವನನ್ನು ಕುರಿತು ಮಾತನಾಡುತ್ತಾನೆ:-

ಧರ್ಮೋವಾಚ:

ನರಕೇ ಪಚ್ಯಮಾನಸ್ತು ಯಮೇನ ಪರಿಭಾಷಿತಃ ॥
ಕಿಂತ್ವಯಾ ನಾರ್ಚಿತೋ ದೇವಃ ಕೇಶವಃ ಕ್ಲೇಶನಾಶನಃ ॥ಕೃ.ಮ.॥

"ಹೇ ಮಾನವ, ನಿನಗೆ ಈ ನರಕಕ್ಕೆ ಬಂದು ಯಾತನೆಯನ್ನು ಅನುಭವಿಸತಕ್ಕ ಸಂದರ್ಭ ಹೇಗೆ ಪ್ರಾಪ್ತವಾಯಿತು? ನೀನು ಭೂಲೋಕದಲ್ಲಿರುವಾಗ ಕ್ಲೇಶನಾಶಕನಾದ ಶ್ರೀಕೇಶವನ ಅರ್ಚನೆಯನ್ನು ಒಂದು ಸಲವಾದರೂ ಮಾಡಲಿಲ್ಲವೆಂದು ತೋರುತ್ತದೆ. ಅಲ್ಲವೇ?'

"ಇಲ್ಲ ಸ್ವಾಮಿ. ನಾವು ಬಹಳ ದರಿದ್ರರು. ಭಗವಂತನನ್ನು ಪೂಜೆ ಮಾಡಲಿಕ್ಕೆ ಸಾಧ್ಯವಾಗಲೇ ಇಲ್ಲ" ಎಂದು ಉತ್ತರಿಸಿದ ಆ ನರಳುತ್ತಿದ್ದ ವ್ಯಕ್ತಿ.

ಅದಕ್ಕೆ ಯಮಧರ್ಮರಾಯನು ಪುನಃ ಮಾತನಾಡುತ್ತಾನೆ :

"ದ್ರವ್ಯಾಣಾಮಪ್ಯಭಾವೇತು ಸಲಿಲೇನಾಪಿ ಪೂಜಿತಃ ॥
ಯೋದದಾತಿ ಸ್ವಕಂಸ್ಥಾನಂ ಸತ್ವಯಾ ಕಿಂ ನಪೂಜಿತಃ ॥ಕೃ.ಮ.॥

"ಶ್ರೀಹರಿಯ ಪೂಜೆಗೆ ದ್ರವ್ಯದ ಅವಶ್ಯಕತೆ ಇದೆ ಎಂದು ಹೇಳಿದವರಾರು. ಶ್ರೀಹರಿಯು ದ್ರವ್ಯ ಸಾಧ್ಯನಲ್ಲ. ದ್ರವ್ಯಾಭಾವದಿಂದ ಫಲ ಪುಷ್ಪ, ನೈವೇದ್ಯಪದಾರ್ಥಗಳು ಮತ್ತಿತರ ಪೂಜಾದ್ರವ್ಯಗಳು ಇಲ್ಲದೇ ಹೋದರೆ ಅದೇನು ದೊಡ್ಡ ನ್ಯೂನತೆ ಅಲ್ಲ. ದ್ರವ್ಯವಿಲ್ಲದಿದ್ದರೆ ನೀರಿನಿಂದ ಪೂಜೆಯನ್ನು (ಅಭಿಷೇಕ-ನೈವೇದ್ಯಾದಿಗಳನ್ನು) ಮಾಡಿದರೂ ಸಾಕು. ಆ ಭಕ್ತಿಶ್ರದ್ಧಾದಿಗಳಿಂದ ಮಾಡಿದ ಪೂಜಾದಿಗಳನ್ನು ಸ್ವೀಕಾರಮಾಡಿ ಶ್ರೀಹರಿಯು ಪ್ರಸನ್ನನಾಗಿ ತನ್ನ ಸ್ಥಾನಗಳಾದ ವೈಕುಂಠಾದಿಗಳನ್ನು ಸಹ ಕೊಡುತ್ತಾನೆ. ಇಷ್ಟು ಸುಲಭವಾದ ಶ್ರೀಹರಿಪೂಜೆಯನ್ನು ಒಂದು ಸಲವಾದರೋ ಮಾಡದೇ ಈ ನರಕ ಯಾತನೆಗೆ ಗುರಿಯಾಗಿದ್ದೀಯಾ!"

"ಯಾತನೆ ಪಡುತ್ತಲೇ ತಾನು ಆರಾಧನೆ ಮಾಡದಿರಲು ಇನ್ನೊಂದು ಕಾರಣವನ್ನು ಹೇಳುತ್ತಾನೆ ಯಾತನಾ ಶರೀರಿ.

"ಧರ್ಮರಾಜರೇ, ತಾವು ನಮ್ಮ ಊರು ನೋಡಿದಂತಿಲ್ಲ."

"ಅದೇಕೆ, ನಾನು ಭೇಟಿಕೊಡದಿರುವ ಊರುಗಳುಂಟೇ" ಅನ್ನುತ್ತಾನೆ ಧರ್ಮರಾಜ.

"ನಮ್ಮ ಊರು ನೋಡಿರಬೇಕು., ಆದರೆ ನಮ್ಮ ಊರ ಹೊರಗಿನ ಊರಿಗೆಲ್ಲ ಒಂದೇ ಆದ ಭಾವಿ ನೋಡಿಲ್ಲ. ಒಂದು ಕೊಡನೀರು ತರಬೇಕಾದರೆ ಅದರ ಹತ್ತುಪಟ್ಟು ತೂಕದಷ್ಟು ಹಗ್ಗವನ್ನು ಹೊರಬೇಕು. ಕಷ್ಟಪಟ್ಟು ಸ್ವಲ್ಪ ನೀರು ತಂದು ಮನೆಯವರೆಲ್ಲ ಹಂಚಿಕೊಂಡು ಕುಡಿಯುತ್ತೇವೆ. ಇಂಥ ಕ್ಷಾಮಪೀಡಿತ ಸ್ಥಳದಲ್ಲಿದ್ದ ನಮಗೆ, ನೀರಿನಿಂದ ಶ್ರೀಹರಿಯ ಪೂಜೆ ಮಡುವದು ಎಂತು ಸಾಧ್ಯಸ್ವಾಮಿ.ೀ ತಾವೇಹೇಳಿ." ಎಂದನು ಯತನಾಶರೀರಿ.

ಅದಕ್ಕೇ ಧರ್ಮರಾಜನು ಮತ್ತೆ ಸಮಾಧಾನ ಹೇಳುತ್ತಾನೆ –

ನರಸಿಂಹೋ ಹೃಷೀಕೇಶಃ ಪುಂಡರೀಕ ನಿಭೇಕ್ಷಣಃ ।
ಸ್ಮರಣಾನ್ಮುಕ್ತಿದೋನೃಣಾಂ ಸತ್ವಯಾ ಕಿಂ ನ ಪೂಜಿತಃ ॥ಕೃ.ಮ.॥

ಪಾಪ! ನೀರಿಗೂ ಅಂಥ ಅಭಾವವಿದ್ದರೆ ಹೋಗಲಿ ನೀರೂ ಬೇಡ. ಇಷ್ಟೆಲ್ಲ ಸವಾಲು ಹಾಕುತ್ತಿಯ, ಮಾತನಾಡುತ್ತೀಯಾ ಆದರೆ ನಿನ್ನ ಬಾಯಿಂದ ಒಂದು ದೇವರ ನಾಮವನ್ನು ಉಚ್ಚಾರಣೆ ಮಾಡಲು ಆಗಲಿಲ್ಲವೇ. ನಾರಾಯಣ, ಹೃಷೀಕೇಶ, ರಾಮ, ಕೃಷ್ಣ, ಇತ್ಯಾದಿ ನಾಮೋಚ್ಚಾರಣೆ ಅಥವಾ ಸ್ಮರಣೆ ಮಾಡುವದರಿಂದಲೂ ಸಹ ಆ ಕರುಣಾಳುವಾದ ಶ್ರೀಹರಿಯು, ಅಷ್ಟರಿಂದಲೇ ಪ್ರೀತನಾಗಿ ಮುಕ್ತಿಯನ್ನು ಕೊಡುತ್ತಾನೆ. ನಿನಗೆ ಈ ವಿಷಯ ತಿಳಿಯದೇ, ಯಾರಿಂದಲೂ ಈ ವಿಷಯ ಕೇಳಲಿಲ್ಲವೇ.

ಇಲ್ಲಿಂದ ಮರಳಿ ಭೂಲೋಕಕ್ಕೆ ಹೋದಮೇಲೆ ಕ್ಷುಲ್ಲಕವಾದ ಯಾವ ನೆಪಗಳನ್ನು ಮುಂದೆ ಮಾಡದೇ ಕ್ಲೇಶನಾಶಕನಾದ ಶ್ರೀ ಕೇಶವನ ಪೂಜೆಯನ್ನು ನಿನ್ನ ಅನುಕೂಲತೆಗಳಿಗೆ ತಕ್ಕರೀತಿಯಲ್ಲಿ ವಂಚನೆಮಾಡಿಕೊಳ್ಳದೇ ಶ್ರದ್ಧಾಭಕ್ತಿಗಳಿಂದ ಮಾಡು. ನಿನಗೆ ಏನೂ ಸಾಧ್ಯವಿಲ್ಲದಿದ್ದರೆ ಭಗವಂತನ ನಾಮೋಚ್ಚಾರಣಾದಿಗಳಿಂದಲೂ ಅಥವಾ ಸತತ ಸ್ಮರಣೆಯಿಂದಲೂ ನರಕಾದ್ಯನರ್ಥಗಳನ್ನು ತಪ್ಪಿಸಿಕೋ. ಭಗವಂತನನ್ನು ಉದಾಸೀನ ಮಾಡಿ ಪುನಃ ಇಲ್ಲಿಗೆ ಬಂದರೆ ಶಿಕ್ಷೆ ಅಧಿಕ ಇದನ್ನು ತಿಳಿ. ಈಗ ನಿನ್ನ ಸಮಸ್ಯೆಗಳಿಗೆಲ್ಲ ಸುಲಭೋಪಾಯಗಳನ್ನು ತಿಳಿಸಿದ್ದೇನೆ.'' ಎಂದನು ಯಮಧರ್ಮರಾಯ.

ನರಕಾದ್ಯನರ್ಥಗಳನ್ನು ತಪ್ಪಿಸಿಕೊಳ್ಳುವದು ಕೇವಲ ಶ್ರೀಹರಿಯ ಆರಾಧನೆಯಿಂದಲೇ ಎಂಬುವದನ್ನು ಸಾಕ್ಷಾತ್ ನರಕಾಧಿಪತಿ ಯಮಧರ್ಮರಾಜನಿಂದಲೇ ತಿಳಿದೆವು. ಶ್ರೀಹರಿಯಲ್ಲಿ ಉದಾಸೀನತೆ ಯಮಪುರಿಯದರ್ಶನಕ್ಕೆ ಕಾರಣೀಭೂತವಾಗುವದು ಎಂಬದು ಸ್ಪಷ್ಟವಾಯಿತು.

``ಇನ್ನೂ ಒಂದೆರಡು ಪ್ರಮಾಣಪೂರ್ವಕ ಸುಲಭೋಪಾಯಗಳನ್ನು ನೋಡುವಾ.

ಯಮಮಾರ್ಗಂ ಮಹಾಘೋರಂ ನರಕಾಣಿ ಯಮಂ ತಥಾ ॥
ಸ್ವಪ್ನೇಪಿ ನೈವಪಶ್ಯೇತ ಯಃಸ್ಮರೇದ್ಗರುಡಧ್ವಜಂ ॥ಕೃ.ಮು.॥

"ಯಾವಮನುಷ್ಯನು ಗರುಡವಾಹನನನ್ನು ಭಕ್ತಿಯಿಂದ ಸ್ಮರಿಸುತ್ತಾನೋ, ಅಂಥವನು ಮಹಾಘೋರವಾದ ಯಮಪಟ್ಟಣವನ್ನಾಗಲಿ, ನರಕಗಳನ್ನಾಗಲಿ ಅಥವಾ ಯಮನನ್ನಾಗಲಿ ಸ್ವಪ್ನದಲ್ಲಿ ಸಹ ನೋಡತಕ್ಕಂಥ ಸಂದರ್ಭಗಳು ಒದಗಲಾರವು. ಇನ್ನು ಸಾಕ್ಷಾತ್ ನೋಡುವದಿಲ್ಲ ಎಂದು ಪ್ರತ್ಯೇಕ ಹೇಳುವದೇನು."

**ಕಲಿಕಲ್ಮಷಮತ್ಯುಗ್ರಂ ನರಕಾರ್ತಿ ಪ್ರದಂನೃಣಾಂ ॥**
**ಪ್ರಯಾತಿ ವಿಲಯಂಸದ್ಯಃ ಸಕೃತ್ಸಂಕೀರ್ತಿತೇಽಚ್ಯುತಃ ॥ಕೃ.ಮು.॥**

"ಈ ಕಲಿಕಾಲದಲ್ಲಿ, ಕಾಲವೈಪರೀತ್ಯಗಳಿಂದ ಕಲಿಯುವಶರಾಗಿ ಘೋರವಾದ ನರಕಾದ್ಯನರ್ಥಪ್ರಾಪ್ತಿಕರವಾದ ಪಾಪಗಳನ್ನೆಸಗುತ್ತಾರೆ. ಇಂಥ ಮಹತ್ಪಾಪಾದಿಗಳು, ಭಕ್ತಿಪಾರವಶ್ಯದಿಂದ ಒಂದು ಸಲವಾದರೂ ಅಚ್ಯುತನ ಸ್ಮರಣೆ ನಾಮೋಚ್ಚಾರಣೆಗಳನ್ನು ಮಾಡಿದರೆ, ನಾಶವಾಗುತ್ತವೆ."

ಆಶ್ಚರ್ಯಗಳಲ್ಲಿ ಇದೊಂದು ನೂತನ ಆಶ್ಚರ್ಯವೆನ್ನುತ್ತಾರೆ ಶ್ರೀಮನ್ಮಧ್ವರು.

**"ನಾರಾಯಣೇತಿ ನಾಮೋಸ್ತಿ ವಾಗಸ್ತಿ ವಶ್ರವರ್ತಿನೀ ॥**
**ತಥಾಪಿ ನರಕೇ ಘೋರೇ ಪತಂತೀತ್ಯೇತದದ್ಭುತಂ ॥ಕೃ.ಮು॥**

ಮನುಷ್ಯನಿಗೆ ವಾಗಿಂದ್ರಿಯವು ವಶವರ್ತಿಯಾಗಿದ್ದಾಗ ಅನೇಕ ಮಾತುಗಳನ್ನಾಡುತ್ತಾನೆ.

"ನಾರಾಯಣ" ಮಂತ್ರವೂ ಇದೆ. ಇದು ತಾರಕಮಂತ್ರ. ಮನಷ್ಯನನ್ನು ಪತನವಾಗದಂತೆ ಉಚ್ಚಾರಣೆಮಾತ್ರದಿಂದ ರಕ್ಷಿಸುತ್ತದೆ.

ಮಾತುಬಂದವನು ಬಹುಮಾತುಗಳನ್ನಾಡಿ ಆಯಸ್ಸೆಲ್ಲ ಕಳೆದು, ನಾರಾಯಣ ಮಂತ್ರವನ್ನು, ನಾಮವನ್ನು ಉಚ್ಚರಿಸದೇ, ನರಕಕ್ಕೆ ಬೀಳುವದು ದೊಡ್ಡ ಆಶ್ಚರ್ಯವಲ್ಲವೇ. ಅವಶ್ಯಾನುಷ್ಠೇಯಗಳನ್ನು ಬಿಟ್ಟು

ಅನವಶ್ಯಕವಾದ ಬಹುಮಾಡಿದರೇನು ಫಲ?

"ನಾವ್ನೋಸ್ತಿ ಯಾವತೀಶಕ್ತಿಃ ಪಾಪನಿರ್ಹರಣೇ ಹರೇಃ ॥
ತಾವತ್ಕರ್ತುಂ ನಶಕ್ನೋತಿ ಪಾತಕಂ ಪಾತಕೀ ಜನಾಃ ॥ಕೃ.ಮ.॥

ಪಾಪಮಾಡುವದರಲ್ಲಿ ಪಾಪಿಗಳ ಶಕ್ತಿ ಪ್ರಬಲವೋ ಅಥವಾ ಪಾಪನಾಶ ಮಾಡುವದರಲ್ಲಿ ಹರಿನಾಮದಲ್ಲಿ ಅಡಗಿರುವ ಶಕ್ತಿ ಪ್ರಬಲವೋ ಎಂದು ತುಲನಾತ್ಮಕ ದೃಷ್ಟಿಯಿಂದ ನೋಡಿದರೆ / ಪರೀಕ್ಷಿಸಿದರೆ, ಹರಿನಾಮದಲ್ಲಿರುವ ಶಕ್ತಿ, ಪಾಪನಾಶಕ ವಿಷಯದಲ್ಲಿ ಪ್ರಬಲತಮ. ಹರಿನಾಮಶಕ್ತಿ ಅಪಾರ. ಪಾಪಿಗಳ ಶಕ್ತಿ ಅತ್ಯಲ್ಪ.

ಹರಿನಾಮಸ್ಮರಣೆಯ ಫಲ ದ್ವಿದಳ, ದುಃಖ ನಿವೃತ್ತಿ ಸುಖಪ್ರಾಪ್ತಿ.
"ಏಕೋಕ್ತಿಯಾ ದ್ವ್ಯರ್ಥಕರೀ ಬಭೂವ" (ಕಾಳಿದಾಸ)
"ಆರ್ತಾ ವಿಷಣ್ಣಾ ಶಿಥಿಲಾಶ್ಚ ಭೀತಾ ಘೋರೇಷು ವ್ಯಾಧ್ಯಾದಿಷು ದಹ್ಯಮಾನಃ ।
ಸಂಕೀರ್ತ್ಯ ನಾರಾಯಣ ಶಬ್ದಮಾತ್ರಾತ್ ವಿನಷ್ಟದುಃಖಾ ಸುಖಿನೋಭವಂತು ॥ಕೃ.ಮ.॥

"ಮನುಷ್ಯನು ಆರ್ತಸ್ಥಿತಿಯಲ್ಲಿರಲಿ, ಖೇದಯುಕ್ತನಾಗಿರಲಿ, ಶಿಥಿಲಾವಸ್ಥೆಯಲ್ಲಿರಲಿ, ಭಯಗ್ರಸ್ಥನಾಗಿರಲಿ ಅಥವಾ ಘೋರ ವ್ಯಾಧಿಗಳಿಂದ ತಪ್ತನಾಗಿರಲಿ, ನಾರಾಯಣ ಎಂಬ ನಾಲ್ಕಕ್ಷರಗಳ ಉಚ್ಚಾರಣೆ, ಸ್ಮರಣೆ, ಸಂಕೀರ್ತನೆ ಮಾತ್ರದಿಂದ ಮನುಷ್ಯನು ದುಃಖ ನಿವೃತ್ತಿ ಹೊಂದಿ, ಸುಖಿಯಾಗುತ್ತಾನೆ."

"ಸಕೃದುಚ್ಚಾರಿತಂ ಯೈಸ್ತು ಕೃಷ್ಣೇತಿ ನವಿಶಂತಿ ತೇ ॥
ಗರ್ಭಾಗಾರಗೃಹಂ ಮಾತು ಯಮಲೋಕಂಚ ದುಃಸಹಂ" ॥ಕೃ.ಮ.॥

"ಕೌಶಿಕ ಋಷಿಗಳು ಹೇಳುತ್ತಾರೆ, ಯಾವನು ಭಕ್ತಿಪುರಸ್ಸರವಾಗಿ "ಕೃಷ್ಣಾ" ಎಂದು ಉಚ್ಚಾರಣೆ ಮಾಡುತ್ತಾನೋ, ಅವನು ಮಾತೃಗರ್ಭವನ್ನೂ ಪುನಃ ಪ್ರವೇಶಿಸುವದಿಲ್ಲ. ಮತ್ತು ಯಮಲೋಕವನ್ನು ಕುರಿತು ಪ್ರಯಾಣವೂ ಇಲ್ಲ."

"ಕಲೌ ಕೇಶವಭಕ್ತಾನಾಂ ನಭಯಂ ವಿದ್ಯತೇ ಕ್ವಚಿತ್ ॥
ಸ್ಮೃತೇ ಸಂಕೀರ್ತಿತೇ ಧ್ಯಾತೇ ಸಂಕ್ಷಯಂ ಯಾತಿ ಪಾತಕಂ ॥ಕೃ.ಮ.॥

"ಕಲಿಯುಗದಲ್ಲಿ ಶ್ರೀ ಕೇಶವನ ಭಕ್ತರಿಗೆ ಭಯವೆಂಬುವದು ಲೇಶಮಾತ್ರವೂ ಇಲ್ಲ. ಯಾಕೆಂದರೆ ಆ ಭಗವಂತನ ಸ್ಮರಣೆಯಿಂದ, ಸಂಕೀರ್ತನದಿಂದ, ಧ್ಯಾನದಿಂದ ಸಕಲ ಪಾಪಗಳೂ ನಿಶ್ಶೇಷವಾಗಿ ನಾಶವಾಗಿ ಬಿಡುತ್ತವೆ.

"ಸಂಸಾರವಿಷಪಾನೇನ ಯೇಮೃತಾಃ ಪ್ರಾಣಿನೋ ಭುವಿ ॥
ಅಮೃತಾಯಸ್ಮೃತಸ್ತೇಷಾಂ ಕೃಷ್ಣಾಮೃತಂ ಮಹಾರ್ಣವಃ" ॥ಕೃ.ಮ.॥

"ಭಗವದ್‌ವಿಸ್ಮೃತಿ ರೂಪವಾದ ಯಾವ ಸಂಸಾರಾಖ್ಯ ವಿಷಪಾನವನ್ನು ಮಾಡಿ ಭೂಮಿಯ ಮೇಲೆ ಪ್ರಾಣಿಗಳು ಮೃತಪ್ರಾಯರಾಗಿದ್ದಾರೋ, ಅಂಥವರ ಜೀವನ (ಜೀವಿತ) ಮತ್ತು ಸುಖಕ್ಕಾಗಿ ಈ ಕೃಷ್ಣಾಮೃತ ಮಹಾರ್ಣವವೆಂಬದು ಔಷಧಿ ಅನುಪಾನರೂಪ ಅಥವಾ ಸಂಜೀವಿನಿ ಸ್ವರೂಪವಾಗಿ ಹೊರಟಿದೆ."

ಶ್ರೀಮದಾಚಾರ್ಯರು ಗ್ರಂಥದಲ್ಲಿ ಅಂತ್ಯಮಂಗಳವನ್ನು ಈ ಪ್ರಕಾರ ಮಾಡಿರುತ್ತಾರೆ.

"ಯಃ ಸರ್ವಗುಣಸಂಪೂರ್ಣಃ ಸರ್ವದೋಷವಿವರ್ಜಿತಃ ॥
ಪ್ರಿಯತಾಂ ಪ್ರೀತ ಏವಾಲಂ ವಿಷ್ಣುರ್ಮೇ ಪರಮಃಸುಹೃತ್ ॥ಕೃ.ಮ.॥

"ಸರ್ವಗುಣಸಂಪೂರ್ಣನಾದ ಸರ್ವದೋಷ ವಿವರ್ಜಿನಾದ ನನಗೆ ಅತ್ಯಂತ ಪ್ರಿಯನಾದ ಶ್ರೀವಿಷ್ಣುವು ಈ ಸ್ತೋತ್ರದಿಂದ ನಮ್ಮ ಮೇಲೆ ಅನುಗ್ರಹ ಮಾಡುವಷ್ಟು ಪ್ರೀತನಾಗಲಿ."

ಈ ಪ್ರಕಾರ ಜೀವನದ ಪ್ರಾರಂಭ ಮಧ್ಯ ಅಂತ್ಯ ಯಾವದೋ ದೆಶೆಯಲ್ಲಾಗಲಿ ಭಗವಂತನ ಅಸ್ತಿತ್ವದ ಪ್ರಜ್ಞೆಮೂಡಿತೆಂದರೆ, ಭಕ್ತನಿಗೆ ತನ್ನಿಂದ ಭಗವಂತನನ್ನು ಒಲಿಸಿ ಆತನ ಪ್ರಸನ್ನತೆಯನ್ನು ಪಡೆಯುವದು, ಒಂದು ಪ್ರಯಾಸಕರ ಅಥವಾ ದುಸ್ಸಾಧ್ಯವಾದ ಕೆಲಸವೇನೋ ಎಂಬ ಭಾವನೆ ಬರಲು ಸಾಧ್ಯ. ಶ್ರೀಮದಾಚಾರ್ಯರು ಅನ್ನುತ್ತಾರೆ, ಶ್ರೀವಿಷ್ಣು

ಬಲು ಕರುಣಿ. ಅವನನ್ನೊಲಿಸುವದು ಬಹಳ ಸುಲಭ. ಆದರೆ ಮಾರ್ಗಗೊತ್ತಿಲ್ಲದೇ ಮಾನವರಿಗೆ ಪ್ರಯಾಸ.

"ಸುಲಭನೋ ಹರಿ ತನ್ನವರ ನರಘುಳಿಗೆ ಬಿಟ್ಟ ।
ಗಲನು ರಮಾಧವನೊಲಿಸಲರಿಯದೆ ಪಾಮರರು ಬಳಲುವರು
ಭವದೊಳಗೆ ॥

ಎನ್ನುತ್ತಾರೆ ಶ್ರೀ ಜಗನ್ನಾಥದಾಸರು.

ಶ್ರೀ ವಿಷ್ಣುವಿನಲ್ಲಿ ಭಕ್ತಿಮಾಡತಕ್ಕವರಿಗೆಲ್ಲ, ಆ ಪ್ರಭು ಇಂದಿಲ್ಲ ನಾಳೆ ಸುಲಭವಾಗಿ ಪ್ರಸನ್ನನಾಗುವನು ಎಂಬ ಆಶಾಆಕಿರಣವನ್ನು – ಜ್ಞಾನಕಿರಣದ್ವಾರಾ ತೋರಿಸಿದ್ದಾರೆ., ಮಹಾನ್ ಕಾರುಣಿಕರಾದ ಶ್ರೀ ಮಧ್ವಾಚಾರ್ಯರು.

ಲೇಖನ ದೃಷ್ಟಿಯಿಂದ ಒಂದೇ ಗ್ರಂಥದಿಂದ ಕೇವಲ ಕೆಲವೇ ಶ್ಲೋಕಗಳನ್ನು ಉಧೃತಿಮಾಡಿ, ಆಶಾಕಿರಣಗಳನ್ನು ಪ್ರಸರಿಸಲಾಗಿದೆ.

ಶ್ರೀಮಧ್ವಾಚಾರ್ಯರ ಸರ್ವಮೂಲಗ್ರಂಥಗಳಲ್ಲಿ ಇಂಥ ಆಶ್ವಾಸನ ವೀಯತಕ್ಕ ಪ್ರಮಾಣಪುರಸ್ಸರವಾದ ಬಹುವಚನಗಳುಂಟು. ಇಷ್ಟು ಅಲ್ಪವಿಚಾರದಿಂದಲೇ ಸಮಾಜದಲ್ಲಿ ನನ್ನ ಆಧ್ಯಾತ್ಮಿಕ ತಮ್ಮಂದಿರಿಗೆ ಆಶಾಕಿರಣಗಳು ತೋರಲಿ. ಶ್ರೀ ಹರಿವಾಯುಗಳು ಪ್ರೀತರಾಗಲಿ.

---

# ಆಧ್ಯಾತ್ಮಿಕ ಆಶಾಕಿರಣಗಳು, ಭಾಗ-೨

ಈ ಶೀರ್ಷಿಕೆಯ ಲೇಖನದ ಪ್ರಥಮಭಾಗದಲ್ಲಿ, ಯಾರೊಬ್ಬ ಸಾಧಕನು ಜೀವನದಲ್ಲಿ ಬಹಳ ವಿಳಂಬವಾಗಿ ಭಗವಂತನ ಅಸ್ತಿತ್ವದ ಬಗ್ಗೆ ಪ್ರಜ್ಞೆ ಮೂಡಿ, ಅವನ ಮಹತ್ವಾದಿಗಳನ್ನು ಅರಿತು, ಆತನನ್ನು ಸಾಕ್ಷಾತ್ಕರಿಸುವ ಉದ್ದಿಶ್ಯವಾಗಿ/ಮೋಕ್ಷಾರ್ಥಿಯಾಗಿ ಸಾಧನಮಾಡಲು ಹೊರಟ ಸಾಧಕನಿಗೆ ದೇವ, ದೇವತೆಗಳು, ಗುರುಗಳು, ಶಾಸ್ತ್ರಗಳು ಸಾಕಷ್ಟು ಪ್ರೋತ್ಸಾಹಿಸುತ್ತವೆ. ಇವರ ಪ್ರವೃತ್ತಿಯನ್ನು ಅನುಮೋದಿಸುತ್ತವೆ. ಇವನಲ್ಲಿ ನೈಜ ಶ್ರದ್ಧಾಸಕ್ತಿಗಳು ಮಾತ್ರ ಇರಬೇಕು. ಆಶಾದಾಯಕ ಕಿರಣಗಳು ಇವನ ಕಡೆಗೆ ಪ್ರಸರಿಸುತ್ತವೆ.

ಪ್ರಥಮ ಭಾಗದಲ್ಲಿ ನಾವು ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರು ರಚಿಸಿದ "ಕೃಷ್ಣಾಮೃತ ಮಹಾರ್ಣವ" ಗ್ರಂಥದಿಂದ ಆಶಾಕಿರಣಗಳು ಹೊರಹೊಮ್ಮಿ ಬಹಳ ಪ್ರೋತ್ಸಾಹಗೊಂಡೆವು.

ಪ್ರಕೃತ, ಈ ಎರಡನೆಯ ಭಾಗದಲ್ಲಿ, ಶ್ರೀ ಕೃಷ್ಣ ಪರಮಾತ್ಮನು ಅರ್ಜುನನಿಗೆ ಉಪದೇಶ ಮಾಡಿದ ಲೋಕಪ್ರಸಿದ್ಧ ಭಗವದ್ಗೀತೆ, ಗೀತಾರ್ಥಬೋಧಕ ಶ್ರೀಮದಾನಂದತೀರ್ಥರು ರಚಿಸಿದ "ಗೀತಾಭಾಷ್ಯ" ಮತ್ತು "ಗೀತಾ ತಾತ್ಪರ್ಯ" ಇವುಗಳಿಂದ ಪಾಮರರಾದ ನಮ್ಮ ಕಡೆಗೆ ಪ್ರಸರಿಸಿ ಬರುವ ಆಧ್ಯಾತ್ಮಿಕ ಆಶಾಕಿರಣಗಳನ್ನು ಸ್ವಾಗತಿಸುವಾ.

ಮಹಾಭಾರತ ಯುದ್ಧ ಪ್ರಾರಂಭದಲ್ಲಿ, ಅರ್ಜುನನು ಬಂಧು ಬಾಂಧವರನ್ನು ಹೇಗೆ ಕೊಲ್ಲಲಿ ಎಂಬ ಮೋಹಕ್ಕೊಳಗಾದಾಗ, ಅವನು ಯುದ್ಧ ಭೂಮಿಯಲ್ಲಿ ಯುದ್ಧ ವಿಮುಖಪ್ರಾಯನಾದಾಗ, ಶ್ರೀಕೃಷ್ಣನು ಆತನಿಗೆ ಭಗವದ್ಗೀತೆಯನ್ನುಪದೇಶಿಸಿದನು. ಮೋಹಮಾತ್ರವಲ್ಲ ಆರು ಜನ ಅಂತಃಶತ್ರುಗಳನ್ನು ಹೇಗೆ ಗೆಲ್ಲಬೇಕೆಂಬ ಉಪಾಯವನ್ನು ತಿಳಿಸಿದನು. "ಜಹಿ ಶತ್ರುಂಮಹಾಬಾಹೋ ಕಾಮರೂಪಂ ದುರಾಸದಂ" ಎಂದು ಅರ್ಜುನನಿಗೆ ಹೇಳುತ್ತಾನೆ. ಇದಲ್ಲದೆ "ಕಾಮ ಏಷಃಕ್ರೋಧ ಏಷಃ

ರಜೋಗುಣಸಮುದ್ಭವನಿನಿ "ಪಾಪ್ಮಾನಂ ಪ್ರಜಹಿ ಏನಂ", "ಕಾಮಾತ್ಕ್ರೋಧೋಭಿಜಾಯತೇ । ಕ್ರೋಧಾದ್ಭವತಿ ಸಂಮೋಹಃ ಸಂಮೋಹಾತ್ಸ್ಮೃತಿ ವಿಭ್ರಮಃ"॥ ಇದು ಅರ್ಜುನನಿಗೆ ಮಾತ್ರವಲ್ಲ, ಜಗತ್ತಿನಲ್ಲಿರತಕ್ಕ ಪ್ರತಿಯೊಬ್ಬ ವ್ಯಕ್ತಿಗೂ ಜೀವನದಲ್ಲಿ, ಒಂದಿಲ್ಲೊಂದು ಸಮಯದಲ್ಲಿ ಒದಗಿ ಬರತಕ್ಕ ಸಮಸ್ಯೆಗಳಿವು. ಇಂಥ ಸಮಸ್ಯೆ ಒದಗಿದಾಗ ಎಲ್ಲರೂ ಅರ್ಜುನರೇ. ಆದರೆ ಶ್ರೀಕೃಷ್ಣನು ಪುನಃಪುನಃ ಬಂದು ಒಬ್ಬೊಬ್ಬರಿಗೂ ಉಪದೇಶ ಮಾಡುವುದಿಲ್ಲ. ಆತನು ಒಮ್ಮೆ ಮಾಡಿದ ಉಪದೇಶವನ್ನು ಪುನಃ ಪುನಃ ಪಠಿಸಬೇಕು, ಅರ್ಥಮಾಡಿಕೊಳ್ಳಬೇಕು, ಅನುಷ್ಠಾನವನ್ನು ನಿಜಜೀವನದಲ್ಲಿ ಅಳವಡಿಸಬೇಕು. ಅರ್ಜುನನ ಸ್ಥಿತಿಯಲ್ಲಿರತಕ್ಕ ಸಾರ್ವಕಾಲಿಕ ಸರ್ವಾಧಿಕಾರಿಗಳಿಗೂ ಈ ಉಪದೇಶ ಅನ್ವಯಿಸುತ್ತದೆ.

ಇತರ ಶಾಸ್ತ್ರಗ್ರಂಥಗಳಿಗೆ ಹೋಲಿಸಿದರೆ, ಶ್ರೀಕೃಷ್ಣಪರಮಾತ್ಮನದು ಭಗವದ್ಗೀತೆಯಲ್ಲಿ ಬಹಳ ಸ್ಪಷ್ಟ ಭಾಷೆ. "ಶ್ರುತಿ ಸ್ಮೃತಿ ಹರೇರಾಜ್ಞಾ" ಎಂಬ ನುಡಿಯಂತೆ ತನಗೆ ಇಷ್ಟವಾದದ್ದನ್ನು (ಧರ್ಮವನ್ನು), ತನಗೆ ಅನಿಷ್ಟವಾದದ್ದನ್ನು (ಅಧರ್ಮವನ್ನು) ಸ್ಫುಟವಾಗಿ ಹೇಳಿದ್ದಾನೆ. ಮೊದಲನೆಯದು ತನಗೆ ಪ್ರಿಯವೆಂದು ಕೆಲವು ಕಡೆಗೆ (ಸಚಮೇಪ್ರಿಯಃ) ಎಂದು ಶ್ಲಾಘನರೂಪವಾಗಿ ಮತ್ತು ಇನ್ನೊಂದು ಕಡೆಗೆ ಅನಿಷ್ಟವಾದದ್ದನ್ನು, ಅಪ್ರಿಯವಾದದ್ದನ್ನು ನಿಂದಾರೂಪವಾಗಿಯೂ ಹೇಳುತ್ತಾನೆ. "ಸ್ತೇನವವಹಿ", "ಪಾಪಂಪಚತಿ", "ಕ್ಷಿಪಾಮ್ಯಜಸ್ರಮಶುಭಾನ್ ಆಸುರೀಷ್ವೇವಯೋನಿಷು". ಇತ್ಯಾದಿ. ಅಂದರೆ ಯಾವದನ್ನು ಅಳವಡಿಸಿದರೆ ಪರಮಾತ್ಮನಿಗೆ ಪ್ರೀತಿಯಾಗುವದು, ಯಾವದರಿಂದ ಅಪ್ರೀತಿ ಜನಕವಾಗುವದು (Do's and Dont's) ಗೀತೆಯಲ್ಲಿ ಸ್ಪಷ್ಟವಾಗಿವೆ.

ಪ್ರಕೃತ, ಶ್ರೀಕೃಷ್ಣಪರಮಾತ್ಮನ ಮುಖದಿಂದ ನಿಸೃತವಾದ, ಸ್ಫೂರ್ತಿದಾಯಕ, ಭಕ್ತವಾತ್ಸಲ್ಯದ್ಯೋತಕ ಮತ್ತು ಆಶಾದಾಯಕ ವಚನ ಜ್ಞಾನ ಕಿರಣಗಳ ಕಡೆಗೆ ಲಕ್ಷ್ಯಹರಿಸುವಾ.

(1) "ನೇಹಾಭಿಕ್ರಮನಾಶೋಽಸ್ತಿ ಪ್ರತ್ಯವಾಯೋನವಿದ್ಯತೇ ॥
ಸ್ವಲ್ಪಮಪ್ಯಸ್ಯ ಧರ್ಮಸ್ಯ ತ್ರಾಯತೇ ಮಹತೋ ಭಯಾತ್ ॥2-40॥

ಪ್ರಥಮತಃ ಶ್ರೀಕೃಷ್ಣನು ಸಾಂಖ್ಯಯೋಗ - ಜೀವೇಶ್ವರ ಜ್ಞಾನಸ್ವರೂಪವನ್ನು ಹೇಳಿ ಮುಂದೆ ಜ್ಞಾನೋಪಾಯದ ವಿಷಯದಲ್ಲಿ ಅರ್ಜುನನಿಗೆ .ಬೋಧೆಮಾಡುವನು - "ನೇಹಾಭಕ್ರಮೇತಿ".-

ಕೃಷ್ಯಾದಿಗಳನ್ನು ಪ್ರಾರಂಭಿಸಿ ಕೊನೆಮುಟ್ಟದಿದ್ದರೆ ಹೇಗೆ ಫಲವಿಲ್ಲವೋ ಮತ್ತು ಯಾಗಾದಿ ಕಾರ್ಯಗಳಲ್ಲಿ ಮಧ್ಯವಿಚ್ಛೇದವಾದರೆ ಪಾಪವೂ ತತ್ಪರಿಹಾರಾರ್ಥವಾಗಿ ಪ್ರಾಯಶ್ಚಿತ್ತವೂ ಉಕ್ತವಾಗಿವೆಯೋ ಹಾಗೆ ವಿಷ್ಣುಧರ್ಮದಲ್ಲಿ ಪ್ರಾರಂಭಮಾತ್ರ ಮಾಡಿದರೂ ನಿಷ್ಫಲತ್ವ ಇಲ್ಲವೆಂದು ಮಾತ್ರವಲ್ಲ ಫಲವೂ ಇದೆ. ಹಾಗೆಯೇ ನಮ್ಮ ಅಶಕ್ತಿಯಿಂದಾಗಲಿ ಇನ್ನಿತರ ಕಾರಣಗಳಿಂದಾಗಲಿ ಆರಂಭಿಸಿದ ಕಾರ್ಯವು ಅಪೂರ್ಣವಾದರೆ ಪಾಪವಿಲ್ಲೆಂದು · ಮಾತ್ರವಲ್ಲ ಅಲ್ಪಾಂಶಕ್ಕೂ ಮಹಾಫಲವಿದೆ. ಇದೆಂಥ ಭಕ್ತವಾತ್ಸಲ್ಯ!

"ಪ್ರಾರಂಭ ಮಾತ್ರಮಿಚ್ಛಾವಾ ವಿಷ್ಣುಧರ್ಮೋ ನ ನಿಷ್ಫಲಾ ॥
ನಚಾನ್ಯಧರ್ಮಾಕರಣಾ ದೋಷವಾನ್ ವಿಷ್ಣುಧರ್ಮಕೃತ್ ॥
ಸ್ವೋಚಿತೇನೈವಧರ್ಮೇಣ ವಿಷ್ಣುಪೂಜಾಮೃತೇಕ್ವಚಿತ್ ॥
ನಾಪ್ರವೃತ್ತಿ ಪ್ರವೃತ್ತಿರ್ವಾಯತ್ರಧರ್ಮಃಸವೈಷ್ಣವಃ ॥ಗೀತಾತಾತ್ಪರ್ಯ॥

"ಉಕ್ತ ವಿಷ್ಣು ಧರ್ಮಾಚರಣೆಗಳನ್ನು ಪ್ರಾರಂಭಮಾಡಲು ಇಚ್ಛೆ ಇದ್ದರೂ ಸರಿಯೇ, ಭಕ್ತನ ಸದಿಚ್ಛೆಗಳಿಗೂ ಫಲುಂಟು. ವಿಷ್ಣುಧರ್ಮಗಳನ್ನಾಚರಿಸಿ, ಇತರಧರ್ಮಗಳನ್ನಾಚರಿಸದಿದ್ದರೂ ಲೋಪದೋಷ ಭಾಗಿಯಾಗುವದಿಲ್ಲ.

"ಸ್ವವರ್ಣಾಶ್ರಮಧರ್ಮ ಉಚಿತವಾದ ವಿಷ್ಣುಪೂಜಾದಿಗಳನ್ನು ಆಚರಿಸಬೇಕು. ಯಾವದು ಪ್ರವೃತ್ತಿ- ಹಿತಕಾರಣವಾಗಿದೆಯೋ, ಅಪ್ರವೃತ್ತಿ - ನಿಷಿದ್ಧಪರಿತ್ಯಾಗರೂಪವಾಗಿದೆಯೋ ಇವೆರಡಲ್ಲದೆ ಅನ್ಯದನ್ನು ಅನುಷ್ಠಾನ ಮಾಡದಿರುವವನು ವೈಷ್ಣವನು."

ವಿಷ್ಣುಧರ್ಮಾಚರಣೆಯಲ್ಲಿ ಹೆಜ್ಜೆಹೆಜ್ಜೆಗೂ ಪ್ರೋತ್ಸಾಹವಿದೆಯೆಂದು ಮನಗಾಣಬಹುದು.

2. "ಕರ್ಮಣ್ಯೇವಾಧಿಕಾರಸ್ತೇ ಮಾಫಲೇಷು ಕದಾಚನ ॥
ಮಾಕರ್ಮಫಲಹೇತುರ್ಭೂರ್ಮಾತೇ ಸಂಗೋಽಸ್ತ್ವಕರ್ಮಣಿ ॥2-47॥

"ಎಲೈ ಅರ್ಜುನನೇ ನಿನಗೆ ಕರ್ಮಮಾಡುವದರಲ್ಲಿ ಮಾತ್ರ ಅಧಿಕಾರ. ಫಲಸ್ವಾತಂತ್ರ್ಯವಾಗಲಿ ಫಲಸ್ವಾಮ್ಯವಾಗಲಿ ಇಲ್ಲದ್ದರಿಂದ ಫಲೋದ್ದೇಶವನ್ನಿಟ್ಟುಕೊಂಡು ಕರ್ಮಮಾಡುವದು ಯುಕ್ತವಲ್ಲ. ಫಲಕಾಮನೆ ಬಿಡಬೇಕೆಂದ ಮಾತ್ರಕ್ಕೆ ಕರ್ಮವನ್ನೇ ಬಿಡಬೇಕೆಂದಲ್ಲ. ಅದರಲ್ಲಿ ಮನಸ್ಸು ಮಾಡಕೂಡದು. ಎಂದರೆ ನಿಷ್ಕಾಮನೆಯಿಂದ ಭಗವತ್ಪ್ರೀತಗೋಸ್ಕರ ವಿಹಿತ ಕರ್ಮಗಳನ್ನು ಮಾಡಬೇಕು" ಇದು ಭಗವತ್‌ಪ್ರೀತಿಕರ.

ಭಗವದ್ಗೀತೆಯ ಈ ವಾಕ್ಯವು ಸುವರ್ಣಾಕ್ಷರದಿಂದ ಬರೆದಿಡತಕ್ಕ ವಿಷಯ.

3. "ನಮಾಂ ಕರ್ಮಾಣಿ ಲಿಂಪಂತಿ ನಮೇಕರ್ಮಫಲೇಸ್ಪೃಹಾ ।
ಇತಿಮಾಂ ಯೋಽಭಿಜಾನಾತಿ ಕರ್ಮಭಿರ್ನಸಬಧ್ಯತೇ ॥4.14॥

"ನಾನು ಕರ್ಮಬದ್ಧನಲ್ಲ. ನನಗೆ ಕರ್ಮಫಲದಲ್ಲಿ ಇಚ್ಚೆ ಇಲ್ಲ. ಫಲೇಚ್ಛಾರಹಿತನಾದ್ದರಿಂದ ಕರ್ಮಲೇಪವಿಲ್ಲ. ಎಲ್ಲಜೀವರಂತೆ ನನಗೆ ಕರ್ಮಾದಿಗಳಿಲ್ಲ. ಈ ರೀತಿಯಾಗಿ ನನ್ನನ್ನು ಯಾವ ಅಧಿಕಾರಿಯು ತಿಳಿಯುತ್ತಾನೋ ಅವನು ಸಹ ಈ ಜ್ಞಾನ ಸಹಕೃತ ಪುಣ್ಯದಿಂದ ಕರ್ಮಬಂಧದಿಂದ ಬಿಡುಗಡೆ ಹೊಂದುತ್ತಾನೆ. ಕರ್ಮಬಂಧವನ್ನು ಕಳೆದುಕೊಳ್ಳಲು ಸುಲಭಹಾದಿಯನ್ನು ಹೇಳಿದ್ದಾನೆ ಭಕ್ತಾನುಕಂಪಿ ಶ್ರೀಹರಿ.

4. ಅರ್ಜುನುವಾಚ :

"ಅಯತಿ ಶ್ರದ್ಧಯೋಪೇತೋ ಯೋಗಾಚ್ಚಲಿತ ಮಾನಸಃ ॥
ಅಪ್ರಾಪ್ಯಯೋಗ ಸಂಸಿದ್ಧಿಂ ಕಾಂಗತಿಂ ಕೃಷ್ಣಗಚ್ಛತಿ" ॥6.37॥

ಶ್ರೀ ಭಗವಾನುವಾಚ :

"ಪಾರ್ಥನೈವೇಹ ನಾಮುತ್ರ ವಿನಾಶಸ್ತಸ್ಯ ವಿದ್ಯತೇ ॥
ನಹಿ ಕಲ್ಯಾಣ ಕೃತ್ ಕಶ್ಚಿತ್ ದುರ್ಗತಿಂ ತಾತ-ಗಚ್ಛತಿ ॥6.40.॥
ಪ್ರಾಪ್ಯ ಪುಣ್ಯಕೃತಾಂ ಲೋಕಾನುಷಿತ್ವಾ ಶಾಶ್ವತೀಃ ಸಮಾಃ ।

ಶುಚೀನಾಂ ಶ್ರೀಮತಾಂಗೇಹೇ ಯೋಗಭ್ರಷ್ಟೋಭಿಜಾಯತೇ ॥6.41॥
ಅಥವಾ ಯೋಗಿನಾಮೇವ ಕುಲೇ ಭವತಿ ಧೀಮತಾಂ ॥
ಏತದ್ಧಿ ದುರ್ಲಭತರಂ ಲೋಕೇ ಜನ್ಮ ಯದೀದೃಶಂ" ॥6.42॥

"ಹೇ ಕೃಷ್ಣ, ಯಾವನೊಬ್ಬ ಸಾಧಕನು ಶ್ರದ್ಧಾತಿಯುತನಾದಾಗ್ಯೂ ನೀನು ಈಗ ಉಪದೇಶಿಸಿದ ಧ್ಯಾನವಿಷಯವನ್ನು ತಿಳಿದರೂ, ದಾರ್ಢ್ಯಜ್ಞಾನಾಭಾವದಿಂದ, ಚಾಂಚಲ್ಯಾದಿ ಪ್ರತಿಬಂಧಕ – ಸಾಮಗ್ರಿಯಿಂದ ಕೂಡಿದವನಾಗಿಯಾಗಲಿ, ಇಚ್ಛೆ ಇದ್ದರೂ ಪ್ರಯತ್ನಮಾಡದ ಕಾರಣದಿಂದಾಗಲಿ, ಯೋಗದಿಂದಾಗ ಬೇಕಾದ ಸಿದ್ಧಿಯನ್ನು ಥೊಂದದಿರುವವನು ಯಾವಗತಿಯನ್ನು ಹೊಂದುವನು?

ಅಂಥವನು ಐಹಿಕ ಆಮುಷ್ಮಿಕ ದ್ವಿವಿಧ ಪುರುಷಾರ್ಥಗಳಿಂದ ಭ್ರಷ್ಟನಾಗಿ, ಆಶ್ರಯವಿಲ್ಲದವನಾಗಿ, ಬ್ರಹ್ಮಪ್ರಾಪ್ತಿಯ ವಿಷಯದಲ್ಲಿ ಮೋಹಿತನಾಗಿ, ಹೇಗೆ ಬಿರುಗಾಳಿಯ ಪ್ರಹಾರದಿಂದ ಮೋಡಗಳು ಛಿನ್ನ–ಛಿದ್ರವಾಗಿ ಮಳೆಗರೆಯಲಾರವೋ ಹಾಗೆಯೇ ಸಾಧಕನೂ ನರಕಾದ್ಯನರ್ಥಗಳನ್ನು ಹೊಂದುವನೋ ಹೇಗೆ? ಈ ಸಂಶಯವನ್ನು ಸಂಪೂರ್ಣ ಪರಿಹರಿಸುವದರಲ್ಲಿ ನಿನ್ನ ಹೊರತು ದಕ್ಷರು / ಸಮರ್ಥರು ಯಾರೂ ಇಲ್ಲ. ನೀನೇ ಉತ್ತರವನ್ನು ದಯಪಾಲಿಸಬೇಕೆಂದು" ಅರ್ಜುನನ ಪ್ರಶ್ನೆ ಮತ್ತು ಪ್ರಾರ್ಥನೆ.

ಶ್ರೀಕೃಷ್ಣನು ಉತ್ತರಿಸುತ್ತಾನೆ. "ಹೇ ಪಾರ್ಥ, ನೀನು ವಿವಕ್ಷೆಮಾಡಿದ ಸಾಧಕನಿಗೆ – ಅಂದರೆ ಯೋಗಭ್ರಷ್ಟನಿಗೆ ಈ ಲೋಕದಲ್ಲಾಗಲಿ ಅಥವಾ ಪರಲೋಕದಲ್ಲಾಗಲಿ ನಾಶವಿಲ್ಲ. ಇಹಲೋಕದಲ್ಲಿ ನಾಶವೆಂದರೆ ಹೀನಯೋನಿಯಲ್ಲಿ ಜನಿಸುವದು, ಪರಲೋಕದಲ್ಲಿ ನಾಶವೆಂದರೆ ನರಕಾದ್ಯನರ್ಥಪ್ರಾಪ್ತಿ. ಯೋಗಭ್ರಷ್ಟನಿಗೆ ಈ ಎರಡೂ ಭಯಗಳು ಇಲ್ಲ. ಏಕೆಂದರೆ ಕೇವಲ ಸ್ವಲ್ಪ ಕಾಲ ಕೂಡ ಧ್ಯಾನರೂಪವಾದ ಶುಭಕರ್ಮವನ್ನು ಅನುಷ್ಠಾನ ಮಾಡಿದ ಮನುಷ್ಯನು ದುರ್ಗತಿಯನ್ನು ಹೊಂದುವದಿಲ್ಲ. ಅಷ್ಟೇ ಅಲ್ಲ, ಮತ್ತೇನೆಂದರೆ ಅವನು ಪುಣ್ಯದಿಂದ ಸಂಪಾದ್ಯವಾದ ಲೋಕವನ್ನು ಹೊಂದಿ ಅಲ್ಲಿ ಬಹುವತ್ಸರ ವಾಸಮಾಡಿ ನಂತರ ಪವಿತ್ರರಾದ ಧನಿಕರ ಮನೆಯಲ್ಲಿ ಜನ್ಮತಾಳುವನು.

ಇಲ್ಲವೇ ಯೋಗಿಗಳ ಅಥವಾ ವಿದ್ವಾಂಸರ ವಂಶದಲ್ಲಿ ಜನ್ಮ ತಾಳುತ್ತಾನೆ. ಅಂತಹ ಒಳ್ಳೇವಂಶದಲ್ಲಿ ಜನ್ಮವು ಬಹಳ ದುರ್ಲಭ ಎಂದು ನನ್ನ ಮತ.

ಹೇ ಅರ್ಜುನ, ಇಂಥ ಸದ್ವಂಶದಲ್ಲಿ ಜನ್ಮತಾಳಿದ ಯೋಗಭ್ರಷ್ಟನು ಪೂರ್ವಜನ್ಮದ ಸಂಸ್ಕಾರದಿಂದ ಹಿಂದೆ ಮಾಡಿದ ಪರಮಾತ್ಮ ಧ್ಯಾನರೂಪವಾದ ಯೋಗವನ್ನು ಹೊಂದಿ ಸಾಧನವನ್ನು ಪೂರ್ಣ ಮಾಡುವದರಲ್ಲಿ ಆಸಕ್ತನಾಗುವನು. ಪೂರ್ವಾಭ್ಯಾಸದಿಂದ ಹೆಚ್ಚು ಪ್ರಯತ್ನವಿಲ್ಲದೇ ಅದೇ ಯೋಗ ಮಾರ್ಗದಲ್ಲಿ ಅವನ ಮನಸ್ಸು ಯೋಗದ ಕಡೆಗೆ ವೈಯಲ್ಪಡುವದು."

"ಯೋಗಸ್ಯ ಜಿಜ್ಞಾಸುರಪಿ ಜ್ಞಾತವ್ಯೋ ಮಯಾ ಯೋಗ ಇತಿ
ಯಸ್ಯಾತೀವೇಚ್ಛಾ
ಸೋऽಪಿ ಶಬ್ದಬ್ರಹ್ಮಾತಿ ವರ್ತತೇ । ಪರಂಬ್ರಹ್ಮಪ್ರಾಪ್ನೋತೀತ್ಯರ್ಥಃ"
ಗೀ.ಭಾಷ್ಯ॥

"ಈ ಧ್ಯಾನಯೋಗವನ್ನು ತಿಳಿಯುವದಕ್ಕೆ ಇಚ್ಛೆಯುಳ್ಳ ಜಿಜ್ಞಾಸುವು ಕೂಡ ಶಬ್ದಬ್ರಹ್ಮನನ್ನು ಅತಿಕ್ರಮಿಸುತ್ತಾನೆ. ಎಂದರೆ ಪರಬ್ರಹ್ಮನನ್ನು ಹೊಂದುತ್ತಾನೆ. ಹೀಗಿರುವಾಗ, ಸ್ವಲ್ಪಕಾಲವಾದರೂ ಧ್ಯಾನ ಮಾಡಿದವನಿಗೆ ಉತ್ತಮಲೋಕಪ್ರಾಪ್ತಿಯಾಗುವದು ಎಂದು ಹೇಳುವದೇನು, ಕೈಮುತ್ಯನ್ಯಾಯದಿಂದಲೇ ಸಿದ್ಧ."

ಶ್ರೀಕೃಷ್ಣಪರಮಾತ್ಮನದು ತನ್ನ ಭಕ್ತರಲ್ಲಿ ಅದೆಷ್ಟು ಅನುಕಂಪ! ಇಂಥ ಆಶ್ವಾಸನ ಇನ್ನಾರಿಂದಲೂ ಸಿಗದು.

5. "ಚತುರ್ವಿಧಾ ಭಜಂತೇ ಮಾಂ ಜನಾಃ ಸುಕೃತಿನೋऽರ್ಜುನ ॥
ಆರ್ತೋ ಜಿಜ್ಞಾಸುರರ್ಥಾರ್ಥೀ ಜ್ಞಾನೀಚ ಭರತರ್ಷಭ ॥7.16॥
ತೇಷಾಂ ಜ್ಞಾನೀ ನಿತ್ಯಯುಕ್ತಃ ಏಕಭಕ್ತಿರ್ವಿಶಿಷ್ಯತೇ ॥
ಪ್ರಿಯೋಹಿ ಜ್ಞಾನಿನೋऽತ್ಯರ್ಥಮಹಂಸಚ ಮಮಪ್ರಿಯಃ ॥7.17॥
ಉದಾರಾಃ ಸರ್ವಏವೈತೇ ಜ್ಞಾನಿತ್ವಾತ್ಮೈವ ಮೇ ಮತಮ್ ॥
ಆಸ್ಥಿತಃ ಸಹಿಯುಕ್ತಾತ್ಮಾ ಮಾಮೇವಾನುತ್ತಮಾಂಗತಿಮ್ ॥7.18॥
ಬಹೂನಾಂ ಜನ್ಮನಾಮಂತೇ ಜ್ಞಾನವಾನ್ ಮಾಂ ಪ್ರಪದ್ಯತೇ ॥

**ವಾಸುದೇವಃ ಸರ್ವಮಿತಿ ಸಮಹಾತ್ಮಾಸುದುರ್ಲಭಃ ॥7.19॥**

ಅಸುರ ಸ್ವಭಾವವುಳ್ಳವರು ತನಗೆ ಶರಣಾಗತರಾಗುವದಿಲ್ಲವೆಂದು ಪೂರ್ವಸಂದರ್ಭ ಶ್ಲೋಕಗಳಿಂದ ನಿರೂಪಿಸಿ ಪುಣ್ಯವಿಶೇಷ ಉಳ್ಳವರೇ ತನ್ನನ್ನು ಹೊಂದುವರೆಂದು ಹೇಳುತ್ತಾನೆ ಭಗವಾನ್ ಶ್ರೀಕೃಷ್ಣ.

ಹೇ ಅರ್ಜುನ, ನನ್ನನ್ನು ನಾಲ್ಕು ತರಹದ ಜನರು ಭಜಿಸುತ್ತಾರೆ. ಅವರಲ್ಲಿಯೂ ತಾರತಮ್ಯವಿದೆ. ಅವರು ಯಾರ್‍ಯಾರೆಂದರೆ 1. ರೋಗಾದ್ಯುಪದ್ರವದಿಂದ ಕೂಡಿದವರು 2. ಪರಮಾತ್ಮನ ವಿಷಯಕ ಜ್ಞಾನೇಚ್ಛಾಉಳ್ಳವರು 3. ಧನಾದಿ ಕಾಮನಾದಿಂದ ಕೂಡಿದವರು ಮತ್ತು 4. ಆತ್ಮತತ್ವವನ್ನು ತಿಳಿದವರು, ತಿಳಿಯಲಿಚ್ಛಿಸುವವರು.

ಮೇಲೆ ಹೇಳಿದ ನಾಲ್ವರಲ್ಲಿ, ನನ್ನ ಧ್ಯಾನದಲ್ಲಿಯೇ ನಿರತನಾದ ಮತ್ತು ನನ್ನಲ್ಲಿಯೇ ಮುಖ್ಯವಾದ ಭಕ್ತಿಯಿಂದ ಕೂಡಿದ ಜ್ಞಾನಿಯೇ ಶ್ರೇಷ್ಠನು.

"ಮಯ್ಯೇವ ಭಕ್ತಿರ್ನಾನ್ಯತ್ರ ಭಕ್ತಿಃಸ ಏಕ ಭಕ್ತಿರುಚ್ಯತೇ" ॥ಗಿ.ಭಾಷ್ಯ॥

ಬೇರೆಯಾರಲ್ಲಿಯೂ ಭಕ್ತಿಯನ್ನು ಮಾಡದೇ ಕೇವಲ ನನ್ನಲ್ಲಿಯೇ ಭಕ್ತಿ ಇದ್ದವನಿಗೆ "ಏಕಭಕ್ತಿರ್ವಿಶಿಷ್ಯತೆ" ಎಂದು ಹೇಳಿದೆ. ಯಾಕೆಂದರೆ ಜ್ಞಾನಿಯು ನನಗೆ ಅತಿಪ್ರಿಯನು ಮತ್ತು ನಾನು ಆತನಿಗೆ ಪ್ರಿಯನು.

"ಬಹೂನಾಂ ಜನ್ಮನಾಮಂತೇ ಜ್ಞಾನವಾನ್ಭವತಿ ॥ ತಚ್ಚೋಕ್ತಂ ಬ್ರಾಹ್ಮೇ - ಬಹುಭಿರ್ಜನ್ಮಭಿಜ್ಞಾತ್ವಾ ತತೋಮಾಂ ಪ್ರತಿಪದ್ಯತೆ" ॥ಗೀ.ಭಾಷ್ಯ॥

"ಜೀವನು ಬಹುಜನ್ಮಗಳಲ್ಲಿ ಸಾಧನಮಾಡಿ ಕೊನೆಗೆ ಪರಮಾತ್ಮನ ಜ್ಞಾನ ಉಳ್ಳವನಾಗುವನು. ಸರ್ವಜಗತ್ತೂ ಪರಮಾತ್ಮನ ಅಧೀನ ಎಂದು ನಿಶ್ಚಿತ ಜ್ಞಾನ ಉಳ್ಳವನಾದ ಜ್ಞಾನಿಯು ಉತ್ತಮ. ಅಂಥವರು ದುರ್ಲಭ."

"ಯಾವದೇ ಕಾರಣದಿಂದಾಗಲೀ ಕೇವಲ ನಾನೇ ಗತಿಯೆಂದು ನನ್ನನ್ನಾಶ್ರಯಿಸಿದ ಈ ನಾಲ್ವರೂ ಪ್ರಿಯರೇ. ಜ್ಞಾನಿಯು ಪ್ರಿಯನೆಂದು ಹೇಳಿದೆನಷ್ಟೇ. ಉಳಿದವರಲ್ಲಿ ಉಪೇಕ್ಷಾಭಾವನೆ ಸರ್ವಥಾ ಇಲ್ಲ. ಅನೇಕ ಜನ್ಮಗಳಲ್ಲಿ ಸಾಧನಮಾಡಿ ಇವರೆಲ್ಲರೂ ನನ್ನನ್ನೇ ಹೊಂದುತ್ತಾರೆ," ಎನ್ನುತ್ತಾನೆ ಶ್ರೀಕೃಷ್ಣ.

ತನ್ನ ಬಳಿಬಂದವರನ್ನು ಉಪೇಕ್ಷಾಮಾಡುವದಿಲ್ಲವೆಂಬ ಆಶ್ವಾಸನೆ ಭಕ್ತನಲ್ಲಿ ಅಚಲ ಶ್ರದ್ಧಾ ಭಕ್ತಿಗಳಿಗೆ ಕಾರಣವಾಗುವದರಲ್ಲಿ ಸಂದೇಹವಿಲ್ಲ.

6. "ಅನನ್ಯಾಶ್ಚಿಂತ ಯಂತೋಮಾಂ ಯೇ ಜನಾಃ ಪರ್ಯುಪಾಸತೇ ।
ತೇಷಾಂ ನಿತ್ಯಾಭಿ ಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಂ ॥9.22॥

ಅನ್ಯರನ್ನು ಸಂಪೂರ್ಣವಾಗಿ ತೊರೆದು, ಯಾರು ನನ್ನನ್ನೇ ಒಂದೇ ಮನಸ್ಸಿನಿಂದ ಉಪಾಸನಾ ಮಾಡುತ್ತಾರೋ ಅವರಿಗೆ ಅಪೇಕ್ಷಿತಗಳನ್ನು ಒದಗಿಸುವದೂ (ಅಪ್ರಾಪ್ತಸ್ಯ ಪ್ರಾಪ್ತತ್ವಂ) ಕೊಟ್ಟದ್ದನ್ನು ಪರಿರಕ್ಷಣೆ ಮಾಡುವದೂ (ಪ್ರಾಪ್ತಸ್ಯ ಪರಿರಕ್ಷಣಂ) ಅಂದರೆ "ಯೋಗಕ್ಷೇಮ" ಹೀಗೆ ಅವನಿಗೆ ಸಂಬಂಧಪಟ್ಟ ಸರ್ವಸ್ವವನ್ನೂ ನಾನೇ ವಹಿಸಿಕೊಳ್ಳುತ್ತೇನೆ.

ಪರಮಾತ್ಮನನ್ನು ನಾವು ಸಂಪೂರ್ಣವಾಗಿ ನಂಬಿದರೆ, ನಮ್ಮ ಸಕಲ ಭಾರ ಅವನದೇ ಎಂದು ಶ್ರೀಕೃಷ್ಣನ ಆಶ್ವಾಸನ.

7. "ಪತ್ರಂ ಪುಷ್ಪಂಫಲಂ ತೋಯಂ ಯೋಮೇ ಭಕ್ತ್ಯಾ ಪ್ರಯಚ್ಛತೀ ॥
ತದಹಂ ಭಕ್ತ್ಯುಪಹೃತಂ ಅಶ್ನಾಮಿ ಪ್ರಯತಾತ್ಮನಃ ॥9.26॥
ಯತ್ಕರೋಪಿ ಯದಶ್ನಾಸಿ ಯಜ್ಜುಹೋಪಿ ದದಾಸಿಯತ್ ॥
ಯತ್ತಪಸ್ಯಸಿ ಕೌಂತೇಯ ತತ್ಕುರುಷ್ವ ಮದರ್ಪಣಮ್ ॥9.27॥
ಶುಭಾಶುಭ ಫಲೈರೇವಂ ಮೋಕ್ಷಸೇಕರ್ಮಬಂಧನೈಃ ॥
ಸನ್ಯಾಸಯೋಗ ಯುಕ್ತಾತ್ಮಾ ವಿಮುಕ್ತೋ ಮಾಮುಪೈಷ್ಯಸಿ ॥9.28॥
ಸಮೋಹಂ ಸರ್ವಭೂತೇಷು ನಮೇದ್ವೇಷ್ಯೋಸ್ತಿ ನಪ್ರಿಯಃ ॥
ಯೋಭಜಂತಿತುಮಾಂ ಭಕ್ತ್ಯಾಮಯಿತೇ ತೇಷುಚಾಪ್ಯಹಂ" ॥9.29॥

ಹೇ ಭಗವಾನ್, ನೀನು ಮಹಾಮಹಿಮನಾದ ಪ್ರಯುಕ್ತ, ನಿನ್ನ ಪೂಜೆ ನಿನ್ನ ಒಲವು ಎರಡೂ ಅತಿಶಯ ಶ್ರಮಸಾಧ್ಯ ಮತ್ತು ದುರ್ಲಭವಾಗಿ ಕಾಣುತ್ತದೆ, ಎಂದರೆ – ಇಲ್ಲವೆಂದು ದೇವೋತ್ತಮನ ಅಭಿಪ್ರಾಯ.

ಯಾವಾತನು ಭಕ್ತಿಯಿಂದ, ವಿಹಿತವಾದ ಪತ್ರ, ಪುಷ್ಪ, ಫಲ, ಜಲಗಳನ್ನು ನನಗೆ ನಿವೇದಿಸುತ್ತಾನೋ ನಾನು ಅವುಗಳನ್ನು ಆದರದಿಂದ ಸ್ವೀಕರಿಸುತ್ತೇನೆ ಮತ್ತು ಅವರಿಗೆ ಅನುಗ್ರಹಿಸುತ್ತೇನೆ.

ಹೇ 'ಕುಂತೀಪುತ್ರನೇ, ಈ ಕಾರಣದಿಂದ ನೀನು ಯಾವಾಗ ಸಮ್ಯಾಚೀನವಾದದ್ದು ಭುಂಜಿಸುವಿಯೋ, ಹೋಮಿಸುವಿಯೋ, ಕೊಡುವಿಯೋ ಅಥವಾ ತಪಸ್ಸು ಮಾಡುವಿಯೋ ಆ ವಿಹಿತ ಕರ್ಮವು ಅಲ್ಪವಾದರೂ ಸರಿ ನನಗೆ ಭಕ್ತಿಪುರಸ್ಸರವಾಗಿ ಸಮರ್ಪಿಸು. ನಾನು ಪ್ರೀತನಾಗುತ್ತೇನೆ.

ಹೀಗೆ ಸರ್ವವನ್ನೂ ನನಗೆ ಸಮರ್ಪಿಸಿದರೆ, ನೀನು ಈ ಶೂಭಾಶುಭ ಫಲಉಳ್ಳ ಕರ್ಮಬಂಧನದಿಂದ ಮುಕ್ತನಾಗುವಿ, ಫಲತ್ಯಾಗ ಯುಕ್ತವಾದ ಕರ್ಮಗಳಿಂದ ಮತ್ತು ತತ್ಸಮರ್ಪಣೆಯಿಂದ ನೀನು ಸಂಸಾರದಿಂದ ಮುಕ್ತನಾಗಿ ನನ್ನನ್ನು ಹೊಂದುವಿ.

ನಾನು ಭಕ್ತಪ್ರಿಯನಾದರೂ ಪ್ರಾಣಿಗಳಲ್ಲಿ ನನಗೆ ವೈಷಮ್ಯವಿಲ್ಲ. ನಾನು ಎಲ್ಲಾ ಭೂತಗಳಲ್ಲಿಯೂ ಸಮನು. ದ್ವೇಷಿ ಎಂತಾಗಲಿ ಪ್ರಿಯರೆಂದಾಗಲಿ ಯಾರೂ ಇಲ್ಲ. ಅವರವರ ಭಾವನೆ, ಭಕ್ತಿ, ಪೂಜಾ, ಕರ್ಮಗಳಿಗನುಸಾರವಾಗಿ ಫಲ ಕೊಡುತ್ತೇನೆ. ವಿಷಮನಲ್ಲ. ವೈಷಮ್ಯ ನೈರ್ಘೃಣ್ಯಗಳಿಲ್ಲವೆಂಬ ಭರವಸೆ ಕೊಟ್ಟಿದ್ದಾನೆ.

"ಓಂ ವೈಷಮ್ಯ ನೈರ್ಘೃಣ್ಯೇ ನ ಸಾಪೇಕ್ಷತ್ವಾತ್ತಥಾಹಿ ದರ್ಶಯತಿ ಓಂ (ಬ್ರ.ಸೂ.2.1.35)

ಬ್ರಹ್ಮಸೂತ್ರದ ಈ ಮೇಲಿನ ಸೂತ್ರವನ್ನು, ಶ್ರೀಕೃಷ್ಣಪರಮಾತ್ಮನೇ ಸಾಕಷ್ಟು ವಿವರಗಳನ್ನು ಕೊಟ್ಟು "ನಮೇ ದ್ವೇಷ್ಯೋಸ್ತಿ ನ ಪ್ರಿಯಃ" ಎಂದು ಸ್ಪಷ್ಟೀಕರಿಸಿದ್ದಾನೆ. ಇದೂ ಸಹ ಅವನ ಮಹಿಮೆಯೇ.

8. "ಅಪಿಚೇತ್ ಸುದುರಾಚಾರೋ ಭಜತೇಮಾಮನ್ಯಭಾಕ್ ॥
ಸಾಧುರೇವ ಸಮಂತವ್ಯಃ ಸಮ್ಯಗ್ವ್ಯವಹಿತೋಹಿಸಃ ॥9.30॥
ಕ್ಷಿಪ್ರಂಭವತಿ ಧರ್ಮಾತ್ಮಾ ಶಶ್ವಚ್ಛಾಂತಿಂ ನಿಗಚ್ಛತಿ ॥
ಕೌಂತೇಯ ಪ್ರತಿಜಾನೀಹಿ ನಮೇಭಕ್ತಃ ಪ್ರಣಶ್ಯತಿ ॥9.31॥
ಮಾಂಹಿಪಾರ್ಥವ್ಯಪಾಶ್ರಿತ್ಯ ಯೇಽಪಿಸ್ಯುಃಪಾಪಯೋನಯಃ ॥
ಸ್ತ್ರಿಯೋವೈಶ್ಯಸ್ತಥಾಶೂದ್ರಾಸ್ತೇಽಪಿ ಯಾಂತಿ ಪರಾಂಗತಿಮ್ ॥9.32॥
ಕಿಂಪುನಃ ಬ್ರಾಹ್ಮಣಾಪುಣ್ಯಾ ಭಕ್ತಾ ರಾಜರ್ಷಯಸ್ತಥಾ ॥
ಅನಿತ್ಯಮಸುಖಂ ಲೋಕಮಿಮಂ ಪ್ರಾಪ್ಯಭಜಸ್ವಮಾಂ ॥9.33॥

ಮನ್ಮನಾಭವ ಮದ್ಭಕ್ತೋ ಮದ್ಯಾಜೀ ಮಾಂ ನಮಸ್ಕುರು ॥
ಮಾಮೇವೈಷ್ಯಸಿ ಯುಕ್ತ್ವೈವ ಮಾತ್ಮಾನಂ ಮತ್ಪರಾಯಣಃ ॥9.34॥

ಕದಾಚಿತ್ ಯಾರಾದರೊಬ್ಬನು ದುರಾಚಾರಿಯಾಗಿದ್ದರೂ ಕೇವಲ ನನ್ನನ್ನೇ ಭಜಿಸುವನೋ ಅವನನ್ನು ಕೂಡ ಸಾಧುವೆಂದೇ ತಿಳಿಯಬೇಕು, (ಅವು ಶಾಪ ಪಾಪಾದಿಗಳ - ಫಲವಾಗಿರಬೇಕು) ಯಾಕೆಂದರೆ ಅವನು ತತ್ವನಿಶ್ಚಯ ಉಳ್ಳವನಾಗಿ ನನ್ನ ವಿಷಯದಲ್ಲಿಯೇ ವ್ಯವಸಾಯ ಭಕ್ತಿಯುಳ್ಳವನಿರುವದರಿಂದ.

ಅಂಥ ಮನುಷ್ಯನು (ದುರಾಚಾರಿಯು) ಶೀಘ್ರದಲ್ಲಿಯೇ ಸನ್ಮಾರ್ಗಕ್ಕೆ ಬಂದು ಜ್ಞಾನವನ್ನು ಸಂಪಾದಿಸಿಕೊಂಡು ಸ್ಥಿರವಾದ ಶಾಂತಿಯನ್ನು / ಮೋಕ್ಷವನ್ನು ಹೊಂದುವನು.

ಹೇ ಕೌಂತೇಯ, ನನ್ನ ಭಕ್ತನು ನರಕಾದ್ಯನರ್ಥಗಳನ್ನು ಹೊಂದಿ ನಾಶವಾಗುವದಿಲ್ಲವೆಂದು ತಿಳಿ ಮತ್ತು ಜಗತ್ತಿನಲ್ಲಿ ಸಾರು.

ಹೇ ಪಾರ್ಥ, ಪಾಪಾದಿ ಕರ್ಮಗಳ ಫಲವಾಗಿ ಸ್ತ್ರೀ ವೈಶ್ಯ, ಶೂದ್ರಾದಿಗಳ ಯೋನಿಯಲ್ಲಿ ಜನಿಸಿದಾಗ್ಯೂ ನನ್ನನ್ನೇ ಆಶ್ರಯಿಸಿಕೊಂಡು ಉಪಾಸನಾ ಮಾಡುತ್ತಾರೋ ಅವರೇ ಯೋಗ್ಯ ಗತಿಯನ್ನು ಹೊಂದುತ್ತಾರೆಂದ ಮೇಲೆ, ಸಹಜ ಪುಣ್ಯಹೇತುಕರಾದ ಬ್ರಾಹ್ಮಣರಾಗಲಿ ರಾಜರ್ಷಿಗಳಾಗಲಿ ನನ್ನ ಭಕ್ತರು ಉತ್ತಮ ಗತಿಯನ್ನು ಹೊಂದುವರೆಂಬ ವಿಷಯದಲ್ಲಿ ಸಂದೇಹವೇನು? ಆದಕಾರಣ ಈ ಭೂಲೋಕದಲ್ಲಿ ಯಾವ ಅವಸ್ಥೆಯಲ್ಲಿಯೇ ಇರಲಿ ಸರ್ವೋಪಾಯಗಳಿಂದ ನನ್ನನ್ನೇ ಆಶ್ರಯಿಸು.

ಕೊನೆಯದಾಗಿ ಭಜನೆಯ ಸುಲಭಪ್ರಕಾರವನ್ನು ಹೇಳುವನು. ನನ್ನಲ್ಲಿ ಮನಸ್ಸುಳ್ಳವನಾಗು, ಸದಾಸ್ಮರಿಸು, ನನ್ನಲ್ಲಿ ಭಕ್ತಿಮಾಡು, ನನ್ನ ಉದ್ದೇಶ - ಅಂದರೆ ಹರಿಪ್ರೀತಿಗಾಗಿ ಯಜನ ಭಜನಾದಿಗಳನ್ನು ಮಾಡು, ನನಗೇ ಸಮಸ್ಕರಿಸು. ಹೀಗೆ ಸದಾ ನನ್ನಲ್ಲಿ ಆಸಕ್ತನಾದ ನಿನ್ನ ಮನಸ್ಸನ್ನು ನನ್ನಲ್ಲಿಯೇ ಸ್ಥಿರೀಕರಿಸು. ಅಂತ್ಯದಲ್ಲಿ ನನ್ನನ್ನೇ ಹೊಂದುವಿ.

ಸದಾ ಶ್ರೀಕೃಷ್ಣನನ್ನು ನೆನೆಯುವವರಿಗೆ ಅದೆಷ್ಟು ರಿಯಾಯಿತಿ ತೋರಿಸಿದ್ದಾನೆ ಪ್ರಭು. ಇವರೆಲ್ಲರನ್ನೂ ವೈಕುಂಠಕ್ಕೆ ಕರೆದೊಯ್ಯುವ ಪ್ರತಿಜ್ಞೆ ಮಾಡಿದಂತಿದೆ ಶ್ರೀಹರಿ.

9. ಯೇತುಧರ್ಮ್ಯಾಮೃತಮಿದಂ ಯಥೋಕ್ತಂ ಪರ್ಯುಪಾಸತೇ ।
ಶ್ರದ್ದದಾನಾ ಮತ್ಪರಮಾ ಭಕ್ತಾಸ್ತೇಽತೀವ ಮೇ ಪ್ರಿಯಾಃ ॥12.20॥
ಧರ್ಮ್ಯಾಮೃತಂ – ಧಾರಕತ್ವಾದ್ಧರ್ಮೋ ವಿಷ್ಣುಃ
ತದುಪಾಸನಾಂಗತ್ವಾತ್
ಧರ್ಮಸಾಧನಂ ಧರ್ಮ್ಯಂ.
ಅಮೃತ ಶಬ್ದಿತ ಮುಕ್ತಿ ಸಾಧನಮಮೃತಂ.
ಧರ್ಮ್ಯಂಚ ತದಮೃತಂಚ ಧರ್ಮ್ಯಾಮೃತಂ ॥
ಯಥೋಕ್ತಂ ಅದ್ವೇಷ್ಟ್ಯಾದಿ ಪ್ರೀತಿಸಾಧಕಂ ॥ಗೀತಾ ವಿವೃತ್ತಿ॥

ಈ ದ್ವಾದಶಾಧ್ಯಾಯದಲ್ಲಿ ವಿಸ್ತಾರವಾಗಿ ಹೇಳಿದ ಭಕ್ತಿರೂಪವಾದ ಧರ್ಮವನ್ನು ಯಾರು ಉಕ್ತರೀತಿಯಲ್ಲಿ ಉಪಾಸನಾದಿಗಳನ್ನು ಶ್ರದ್ಧೆಯಿಂದ ಸರ್ವೋತ್ತಮತ್ವ ಜ್ಞಾನದಿಂದ ಅನುಷ್ಠಾನ ಮಾಡುವರೋ ಅವರು ನನಗೆ ಅತ್ಯಂತ ಪ್ರೀಯರು. ತನಗೆ ಪ್ರಿಯಾಪ್ರಿಯತ್ವ ವಿಷಯದಲ್ಲಿ ಇದು ಪರಮಾತ್ಮನ ನಿಷ್ಕೃಷ್ಟ ವಾಣಿ.

10. ಮಾಂಚ ಯೋಽವ್ಯಭಿಚಾರೇಣ ಭಕ್ತಿಯೋಗೇನ ಸೇವತೇ ॥
ಸಗುಣಾನ್ ಸಮತೀತ್ಯೈತಾನ್ ಬ್ರಹ್ಮಭೂಯಾಯ ಕಲ್ಪತೇ ॥14.26॥

ಚತುರ್ದಶೋಧ್ಯಾಯದಲ್ಲಿ ಗುಣಾತೀತನ ಲಕ್ಷಣಗಳನ್ನು ವಿಸ್ತಾರವಾಗಿ ಹೇಳಿ ಗುಣಾತೀತನು ಹೇಗಾಗುವನು ಎಂಬ ಆಕಾಂಕ್ಷೆಗೆ ಉತ್ತರ ಹೇಳುವನು. ಯಾವ ಮುಮುಕ್ಷುವು ನನ್ನನ್ನು ನಿತ್ಯದಲ್ಲಿ ಭಕ್ತಿರೂಪ ಉಪಾಯದಿಂದ ಸೇವಿಸುವನೋ ಅವನು ತ್ರಿಗುಣಗಳನ್ನು ದಾಟಿ ಬ್ರಹ್ಮಚಿತ್‌ಪ್ರಕೃತಿಗಳಂತೆ ನನಗೆ ಪ್ರಿಯನಾಗುವನು. ಇದು ಶ್ರೀಕೃಷ್ಣ ಪರಮಾತ್ಮನ ಮುಖದಿಂದ ನಿಸೃತವಾದ್ದರಿಂದ ಇದೇ ರಾಜಮಾರ್ಗ.

11. ಯೋಮಾಮೇವ ಮಸಮ್ಮೂಢೋ ಜಾನಾತಿ ಪುರುಷೋತ್ತಮಮ್ ॥
ಸ ಸರ್ವವಿದ್ಭಜತಿಮಾಂ ಸರ್ವಭಾವೇನ ಭಾರತ ॥15-19॥
ಇತಿ ಗುಹ್ಯತಮಂ ಶಾಸ್ತ್ರಮಿದಮುಕ್ತಂಮಯಾನಘ ॥
ಏತದ್ಬುಧ್ವಾ ಬುದ್ಧಿಮಾನ್‌ಸ್ಯಾತ್‌ಕೃತ ಕೃತ್ಯಸ್ಯಭಾರತ ॥15-20॥

ಯಾವನು ನನ್ನನ್ನು ಅಜ್ಞಾನರಹಿತನಾಗಿ ಸರ್ವಾಂತರ್ಯಾಮಿತ್ವೇನ ಮತ್ತು ಪುರುಷೋತ್ತಮತ್ವೇನ ತಿಳಿಯುವನೋ ಮತ್ತು ಸೇವಿಸುವನೋ ಅವನೇ ಸಮಸ್ತವನ್ನು ತಿಳಿದವನು. ಇದುವರೆಗೆ ವರ್ಣಿಸಿದ ಈ ಪುರುಷೋತ್ತಮ ಯೋಗವೆಂಬ ಉತ್ತಮವಾದ ರಹಸ್ಯ ಯೋಗವನ್ನು ತಿಳಿದು, ಶ್ರವಣ, ಮನನ, ನಿದಿಧ್ಯಾಸನ ದ್ವಾರಾ ಅಪರೋಕ್ಷ ಹೊಂದಿ ಮುಕ್ತನಾಗುವನು.

12. ತಾನಹಂ ದ್ವಿಷತಃ ಕ್ರೂರಾನ್ ಸಂಸಾರೇಷು ನರಾಧಮಾನ್ ॥
ಕ್ಷಿಪಾಮ್ಯಜಸ್ರಮಶುಭಾನಾಸುರೀಷ್ವೇವಯೋನಿಷು ॥16-19॥
ಆಸುರೀಯೋನಿಮಾಪನ್ನಾ ಮೂಢಾ ಜನ್ಮನಿ ಜನ್ಮನಿ ॥
ಮಾಮಪ್ರಾಪ್ಯೈವ ಕೌಂತೇಯ ತತೋಯಾಂತ್ಯಧಮಾಂಗತಿಂ ॥16-20॥
ತ್ರಿವಿಧಂ ನರಕಸ್ಯೇದಂ ದ್ವಾರಂ ನಾಶನ ಮಾತ್ಮನಃ ॥
ಕಾಮ ಕ್ರೋಧ ಸ್ತಥಾಲೋಭಸ್ತಸ್ಮಾದೇತತ್ರಯಂ ತ್ಯಜೇತ್ ॥16-21॥
ಏತೈರ್ವಿಮುಕ್ತಃಕೌಂತೇಯ ತಮೋದ್ವಾರೈಸ್ತ್ರಿಭಿರ್ನರಃ ।
ಆಚರತ್ಯಾತ್ಮನಃ ಶ್ರೇಯಸ್ತತೋ ಯಾತಿ ಪರಾಂಗತಿಮ್ ॥16-22॥
ಯಃ ಶಾಸ್ತ್ರವಿಧಿಮುತ್ಸೃಜ್ಯ ವರ್ತತೇ ಕಾಮಕಾರತಃ ॥
ನಸಸಿದ್ಧಿಮವಾಪ್ನೋತಿ ನಸುಖಂ ನ ಪರಾಂಗತಿಮ್ ॥16.23॥
ತಸ್ಮಾಚ್ಛಾಸ್ತ್ರಂ ಪ್ರಮಾಣಂತೇ ಕಾರ್ಯಾಕಾರ್ಯವ್ಯವಸ್ಥಿತೌ ॥
ಜ್ಞಾತ್ವಾಶಾಸ್ತ್ರ ವಿಧಾನೋಕ್ತಂ ಕರ್ಮಕರ್ತುಮಿಹಾರ್ಹಸಿ ॥16-24॥

ತನ್ನನ್ನು ದೂಷಿಸುವ ಮತ್ತು ತನ್ನಿಂದ ವಿಮುಖರಾದ ಅಸುರರ ಗತಿಯನ್ನು ಶ್ರೀಕೃಷ್ಣನು ಸ್ಪಷ್ಟೀಕರಿಸಿದ್ದಾನೆ. ಈ ದುರ್ಜನ ನಿಂದೆಯು ಸಜ್ಜನರಿಗೆ ಎಚ್ಚರಿಕೆಯ ಮಾತುಗಳು.

ಅಸುಷು – ಇಂದ್ರಿಯೇಷು, ರತಾಃ – ರಾಗಾದಿಯುಕ್ತಾಃ – ಅಸುರಾಃ ಎಂದು ಅರ್ಥಮಾಡಿದ್ದಾರೆ ಜ್ಞಾನಿಗಳು. ಅಂದರೆ ಕೇವಲ ಇಂದ್ರಿಯಗಳನ್ನು ತೃಪ್ತಿಗೊಳಿಸುವದರಲ್ಲಿಯೇ ನಿರತರು, ಎಂದರೆ ಅಸುರರು. ಭಗವದ್ವಿಷಯದಿಂದ ವಿಮುಖರು.

ಈ ಅಧ್ಯಾಯದಲ್ಲಿ ಅಸುರ ಸ್ವಭಾವದವರನ್ನು ವರ್ಣಿಸಿ, ಅಂಥಕ್ರೂರರೂ, ಅಸುರಸ್ವಭಾವದವರೂ ಆದ ಅಸುರಸ್ವಭಾವದವರನ್ನು ಪುನಃ ಪುನಃ ಪಾಪಜನಕವಾದ ಅಸುರಯೋನಿಗಳಲ್ಲಿ ಹಾಕುವೆನು. ಅಂಥಾ

ಅಸುರ ಯೋನಿಪ್ರಾಪ್ತರಾದವರು ದುಷ್ಕರ್ಮಯುಕ್ತರೇ ಆಗಿ, ಜ್ಞಾನಾಂಧರಾಗಿ ನನ್ನ ವಿಷಯದಲ್ಲಿ ಅಸಮೀಚೀನ ಜ್ಞಾನ ಉಳ್ಳವರಾಗಿ ನಿತ್ಯನರಕ ರೂಪಗತಿಯನ್ನು ಹೊಂದುವರು.

ಮೊದಲು ಪುರುಷಾರ್ಥವಿರೋಧಿಗಳಾದ ದಂಭಾದಿಗಳಲ್ಲಿ ಪ್ರಧಾನವಾದುದನ್ನು ನಿರೂಪಿಸಿ ಪ್ರಕೃತ ಕಾಮ ಕ್ರೋಧ ಲೋಭಾದಿಗಳನ್ನು ಪುಮರ್ಥವಿರೋಧಿಗಳಾದ್ದರಿಂದ ತ್ಯಜಿಸಬೇಕೆಂದು ಎಚ್ಚರಿಕೆ ನೀಡಿದ್ದಾನೆ. ಕಾಮಾದಿಗಳನ್ನು ಬಿಡುವದು ಕೇವಲ ನರಕಾದಿ ಅಪ್ರಾಪ್ತಿ ಸಾಧನಮಾತ್ರವಲ್ಲ ಪುರುಷಾರ್ಥಸಾಧನವೂ ಆಗಿದೆ. ಕಾಮಾದಿ ವರ್ಜನಾದಿಗಳಿಂದ ಶ್ರೇಯಸ್ಸಾಧಕನು ತೀವ್ರಗತಿಯಲ್ಲಿ ಮುಂದುವರೆಯುವನು.

ಶ್ರೇಯಃ ಸಾಧನಕ್ಕೆ ಕೇವಲ ಕಾಮಾದಿ ವರ್ಜನೆಯು ಸಾಲದು, ಶಾಸ್ತ್ರ ವಿಧಿಯಂತೆ ಅವಶ್ಯವಾಗಿ ನಿಯತ ಆಚರಣೆ ಯುಕ್ತನಾಗಿರಬೇಕು. ಯಾರು ಶಾಸ್ತ್ರವನ್ನು ತ್ಯಜಿಸಿ ಕೇವಲ ಮನಬಂದ ರೀತಿಯಲ್ಲಿ ಆಚರಸುವರೋ ಅದು ಕೇವಲ ಧರ್ಮವಾಗದೇ ಯಾವ ಪುರುಷಾರ್ಥಗಳೂ ದೊರೆಯಲಿಕ್ಕಿಲ್ಲ. ಯಾವದು ಕಾರ್ಯ ಯಾವದು ಅಕಾರ್ಯ ಎಂಬುವದಕ್ಕೆ ಶಾಸ್ತ್ರಗಳೇ ಪ್ರಮಾಣಗಳು. ಮನುಷ್ಯ ಬುದ್ಧಿಗೆ ಧರ್ಮಾಧರ್ಮ ವಿಷಯಗಳು ನಿಲುಕಲಾರವು. ಆದ್ದರಿಂದಲೇ ಶಾಸ್ತ್ರಗಳಿರುವದು. ಶಾಸ್ತ್ರೋಲ್ಲಂಘನೆ ಮಾಡಿದರೆ ದೋಷವೇ. ಆದ್ದರಿಂದ ಶಾಸ್ತ್ರೋಕ್ತ ರೀತಿಯಲ್ಲಿಯೇ ಆಚರಿಸಬೇಕು. ಅದೇ ಪುಮರ್ಥ ಸಾಧಕವು.

13. ಸ್ವೇಸ್ವೇ ಕರ್ಮಣ್ಯಭಿರತಃ ಸಂಸಿದ್ಧಿಂಲಭತೇನರಃ ॥18-45॥
ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂವಿಂದತಿ ಮಾನವಃ ॥18-46॥
ಶ್ರೇಯಾನ್ ಸ್ವಧರ್ಮೋ ವಿಗುಣಃ ಪರಧರ್ಮಾತ್ಸ್ವನುಷ್ಠಿತಾತ್ ॥
ಸ್ವಭಾವ ನಿತಯಂಕರ್ಮ ಕುರ್ವನ್ನಾಪ್ನೋತಿ ಕಿಲ್ಬಿಷಂ ॥18-47॥

ಮಾನವನು ತನಗೆ ವಿಹಿತವಾದ ವರ್ಣಾಶ್ರಮ . ಧರ್ಮಗಳ ಪರಿಪಾಲನೆಯಿಂದ ಅಂದರೆ ತದ್ಧರ್ಮೋಕ್ತ ಪರಮಾತ್ಮ ಪೂಜಾ – ಸ್ಮರಣಾದಿ ಸಾಧನಗಳಿಂದ ಮೋಕ್ಷವನ್ನು ಹೊಂದುತ್ತಾನೆ.

ಅಸುರ ಯೋನಿಪ್ರಾಪ್ತರಾದವರು ದುಷ್ಕರ್ಮಯುಕ್ತರೇ ಆಗಿ, ಜ್ಞಾನಾಂಧರಾಗಿ ನನ್ನ ವಿಷಯದಲ್ಲಿ ಅಸಮೀಚೀನ ಜ್ಞಾನ ಉಳ್ಳವರಾಗಿ ನಿತ್ಯನರಕ ರೂಪಗತಿಯನ್ನು ಹೊಂದುವರು.

ಮೊದಲು ಪುರುಷಾರ್ಥವಿರೋಧಿಗಳಾದ ದಂಭಾದಿಗಳಲ್ಲಿ ಪ್ರಧಾನವಾದುದನ್ನು ನಿರೂಪಿಸಿ ಪ್ರಕೃತ ಕಾಮ ಕ್ರೋಧ ಲೋಭಾದಿಗಳನ್ನು ಪುಮರ್ಥವಿರೋಧಿಗಳಾದ್ದರಿಂದ ತ್ಯಜಿಸಬೇಕೆಂದು ಎಚ್ಚರಿಕೆ ನೀಡಿದ್ದಾನೆ. ಕಾಮಾದಿಗಳನ್ನು ಬಿಡುವದು ಕೇವಲ ನರಕಾದಿ ಅಪ್ರಾಪ್ತಿ ಸಾಧನಮಾತ್ರವಲ್ಲ ಪುರುಷಾರ್ಥಸಾಧನವೂ ಆಗಿದೆ. ಕಾಮಾದಿ ವರ್ಜನಾದಿಗಳಿಂದ ಶ್ರೇಯಸ್ಸಾಧಕನು ತೀವ್ರಗತಿಯಲ್ಲಿ ಮುಂದುವರೆಯುವನು.

ಶ್ರೇಯಃ ಸಾಧನಕ್ಕೆ ಕೇವಲ ಕಾಮಾದಿ ವರ್ಜನೆಯು ಸಾಲದು, ಶಾಸ್ತ್ರ ವಿಧಿಯಂತೆ ಅವಶ್ಯವಾಗಿ ನಿಯತ ಆಚರಣೆ ಯುಕ್ತನಾಗಿರಬೇಕು. ಯಾರು ಶಾಸ್ತ್ರವನ್ನು ತ್ಯಜಿಸಿ ಕೇವಲ ಮನಬಂದ ರೀತಿಯಲ್ಲಿ ಆಚರಸುವರೋ ಅದು ಕೇವಲ ಧರ್ಮವಾಗದೇ ಯಾವ ಪುರುಷಾರ್ಥಗಳೂ ದೊರೆಯಲಿಕ್ಕಿಲ್ಲ. ಯಾವದು ಕಾರ್ಯ ಯಾವದು ಅಕಾರ್ಯ ಎಂಬುವದಕ್ಕೆ ಶಾಸ್ತ್ರಗಳೇ ಪ್ರಮಾಣಗಳು. ಮನುಷ್ಯ ಬುದ್ಧಿಗೆ ಧರ್ಮಾಧರ್ಮ ವಿಷಯಗಳು ನಿಲುಕಲಾರವು. ಆದ್ದರಿಂದಲೇ ಶಾಸ್ತ್ರಗಳಿರುವದು. ಶಾಸ್ತ್ರೋಲ್ಲಂಘನೆ ಮಾಡಿದರೆ ದೋಷವೇ. ಆದ್ದರಿಂದ ಶಾಸ್ತ್ರೋಕ್ತ ರೀತಿಯಲ್ಲಿಯೇ ಆಚರಿಸಬೇಕು. ಅದೇ ಪುಮರ್ಥ ಸಾಧಕವು.

13. ಸ್ವೇಸ್ವೇ ಕರ್ಮಣ್ಯಭಿರತಃ ಸಂಸಿದ್ಧಿಂಲಭತೇನರಃ ॥18-45॥
ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂವಿಂದತಿ ಮಾನವಃ ॥18-46॥
ಶ್ರೇಯಾನ್ ಸ್ವಧರ್ಮೋ ವಿಗುಣಃ ಪರಧರ್ಮಾತ್ಸ್ವನುಷ್ಠಿತಾತ್ ॥
ಸ್ವಭಾವ ನಿತಯಂಕರ್ಮ ಕುರ್ವನ್ನಾಪ್ನೋತಿ ಕಿಲ್ಬಿಷಂ ॥18-47॥

ಮಾನವನು ತನಗೆ ವಿಹಿತವಾದ ವರ್ಣಾಶ್ರಮ . ಧರ್ಮಗಳ ಪರಿಪಾಲನೆಯಿಂದ ಅಂದರೆ ತದ್ಧರ್ಮೋಕ್ತ ಪರಮಾತ್ಮ ಪೂಜಾ – ಸ್ಮರಣಾದಿ ಸಾಧನಗಳಿಂದ ಮೋಕ್ಷವನ್ನು ಹೊಂದುತ್ತಾನೆ.

ಆದುದರಿಂದ ತಮ್ಮ ತಮ್ಮ ವರ್ಣಾಶ್ರಮೋಚಿತ ಧರ್ಮಕರ್ಮಗಳನ್ನಾಚರಿಸುವದು ಲೋಪದೋಷಯುಕ್ತವಾದರೂ ಸರಿಯೇ ವಿಹಿತ ಸ್ವಧರ್ಮವನ್ನು ಬಿಡಕೂಡದು. ಸ್ವಧರ್ಮಗಳನ್ನು ಬಿಟ್ಟು ಪರಧರ್ಮಗಳನ್ನು ಎಷ್ಟೇ ಪರಿಪೂರ್ಣತೆಯಿಂದ ಆಚರಿಸಿದರೂ ಶ್ರೇಯಸ್ ಸಿಗಲಾರದು. ತಮ್ಮ ಸಹಜ ಸ್ವಭಾವಕರ್ಮಗಳ ಆಚರಣೆಯಲ್ಲಿ ಲೇಶದೋಷಯುಕ್ತವಾದರೂ ಪಾಪಘಟನೆ ಆಗುವದಿಲ್ಲ. ಶ್ರೇಯಸ್ಸಾಧನವೇ ಆಗುವದು. ಆದ್ದರಿಂದ ಸ್ವಧರ್ಮಾಚರಣೆಯೇ ಉತ್ತಮ ಪಕ್ಷವೆಂದು ಶ್ರೀಕೃಷ್ಣನ ಬೋಧೆ.

**14.** ಮನ್ಮನಾಭವ ಮದ್ಭಕ್ತೋ ಮದ್ಯಾಜೀಮಾಂ ನಮಸ್ಕುರು ॥
ಮಾಮೇವೈಷ್ಯಸಿ ಸತ್ಯಂತೇ ಪ್ರತಿಜಾನೇ ಪ್ರಿಯೋಽಸಿ ಮೇ ॥18-65॥
ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ ॥
ಅಹಂ ತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾಶುಚ ॥18-66॥

ಈ ಮೊದಲು ನಿರೂಪಿಸಿದ ಅನೇಕ ಕಾರಣಗಳಿಂದ ನೀನು ನನ್ನಲ್ಲಿ ಮನಸ್ಸನ್ನಿಡು. ನನ್ನ ಭಕ್ತನಾಗು, ನನ್ನ ಉದ್ದೇಶ್ಯವಾಗಿ ಪ್ರೀತಿಗಾಗಿ ಯಜನಾದಿಗಳನ್ನಾಚರಿಸು, ನನಗೆ ವಂದಿಸು. ಇಂಥ ಶ್ರೇಷ್ಠಸಾಧನಗಳಿಂದ, ನಾನು ಪ್ರತಿಜ್ಞಾಪೂರ್ವಕ ಹೇಳುತ್ತೇನೆ, ನೀನು ನನ್ನನ್ನೇ ಹೊಂದುವಿ.

"ಸರ್ವಧರ್ಮಾನ್ ಪರಿತ್ಯಜ್ಯ..' ಎಂಬ ಶ್ಲೋಕದ ಪೂರ್ವಾರ್ಧವು ಗೀತಾಶಾಸ್ತ್ರಕ್ಕೆ "ಶಕ್ತಿ" ಎನಿಸಿಕೊಳ್ಳುತ್ತದೆ. ಮನ್ಮನಸ್ಕತ್ವವನ್ನು ನಿಶ್ಚಿತವಾಣಿಯಲ್ಲಿ ನಿರೂಪಿಸಿರುವನು. ಇತರ ಸರ್ವಧರ್ಮಗಳನ್ನೂ ಬಿಟ್ಟು (ಅವೈಷ್ಣವಧರ್ಮಗಳನ್ನು ಬಿಟ್ಟು), ಸರ್ವೋತ್ತಮತ್ವಜ್ಞಾನಪೂರ್ವಕ, ಆತ್ಮಾತ್ಮೀಯರುಗಳಿಗಿಂತಲೂ ಅಧಿಕ ಪ್ರೇಮದಿಂದ, ರಕ್ಷತೀತ್ಯೇವ ವಿಶ್ವಾಸದಿಂದ ನನ್ನನ್ನೇ ಶರಣು ಹೊಂದು.

"ಅಹಂತ್ವಾಸರ್ವಪಾಪೇಭ್ಯೋ"... ಎಂಬ ಉತ್ತರಾರ್ಧಭಾಗವು ಗೀತಾಶಾಸ್ತ್ರಕ್ಕೆ "ಕೀಲಕ"ವೆಂದು ಹೇಳಲ್ಪಟ್ಟಿದೆ. ಅದೊಂದು ಬೃಹತ್ ಆಶ್ವಾಸನೆ.

ನಾನು ನಿನ್ನನ್ನು, ಅನಾದಿ ಜನ್ಮಕೃತ ಸರ್ವಪಾಪಗಳಿಂದ ಮುಕ್ತನನ್ನಾಗಿ ಮಾಡಿ ಪ್ರಾರಬ್ಧಾವಸಾನದಲ್ಲಿ ಮುಕ್ತನನ್ನಾಗಿ ಮಾಡುವೆನು. ಸಂಸಾರ ಭಯ ವಿಷಯಕ ಶೋಕವನ್ನು ತೊರೆದುಬಿಡು.

ಮೇಲೆ ಉದಾಹರಿಸಿದ ಗೀತೆಯ ಅನೇಕ ಭಾಗಗಳಿಂದ ನಮಗೆ ತಿಳಿದುಬರುವುದೇನೆಂದರೆ ವಿಷ್ಣುಭಕ್ತರಿಗೆ, ವಿಷ್ಣುರೂಪಿಯಾದ ಶ್ರೀಕೃಷ್ಣನ ಮುಖದಿಂದ ಆಶ್ವಾಸನರೂಪವಾದ, ಭಯನಿವಾರಣರೂಪವಾದ, ಸಂದೇಹ ನಿವಾರಣ ರೂಪವಾದ, ಅಭಯರೂಪವಾದ, ಉಪದೇಶರೂಪವಾದ, ಧರ್ಮಾಧರ್ಮಗಳನ್ನು ಸ್ಪಷ್ಟಪಡಿಸತಕ್ಕ, ಪ್ರಿಯಾಪ್ರಿಯಗಳನ್ನು ನಿರ್ದೇಶಿಸಿದ, ಕ್ಷಮಾಧರ್ಮಯುಕ್ತವಾದ, ತಾನು ಸುಲಭಪೂಜೆಗೆ ಒಲಿಯುವೆನೆಂದು ಹೇಳಲ್ಪಟ್ಟ, ಭಕ್ತರಿಗೆ ಜ್ಞಾನ ಭಕ್ತಿ ವೈರಾಗ್ಯ ಸಕಲಸಾಧನ ಸೌಕರ್ಯಗಳನ್ನು ಒದಗಿಸತಕ್ಕ, ಬಹುಜನ್ಮಗಳ ಸಾಧನಾನಂತರದಲ್ಲಿ ಅಪರೋಕ್ಷಜ್ಞಾನಕೊಡತಕ್ಕ, ಭಕ್ತಾನುಕಂಪ ಸಹಿತ, ವೈಷಮ್ಯನೈ ಘುಣ್ಯರಹಿತ, ಭಕ್ತರಿಗೆ ತನ್ನ ಪ್ರಸಾದದ್ವಾರಾ ಮೋಕ್ಷ ಕೊಡುವನೆಂಬ ಅನೇಕ ಆಶ್ವಾಸನ ವಚನಗಳು ಭಕ್ತಸಾಮಾನ್ಯರಿಗೆ ಜೀವನದ ಯಾವ ಸಮಯದಲ್ಲಿ ಸಾಧನಾದಿಗಳನ್ನು ಪ್ರಾರಂಭ ಮಾಡಿದರೂ ಸರಿಯೇ. ಆಶಾಕಿರಣಗಳು ಪ್ರಸರಿಸಿ ನಮ್ಮ ಕಡೆಗೆ ಧಾವಿಸಿ ಬರುವದನ್ನು ಕಾಣುತ್ತೇವೆ.

ಇಂಥ ಮಹಾಕಾರುಣಿಕನಾದ ಶ್ರೀಕೃಷ್ಣಪರಮಾತ್ಮನಿಗೆ ಅನಂತಾನಂತ ವಂದನೆಗಳನ್ನು ಅರ್ಪಿಸುತ್ತಾ ಈ ಲೇಖನ ಭಾಗವನ್ನು ಸಹ ಅವನ ಚರಣಕಮಲಗಳಲ್ಲಿಯೇ ಸಮರ್ಪಿಸುವಾ.

---

# ಆಧ್ಯಾತ್ಮಿಕ ಆಶಾಕಿರಣಗಳು
# ಭಾಗ – ೩

ಈ ಶೀರ್ಷಿಕೆಯ ಲೇಖನದ ಪ್ರಥಮಭಾಗದಲ್ಲಿ, ಯಾರೊಬ್ಬ ಸಾಧಕನು ಜೀವನದಲ್ಲಿ ಬಹಳವಿಳಂಬವಾಗಿ, ಭಗವಂತನ ಅಸ್ತಿತ್ವದ ಬಗ್ಗೆ ಪ್ರಜ್ಞೆ ಮೂಡಿ, ಅವನ ಮಹತ್ವಾದಿಗಳನ್ನರಿತು, ಅವನನ್ನು ಸಾಕ್ಷಾತ್ಕರಿಸುವ ಉದ್ದೇಶ್ಯವಾಗಿ ಮೋಕ್ಷಾರ್ಥಿಯಾಗಿ ಸಾಧನಮಾಡಲು ಹೊರಟ ಸಾಧಕನಿಗೆ ದೇವ, ದೇವತೆಗಳು ಶಾಸ್ತ್ರಗಳು ಸಾಕಷ್ಟು ಪ್ರೋತ್ಸಾಹಿಸುತ್ತವೆ. ಇವನ ಪ್ರವೃತ್ತಿಯನ್ನು ಅನುಮೋದಿಸುತ್ತವೆ. ಇವನಲ್ಲಿ ನೈಜ ಶ್ರದ್ಧಾಸಕ್ತಿಗಳು ಇರಬೇಕು. ಆಗ ನೋಡಬೇಕು. ಈ ಮೇಲೆ ಹೇಳಿದ ಎಲ್ಲ ವಿಶ್ವಸನೀಯ ಆಕರಸ್ಥಾನಗಳಿಂದ ಸಾಕಷ್ಟು "ಆಧ್ಯಾತ್ಮಿಕ ಆಶಾಕಿರಣಗಳು" ಧಾರಾಳವಾಗಿ ಇವನ ಕಡೆಗೆ ಪ್ರಸರಿಸುತ್ತವೆ.

ಪ್ರಥಮ ಭಾಗದಲ್ಲಿ "ಶ್ರೀಕೃಷ್ಣಾಮೃತಮಹಾರ್ಣವ'ದಿಂದ ಎರಡನೆಯ ಭಾಗದಲ್ಲಿ "ಶ್ರೀಮದ್ಭಗವದ್ಗೀತೆ', "ಗೀತಾಭಾಷ್ಯ", "ಗೀತಾತಾತ್ಪರ್ಯ"ಗಳಿಂದ ಹೊರಹೊಮ್ಮಿದ ಆಶಾಕಿರಣಗಳಿಂದ ಉತ್ಸಾಹ ಹೊಂದಿದೆವು.

ಪ್ರಕೃತ ಈ ಲೇಖನದ ಮೂರನೆಯ ಭಾಗದಲ್ಲಿ ಪುರಾಣದೀಪವೆನಿಸಿದ "ಶ್ರೀಮದ್ಭಾಗವತ "ದಿಂದಲೂ ಮತ್ತು ಶ್ರೀಮದಾನಂದ ತೀರ್ಥರ "ಶ್ರೀಮದ್ಭಾಗತ ತಾತ್ಪರ್ಯನಿರ್ಣಯ" ದಿಂದಲೂ ನಮ್ಮಂಥ ಪಾಮರರ ಕಡೆಗೆ ಮೂಡಿಬರುವ ಆಧ್ಯಾತ್ಮಿಕ ಆಶಾಕಿರಣಗಳನ್ನು ಸ್ವಾಗತಿಸುವಾ.

ಶ್ರೀವೇದವ್ಯಾಸರು ವೇದವಿಭಾಗವನ್ನು ಮಾಡಿದರು, ಬ್ರಹ್ಮಸೂತ್ರಗಳನ್ನು ರಚಿಸಿದರು, ಭಾರತಾದಿ ಅನೇಕ ಇತಿಹಾದ ಪುರಾಣ, ಉಪಪುರಾಣಗಳನ್ನು ಮತ್ತು ಸ್ಮೃತಿಗಳನ್ನೂ ರಚಿಸಿದರು. ಆದರೂ ಅವರ ಮನಸ್ಸಿನಲ್ಲಿ ಏನೋ ಕೊರತೆ; ತಾವು ಮಾಡತಕ್ಕ ಕಾರ್ಯಪೂರ್ಣವಾಗದ

ಒಂದು ಚಿಂತೆ ಇತ್ತೆಂದು, ನಾರದಮಹರ್ಷಿಗಳು ಅವರ ದರ್ಶನ ಪಡೆದಾಗ ಈ ಸ್ಥಿತಿಯನ್ನು ಗುರುತಿಸಿದರಂತೆ. ನಾರದ ಮಹರ್ಷಿಗಳು ಸೂಚಿಸುತ್ತಾರೆ, ತಾವು ಇದುವರೆಗೆ ರಚಿಸಿದ ಗ್ರಂಥಗಳಲ್ಲಿ ಕಥಾವರ್ಣನೆಗಳು ಇತ್ಯಾದಿಗಳು ತುಂಬಿವೆ. ಪರಮಹಂಸರಿಗೆ ಯೋಗ್ಯವಾದ, ತತ್ವಪ್ರಾಧಾನ್ಯ ಕಥನರೂಪ ಒಂದು ಪುರಾಣವನ್ನು ರಚಿಸಿ ಈ ಕೊರತೆಯನ್ನು ಪೂರ್ತಿಮಾಡಬೇಕೆಂದರು. ಆ ಪ್ರಕಾರ ಶ್ರೀವೇದವ್ಯಾಸರು ಸರ್ವೋತ್ಕೃಷ್ಟವಾದ ಶ್ರೀಮದ್ಭಾಗವತವನ್ನು ರಚಿಸಿ ತೃಪ್ತಿ ಹೊಂದಿದರೆಂದು ಐತಿಹ್ಯವಿದೆ. ಉಳಿದ ಪುರಾಣಗಳಿಂದಾಗದ ಸಾಧನಾದಿ ಜ್ಞಾನವನ್ನು ಸಾಧಕನಿಗೆ ಒದಗಿಸುವ ಮಹಾನ್ ಗ್ರಂಥವಿದು. ಈ ಗ್ರಂಥದಲ್ಲಿ ಅನೇಕ ವೈಶಿಷ್ಟ್ಯಗಳಿವೆ.

1. ಮಹಾಭಾರತ ಯುದ್ಧದಲ್ಲಿ ಸಾಸಹ ಪಟ್ಟು, ಆಯಾಸಪಟ್ಟು ಮೃತಪಟ್ಟ ಮಹಾನ್ ಮಹಾನ್ ವ್ಯಕ್ತಿಗಳು ಕೇವಲ ವೀರಸ್ವರ್ಗಕ್ಕೆ ಮಾತ್ರ ಹೋದರು. ಆ ಯುದ್ಧದ ತರುವಾಯದಲ್ಲಿ ಜನಿಸಿದ ಪರೀಕ್ಷಿತ ರಾಜನು, ಶಾಪಗ್ರಸ್ತನಾದರೂ ಸಹ ಭಾಗವತ ಕಥಾ ಭಾಗವತರ ಕಥಾ, ಶ್ರೀಕೃಷ್ಣನ ಕಥಾಗಳನ್ನು, ಪ್ರಾಯೋಪ ವಿಷ್ಟನಾದಾಗ ಒಂದು ಸಪ್ತಾಹ ಶುಕಾಚಾರ್ಯರಿಂದ ಶ್ರವಣಮಾಡಿ ದುರ್ಲಭವಾದ ವೈಕುಂಠದ ಅಮುಕ್ತಸ್ಥಾನವನ್ನು ಮುಟ್ಟಿದನು. ಏನಾಶ್ಚರ್ಯವಿದು!

"ಸವ್ವೈಮಹಾಭಾಗವತಃ ಪರೀಕ್ಷಿದ್ಯೇನಾಪವರ್ಗಾಖ್ಯಮದಭ್ರಬುದ್ಧಿಃ ।
ಜ್ಞಾನೇನ ವೈಯಾಸಕಿಶಬ್ದಿತೇನ ಭೇಜೇ ಖಗೇಂದ್ರಧ್ವಜಪಾದ ಮೂಲಮ್।

"ಮೋಕ್ಷಾಖ್ಯ ಸಾಧನಾದಿ ಫಲಗಳಲ್ಲಿ ಸಂಪೂರ್ಣ ವಿಶ್ವಾಸ ಉಳ್ಳವನಾದ ಭಾಗವತೋತ್ತಮನಾದ ಪರೀಕ್ಷತ್‌ರಾಜನು, ಶುಕಾಚಾರ್ಯರು ಶ್ರವಣ ಮಾಡಿಸಿದ ಸರ್ವೋತ್ಕೃಷ್ಟ ಭಾಗವತ ಜ್ಞಾನದಿಂದ, ವಿಷ್ಣು ಪಾದಮೂಲವನ್ನು – ವೈಕುಂಠವನ್ನು ಹೊಂದಿದನು." ಎಂಥ ಆಶ್ಚರ್ಯಕರವಾಗಿದೆ ಈ ಭಾಗವತ ಮಹಿಮೆ..!

2. "ರಾಜಂತೇ ಯಾವದನ್ಯಾನಿ ಪುರಾಣಾನಿ ಸತಾಂಗಣೇ ।
ಯಾವನ್ನದೃಶ್ಯತೇ ಸಾಕ್ಷಾತ್ ಶ್ರೀಮದ್ಭಾಗವತಂ ಪರಂ"॥

"ಶ್ರೀಮದ್ಭಾಗವತ ದೃಷ್ಟಿ ಗೋಚರವಾಗುವವರೆಗೆ ಇತರ ಪುರಾಣಗಳು ಪ್ರಕಾಶಿಸುತ್ತವೆ. " ಎಂದು ಬಾದರಾಯಣರೇ ಹೇಳಿದ್ದಾರೆ.

3. ಭಾಗವತವು ಭಕ್ತಿಪ್ರಧಾನ ಗ್ರಂಥ. ಶ್ರೀಹರಿಯು ಎಷ್ಟು ಸುಲಭವಾಗಿ ಪ್ರೀತನಾಗುತ್ತಾನೆ ಎಂಬ ವರ್ಣನೆ ಬಹಳ ಆಶಾದಾಯಕವೂ ಮತ್ತು ಮನನೀಯವೂ ಆಗಿದೆ.

"ಶ್ಲೋಕಂ ವಾ ಶ್ಲೋಕಪಾದಂ ವಾ ನಿತ್ಯಂ ಭಾಗವತೋದ್ಭವಂ ।
ಪಠೇತ್ ಶೃಣೋತಿ ಯೋ ಭಕ್ತ್ಯಾ ತಸ್ಯಪ್ರೀತೋ ಹರೇಧ್ರುವಂ"॥

"ಪ್ರತಿನಿತ್ಯಶ್ರೀಮದ್ಭಾಗವತದ ಒಂದು ಶ್ಲೋಕವನ್ನಾಗಲಿ, ಶ್ಲೋಕ ಪಾದವನ್ನಾಗಲಿ, ಭಕ್ತಿಯಿಂದ ಪಠಿಸಿದರೆ ಅಥವಾ ಶ್ರವಣಮಾಡಿದರೆ ಶ್ರೀಹರಿಯು ನಿಶ್ಚಯವಾಗಿಯೂ ಪ್ರೀತನಾಗುತ್ತಾನೆ."

5. ಇತ್ತೀಚೆಗೆ ನವೀನ ಎಲೆಕ್ಟ್ರಾನಿಕ್ ಉಪಕರಣಗಳು ಬಂದಮೇಲೆ (Two in one, three in one) ಒಂದರಲ್ಲಿ ಎರಡು, ಒಂದರಲ್ಲಿ ಮೂರು ಹೀಗೆ ವ್ಯವಹರಿಸುವದುಂಟು. ಆದರೆ "ಶ್ರೀಮದ್ಭಾಗವತತಾತ್ಪರ್ಯ ನಿರ್ಣಯ"ಕಾರರು ಹೇಳುತ್ತಾರೆ. ಶ್ರೀಮದ್ಭಾಗವತವು (Four in one) ಒಂದರಲ್ಲಿ ನಾಲ್ಕು. ಈ ಕೆಳಗಿನ ಶ್ಲೋಕವು ಈ ಮಾತನ್ನು ಸ್ಪಷ್ಟಪಡಿಸುತ್ತದೆ.

"ಅರ್ಥೋಽಯಂ ಬ್ರಹ್ಮಸೂತ್ರಾಣಾಂ ಭಾರತಾರ್ಥ ವಿನಿರ್ಣಯಃ ।
ಗಾಯತ್ರೀಭಾಷ್ಯರೂಪೋಽಸೌ ವೇದಾರ್ಥಪ್ರತಿಬೃಂಹಿತಃ ॥ ಭಾ.ತಾ.ನಿ॥

ಶ್ರೀಮದ್ಭಾಗವತವು

(i) ಬ್ರಹ್ಮಸೂತ್ರದ ಅರ್ಥವು (ii) ಭಾರತದ ಅರ್ಥವನ್ನು ನಿರ್ಣಯಿಸುವದು (iii) ಗಾಯತ್ರೀ ಮಂತ್ರದ ಭಾಷ್ಯ, (iv) ವೇದಾರ್ಥಗಳನ್ನು ಪ್ರತಿಪಾದಿಸುತ್ತದೆ. ಹೀಗೆ ನಾಲ್ಕು ಶಾಸ್ತ್ರಗಳು ಒಂದರಲ್ಲಿ ಅಡಕವಾಗಿವೆ.

6. ಧರ್ಮಃಪ್ರೋಜ್ಝಿತ ಕೈತವೋತ್ರ ಪರಮೋನಿರ್ಮತ್ಸರಾಣಾಂ ಸತಾಂ ।
ವೇದ್ಯಂ ವಾಸ್ತವಮತ್ರ ವಸ್ತುಶಿವದಂ ತಾಪತ್ರಯೋನ್ಮೂಲನಂ ॥
ಶ್ರೀಮದ್ಭಾಗವತೇ ಮಹಾಮುನಿಕೃತೇ ಕಿಂವಾಪರೈರೀಶ್ವರಃ ।
ಸದ್ಯೋಹೃದ್ಯವರುದ್ಧ್ಯತೇಽತ್ರ ಕೃತಿಭಿಃಶುಶ್ರೂಷುಭಿಃತತ್ಕ್ಷಣಾತ್ ॥

ಶ್ರೀಮದ್ಭಾಗವತದ ನಿರಂತರ ಶ್ರವಣಮನನಾದಿಗಳಿಂದ ಶ್ರೀಹರಿಯು ಅಧಿಕಾರಿಯ ಹೃತ್ಕಮಲದಲ್ಲಿ ತೋರುತ್ತಾನೆ ಎಂಬ ಮಹತ್ ಆಶ್ವಾಸನ ನೀಡುತ್ತದೆ ಈ ಭಾಗವತ.

ಭಾಗವತವೇನೋ ಮಹತ್‌ಗೌರವಸ್ಥಾನ ಪಡೆದ ಮನೋಜ್ಞವಾದ ಕುಟಿಲರಹಿತ, ತಾಪತ್ರಯ ದೂರಮಾಡತಕ್ಕ ಮಹಾಫಲಪ್ರದವಾದ ಗ್ರಂಥ. ನಮಗಿನ್ನುಳಿದಿರತಕ್ಕ ಕಿಂಚಿತ್ ವೇಳೆಯಲ್ಲಿ, ನಾವು ಹೇಗೆ ಏನು ಮಾಡಬೇಕೆಂಬುವದರ ವಿಚಾರಕ್ಕೆ ಭಾಗವತದ ಉಪದೇಶ ಆಶಾಕಿರಣಗಳೇನು ಎಂಬದನ್ನು ಈ ಲೇಖನದ ಅಂತ್ಯದವರೆಗೆ ಗಮನಿಸುತ್ತಾ ಹೋಗುವಾ.

ಶ್ರೀಮದ್ಭಾಗವತಕಾರರೆನ್ನುತ್ತಾರೆ ಮನುಷ್ಯಜನ್ಮ ಬಂದದ್ದೇ ಒಂದು ದೊಡ್ಡ ಲಾಭ. ಸಕಲದೇಹಿಗಳಲ್ಲಿ ಅದೇ ಶೋಭನಜನ್ಮ ಅದೂ ಭರತಖಂಡದಲ್ಲಿ.

"ಲಬ್ಧ್ವಾಸುದುರ್ಲಭಮಿದಂ ಬಹುಸಂಭವಾಂತೇ
ಮಾನುಷ್ಯಮರ್ಥದ ಮನಿತ್ಯ ಮಪೀಹಧೀರಃ ॥
ತೂರ್ಣಂ ಯತೇತ ನಪತೇದನುಮೃತ್ಯು
ಯಾವನ್ನಿಃಶ್ರೇಯಸಾಯ ವಿಷಯಃ ಖಲುಸರ್ವತಃಸ್ಯಾತ್ ॥

ಇತರ ದೇಹಗಳಲ್ಲಿ ಬಹುಜನ್ಮಗಳು ಕಳೆದ ನಂತರ ಸುದುರ್ಲಭವಾಗಿ ಬಂದ ಮಾನಷ ಜನ್ಮವಿದು. ಅನಿತ್ಯವಾದರೂ ಪುರುಷಾರ್ಥಗಳನ್ನು ಸಾಧಿಸಲು ಯೋಗ್ಯವಾದ ಜನ್ಮ. ಜನಿಸಿದವನಿಗೆ ಮೃತ್ಯುವು ಬೆನ್ನಹಿಂದೆಯೇ ಇರುತ್ತದೆ. ಎಷ್ಟು ಸಮೀಪ ಎಷ್ಟು ದೂರ ಎಂದು ಹೇಳಲು ಸಾಧ್ಯವೇ ಇಲ್ಲ. ಆದ್ದರಿಂದ ಶ್ರೇಯಸಾಧನಗಳನ್ನು 'ಕೌಮಾರಾವಸ್ಥೆಯಿಂದಲೂ ಮಾಡುತ್ತಲೇ ಇರಬೇಕು. "ಕೌಮಾರಮಾಚರೇತ್‌ಪ್ರಾಜ್ಞೋಧರ್ಮಾನ್ ಭಾಗವತಾನಿಹ" ॥

ದೇಹಪೋಷಣ, ಶ್ರಮಪರಿಹಾರ (ನಿದ್ರೆ) ಮತ್ತು ಸಂತಾನವೃದ್ಧಿ ಇವು ಎಲ್ಲ ದೇಹಗಳಲ್ಲಿ ಆಗುತ್ತಿರುತ್ತವೆ. ಆದರೆ ಮನಷ್ಯದೇಹದಲ್ಲಿ ಮೋಕ್ಷ ಸಾಧನೆಯ ಸೌಕರ್ಯವಿದೆ. ದೇಹ ಪೋಷಣೆಗಾಗಲಿ ಮತ್ತು ಕೇವಲ

ಇಂದ್ರಿಯಸುಖಕ್ಕಾಗಿ ಆಗಲಿ ಸರ್ವಕಾಲವೂ ವ್ಯಯವಾದರೆ ಮನುಷ್ಯ ಜನ್ಮದಿಂದಾಗತಕ್ಕ ಮಹತ್ಪ್ರಯೋಜನ ಹೊಂದಿದಂತಾಗಲಿಲ್ಲ.

ನಮ್ಮ ಮನದಟ್ಟಾಗುವಂತೆ ಇನ್ನೊಂದು ವಿಶೇಷಾಂಶವನ್ನು ಹೇಳುತ್ತಾರೆ.

"ಅಹೋನೃಜನ್ಮ ಅಖಿಲಜನ್ಮಶೋಭನಂ ಕಿಂ ಜನ್ಮಭಿರಪರ್ರೈರಪ್ಯಮುಷ್ಮೆಃ ॥
ನಯದ್ಧೃಷೀಕೇಶ ಯಶಃಕೃತಾತ್ಮನಾಂ ಮಹಾತ್ಮನಾಂವಾ
ಪ್ರಚುರಸ್ಸಮಾಗಮಃ ॥

ಇತರ ಜನ್ಮಗಳಿಗಿಂತ ಮನುಷ್ಯ ಜನ್ಮವು ಅದೆಂಥ ಶೋಭನ ಜನ್ಮ! ಮನುಷ್ಯೇತರ ದೇಹಗಳನ್ನು ಧಾರಣ ಮಾಡಿದಾಗ ಅವಶ್ಯಕವಾದ ಎಲ್ಲ ಅವಯವಗಳಿದ್ದಾಗ್ಯೂ ಜ್ಞಾನದ ಮಟ್ಟ ತೀರ ಕಡಿಮೆ ಮತ್ತು ವಾಚನಿಕ ಶಕ್ತಿ ಇರುವದಿಲ್ಲ. ಭವಬಂಧನದಿಂದ ಬಿಡಿಸಿಕೊಳ್ಳತಕ್ಕ ಯಾವ ಉಪಾಯಗಳನ್ನೂ ಮಾಡಲಾಗುವದಿಲ್ಲ. ಅಲ್ಲಿ ಮಾಡಲಾಗದ ಎರಡು ಸಾಧನೆಗಳನ್ನು ಮನುಷ್ಯಜನ್ಮದಲ್ಲಿ ಸಾಧಿಸಲು ಶಕ್ಯವೆಂದು ಭಾಗವತಕಾರರ ಆಶಯ. (i) ಸರ್ವಾವಸ್ಥೆಯಲ್ಲಿಯೂ ಸಕಲೇಂದ್ರಿಯ ಪ್ರೇರಕನಾದ ಹೃಷೀಕೇಶನ ಯಶಸ್ಸನ್ನು ಬಾಯಿಂದ ಕೊಂಡಾಡುವದು, (ii) ಈ ಪರಮಾತ್ಮನ ಮಹಾತ್ಮ್ಯಜ್ಞಾನಕಥನಗಳನ್ನು ತಿಳಿಸಲಿಕ್ಕೆ ಕಾರಣೀಭೂತರಾದ ಮಹಾತ್ಮರ / ಜ್ಞಾನಿಗಳ ಸಮಾಗಮ / ಸಹವಾಸ / ಪರಿಚಯ / ಸೇವಾ / ಉಪದೇಶಾದಿಗಳನ್ನು ಪಡೆಯುವದು. ಈ ಎರಡು ಕಾರ್ಯಗಳು ಮಾನವ ಜನ್ಮದಲ್ಲಿ ಮಾತ್ರ ಸಾಧ್ಯ. ಈ ಜನ್ಮದಲ್ಲಿ ಇವೆರಡು ವಿಶೇಷ ಕಾರ್ಯಗಳಾಗದೇ ಇದ್ದರೆ, ಪಶ್ವಾದಿಜನ್ಮಗಳಿಗಿಂತಲೂ ಈ ಜನ್ಮ ಏನೂ ಹೆಚ್ಚಿಗೆ ಇಲ್ಲ. ಅರ್ಥಾತ್ ಮಾನವೇತರ ಪ್ರಾಣಿಗಳ ಸಮಕಕ್ಷವೇ.

ನಮಗೆ ಪರಮಾತ್ಮನು ಅತಿಶಯದಿಂದ ಕೊಟ್ಟ ಮನುಷ್ಯಜನ್ಮದ ವಿಷಯದಲ್ಲಿ ಉತ್ತೇಜನಕೊಟ್ಟು, ಈ ಮೇಲೆ ಹೇಳಿದ ಎರಡನ್ನು ಸಾಧಿಸಿ ಧನ್ಯತೆಯನ್ನು ಪಡೆಯಿರೆಂಬ ಆಶಾಆಕಿರಣಗಳನ್ನು ನಮ್ಮ ಮನದಲ್ಲಿ ಮೂಡಿಬರುವಂತೆ ಮಾಡುತ್ತದೆ ಶ್ರೀಮದ್ಭಾಗವತ.

ಇದು ಹೇಗೆ ಸಾಧ್ಯವಾದೀತು ಎಂಬ ಆಕಾಂಕ್ಷೆಗೆ ಉತ್ತರವೂ ಇದೇ ಗ್ರಂಥದಲ್ಲಿ ದೊರೆಯುತ್ತದೆ.

"ಶುಶ್ರೂಷೋಃ ಶ್ರದ್ಧದಾನಸ್ಯ ವಾಸುದೇವ ಕಥಾರತಿಃ ।
ಸ್ಯಾನ್ಮಹತ್ಸೇವಯಾ ವಿಪ್ರಾಃ ಪುಣ್ಯತೀರ್ಥ ನಿಷೇವಣಾತ್ ॥"

"ಹೇ ವಿಪ್ರರೇ, ಹರಿಕಥಾಶ್ರವಣದಲ್ಲಿ ಆಸಕ್ತಿಯು ಹೇಗೆ ಉದಯವಾಗುತ್ತದೆಂದರೆ – ಪರಮಾತ್ಮನ ಸ್ವರೂಪ ತಿಳಿಯುವ ಶ್ರದ್ಧಾಸಕ್ತಿಗಳಿಂದ ಮಾಡಿದ ಗಂಗಾದಿ ತೀರ್ಥಗಳ ಸೇವನೆ, ಗುರುಹಿರಿಯರ ಸೇವೆ, ಮಹಾತ್ಮರ ಸೇವೆ, ವಾಯುದೇವರ ಸೇವೆಯಿಂದಲೂ ವೇದಾದಿಗಳಲ್ಲಿ ಪ್ರಾಮಾಣ್ಯಬುದ್ಧಿಯೂ ಭಗವಂತನಲ್ಲಿ ಆಸ್ತಿಕ್ಯ ಬುದ್ಧಿಯೂ ಉಂಟಾಗುತ್ತವೆ."

ನಾವು ಮೊದಲೇ ಈ ಲೇಖನದ ಒಂದನೆಯ ಭಾಗದ ಪೀಠಿಕೆಯಲ್ಲಿ ತಿಳಿಸಿದಂತೆ, ಜೀವನದಲ್ಲಿ ಪರಮಾತ್ಮನ ಪ್ರಜ್ಞೆಯನ್ನು ಬಹಳ ವಿಳಂಬವಾಗಿ ತಿಳಿದೆವು. ಆದ್ದರಿಂದ ನಾವೂ ಭಗವಂತನ ಜ್ಞಾನ ಪ್ರಸಾದಗಳನ್ನು ಪಡೆಯಬಹುದೇ? ಎಂಬ ನಮ್ಮ ಕುತೂಹಲಕ್ಕೆ ಉತ್ತರವಾಗಿ ಭವಬಂಧ ನೀಗಿಸುವ ಮೋಕ್ಷಸಾಧಕ ಮಾರ್ಗಗಳನ್ನರಿಸುತ್ತ ಪ್ರಕೃತ ಶ್ರಿಮದ್ಭಾಗವತದಲ್ಲಿ ಅನುಕೂಲವಾಕ್ಯಗಳು/ಉಪದೇಶಗಳು/ ಆಶಾಕಿರಣ ಗಳನ್ನರಸುತ್ತಿದ್ದೇವೆ. "ಬಹುವಕ್ಯಸಂವಾದಾದೇವ ದಾರ್ಢ್ಯಹೇತೋಃ' (ವಿ.ತ.ನಿ) ಭಿನ್ನ ಭಿನ್ನ ಶಾಸ್ತ್ರಗ್ರಂಥಗಳಿಂದ ಸಮಾಖ್ಯಾವಾಕ್ಯಗಳು ದೊರಕಿದಷ್ಟೂ ನಮ್ಮ ಧ್ಯೇಯವು ಧೃಡೀಕರಣ ಹೊಂದುತ್ತದೆ. ಇರಲಿ ಮುಂದೆ ಸಾಗುವಾ.

ಪರೀಕ್ಷಿತ್ ರಾಜನು ಶಾಪಗ್ರಸ್ತನಾಗಿ ಗಂಗಾತೀರದಲ್ಲಿ ಪ್ರಾಯೋಪವೇಶಕ್ಕೆ ಕುಳಿತಾಗ ಅವನಿಗುಳಿದದ್ದು ಕೇವಲ ಏಳು ದಿನಗಳು ಮಾತ್ರ. ಬಹುಜನ ಋಷಿಮುನಿಗಳು ಆಗಮಿಸಿದ್ದಾರೆ ಆಸ್ಥಳಕ್ಕೆ. ಆಕಸ್ಮಿಕವಾಗಿ ಶುಕಾಚಾರ್ಯರೂ ಸಹ ಆಗಮಿಸಿದರು. ರಾಜನು ಅವರನ್ನು ಸ್ವಾಗತಿಸಿ, ಪೂಜಿಸಿ ಉಚಿತಾಸನದಲ್ಲಿ ವಿರಾಜಿಸಿದ ನಂತರ ಪ್ರಶ್ನೆ ಮಾಡುತ್ತಾನೆ.

"ಯಚ್ಛ್ರೋತವ್ಯಮಥೋಜಾಪ್ಯಂ ಯತ್ಕರ್ತವ್ಯಂ ನೃಭಿಃಸದಾ ।
ಸ್ಮರ್ತವ್ಯಂ ಭಜನೀಯಂ ವಾ ಬ್ರೂಹಿ ಯದ್ವಾ ವಿಪರ್ಯಯಂ"॥

ಪರೀಕ್ಷಿತ ರಾಜನು ಕೇಳುತ್ತಾನೆ. "ಹೇ ಮುನಿಗಳೇ, ಮರಣ ಸಮೀಪಿಸಿದ ಮನುಷ್ಯನು ಏನನ್ನು ಶ್ರವಣ ಮಾಡಬೇಕು, ಜಪಿಸಬೇಕಾದದ್ದೇನು, ಮಾಡಬೇಕಾದದ್ದೇನು, ಏನನ್ನು ಸ್ಮರಣೆ ಮಾಡಬೇಕು, ಭಜಿಸಬೇಕಾದದ್ದೇನು? ಅಷ್ಟೇ ಅಲ್ಲ ಯಾವದನ್ನು ಸ್ಮರಿಸಬಾರದು, ಮಾಡಬಾರದು ಮತ್ತು ಸೇವಿಸಬಾರದು ಅದನ್ನು ನಮಗೆ ಹೇಳಿರಿ."

ಪರೀಕ್ಷಿತರಾಜನಿಗೆ ಶೃಂಗಿಯ ಶಾಪಪ್ರಯುಕ್ತ ಏಳುದಿನಗಳು ಉಳಿದಿವೆಯೆಂದು ತಿಳಿದಿತ್ತು. ಅವನು ಎಷ್ಟೋವಾಸಿ. ನಾವು ಅವನಂತೆ ಶಾಪಗ್ರಸ್ಥರಲ್ಲದಿದ್ದರೂ ಪಾಪಗ್ರಸ್ಥರಲ್ಲವೆಂದು ಹೇಳಲು ಸಾಧ್ಯವೇ ಇಲ್ಲ. ನಾಳೆ ಇರುವೆವೆಂಬ ಭರವಸೆಯೂ ಇಲ್ಲ ಅಥವಾ ಪ್ರಯಾಣದ ಲಕ್ಷಣಗಳೂ ಕಂಡು ಬರುತ್ತಿಲ್ಲ. ಆದರೂ ನಮ್ಮ ವಿಷಯದಲ್ಲಿ ಹೇಳ ಬೇಕೆಂದರೆ ಗತಿಸಿದ ದಿನಗಳಷ್ಟು ಗತಿಸತಕ್ಕ ದಿನಗಳುಳಿದಿಲ್ಲವೆಂಬದು ಸತ್ಯ. ಆದ್ದರಿಂದ ಪರೀಕ್ಷಿತರಾಜನಿಗೆ ಶುಕಾಚಾರ್ಯರು ಮಾಡಿದ ಉಪದೇಶ ನಮಗೂ ಅನ್ವಯಿಸುವದರಲ್ಲಿ ಲೇಶ ಸಂದೇಹವೂ ತೋರುವದಿಲ್ಲ.

ಪರೀಕ್ಷಿತರಾಜನ ಪ್ರಶ್ನೆಗೆ ಶುಕಾಚಾರ್ಯರು ಉತ್ತರಿಸುತ್ತಾರೆ.

"ನಿದ್ರಯಾ ಹ್ರೀಯತೆ ನಕ್ತಂ ವ್ಯವಾಯೇನ ಸವಂವಯಃ ।
ದಿವಾಚಾರ್ಥೆಹ ಯಾರಾಜನ್ ಕುಟುಂಬ ಭರಣೇನ ವಾ ॥
ದೇಹಾಪತ್ಯಕಲತ್ರಾದಿಷ್ವಾತ್ಮದೈನ್ಯೇಷ್ವಸತ್ಸ್ವಪಿ ।
ತೇಷು ಪ್ರಸಕ್ತೋ ನಿಧನಂ ಪಶ್ಯನ್ನಪಿ ನಪಶ್ಯತಿ ॥
ತಸ್ಮಾತ್ ಭಾರತ ಸರ್ವಾತ್ಮಾ ಭಗವಾನ್ ಹರಿರೀಶ್ವರಃ ।
ಶ್ರೋತವ್ಯಃ ಕೀರ್ತಿತವ್ಯಶ್ಚ ಸ್ಮರ್ತವ್ಯಶ್ಚೇಚ್ಛತಾಽಭಯಂ॥
ಇದಂ ಭಾಗವತಂ ನಾಮ ಪುರಾಣಂ ಬ್ರಹ್ಮಸಂಹಿತಂ ।
ಅಧೀತವಾನ್ ದ್ವಾಪರಾದೌ ಪಿತುರ್ದ್ವೈಪಾಯನಾದಹಂ"॥

"ಹೇ ರಾಜನ್, ಯೌವನ ಕಾಲದಲ್ಲಿ ಸ್ತ್ರೀವಿಷಯಕವಾದ ಭೋಗಾದಿಗಳಲ್ಲಿ ರಾತ್ರಿಯು ಕಳೆದು ಹೋಗುತ್ತದೆ. ದಿನಸಮಯವು ಅನೇಕ ರೀತಿ ಹಣಸಂಪಾದನೆ ಕುಟುಂಬ ರಕ್ಷಣಾದಿಗಳಲ್ಲಿ ಕಳೆಯುತ್ತದೆ.

ಮತ್ತು ತನ್ನ ಶರೀರಸಂಬಂಧಿಕರಾದ ಮಕ್ಕಳು, ಹೆಂಡತಿ, ಬಂಧುಬಾಂಧವರು ಮೊದಲಾದ ವಿಷಯಗಳಲ್ಲಿ ಆಸಕ್ತನಾಗಿ ತನ್ನನ್ನು ದೀನನನ್ನಾಗಿ ಮಾಡಕೊಂಡು, ಅಮಂಗಳಕರವಾದ ವಿವಿಧ ಸಾಂಸಾರಿಕ ಕಾರ್ಯಕಾರ್ಯಗಳಲ್ಲಿ ತೊಡಗಿ, ಅವನಿಗೆ ತನ್ನ ಮುಂದಿನ ನಾಶವು ತಿಳಿದರೂ ತಿಳಿಯದವನಂತೆ ಇರುತ್ತಾನೆ. ಕೊನೆಗೂ ಪರಮಾತ್ಮನನ್ನು ತಿಳಿಯುವ ಯತ್ನವನ್ನೇ ಮಾಡುವದಿಲ್ಲ.

ಹೇ ರಾಜನೇ, ಶ್ರೀಮನ್ನಾರಾಯಣನ ವಿಷಯಕ ಶ್ರವಣಾದಿ ವಿನಾ ಅವನ ಜ್ಞಾನವಾಗುವದಿಲ್ಲ. ಜ್ಞಾನವಿಲ್ಲದೇ ಪ್ರಸಾದವಿಲ್ಲ. ಅತ್ಯರ್ಥ ಪ್ರಸಾದವಿಲ್ಲದೇ ಬಂಧನಾಶವಾಗಲಿ, ಮೋಕ್ಷವಾಗಲಿ ಆಗುವದಿಲ್ಲ ವಾದ್ದರಿಂದ ಷಡ್ಗುಣೈಶ್ವರ್ಯಸಂಪನ್ನನಾದ, ಸರ್ವರಲ್ಲಿಯೂ ವ್ಯಾಪ್ತನಾದ, ನಿಯಾಮಕನಾದ ಶ್ರೀಹರಿಯ ಮಾಹಾತ್ಮ್ಯೆಯನ್ನು ಶ್ರವಣ ಮಾಡಬೇಕು. ತಿಳಿದು ಕೀರ್ತನೆ ಮಾಡಬೇಕು. ಸ್ಮರಣೆ ಮಾಡಬೇಕು. ಯಾಕೆಂದರೆ ಅವನು ಸಕಲ ಅನಿಷ್ಟನಿವೃತ್ತಿ ಮಾಡಿ ಸಕಲ ಇಷ್ಟಾರ್ಥಗಳನ್ನು ಕೊಡುತ್ತಾನೆ. ಸಂಸಾರದಿಂದ ಭಯರಹಿತನ್ನಾಗಿ ಮಾಡುತ್ತಾನೆ.

ಈ ಜ್ಞಾನವು ಭಾಗವತವೆಂಬ ಪರಬ್ರಹ್ಮಪ್ರತಿಪಾದಕ ಗ್ರಂಥದಲ್ಲಿರತಕ್ಕ ವಿಷಯ. ಈ ಭಾಗವತವನ್ನು ನಾನು ದ್ವಾಪರದ ಪೂರ್ವಭಾಗದಲ್ಲಿ ಕೃಷ್ಣವತಾರದ ಮುನ್ನ (ದ್ವಾಪರೇ ಆದೌ) ನನ್ನ ತಂದೆಯವರಾದ ವೇದವ್ಯಾಸರಿಂದ ಅಧ್ಯಯನ ಮಾಡಿದೆನು. ನೀನು ಭಕ್ತರಲ್ಲಿ ಉತ್ತಮನಾದ್ದರಿಂದ ಅದನ್ನೇ ಈಗ ನಿನಗೆ, ಮಹಾಪುರುಷಾರ್ಥ ಪ್ರದವಾದ್ದರಿಂದ, ತಿಳಿಸುವೆನು."

ಅದನ್ನು ಯಾವ ರೀತಿ ತಿಳಿಯಬೇಕೆಂದರೆ –

"ಶ್ರುತ್ವಾ ಮತ್ವಾ ತಥಾ ಧ್ಯಾತ್ವಾ ತದಜ್ಞಾನ ವಿಪರ್ಯಯಃ ।
ಸಂಶಯಂಚ ಪರಾಣುದ್ಯ ಲಭತೇ ಬ್ರಹ್ಮದರ್ಶನಂ ॥

"ಭಗವದ್ವಿಷಯಕ ಭಾಗವತೋಕ್ತ ವಿಚಾರಗಳನ್ನು ಶ್ರವಣಮಾಡಿ, ಅದನ್ನು ಮನನಮಾಡಿಕೊಂಡು, ತತ್ವನಿಶ್ಚಯವಾದ ಮೇಲೆ ಧ್ಯಾನ ಮಾಡಿ, ಅಜ್ಞಾನ ವಿಪರೀತ ಜ್ಞಾನಗಳನ್ನು ದೂರಮಾಡಿ, ಸಂಶಯಾದಿಗಳನ್ನು

ನಿವಾರಣೆ ಮಾಡಿಕೊಂಡು ಚಿರಕಾಲ ಧ್ಯಾನ ಸ್ಮರಣಾದಿಗಳಿಂದ ಶ್ರೀಹರಿಯ ಸಾಕ್ಷಾತ್ಕಾರ ಹೊಂದಬೇಕು."

ಇದೇ ಎಲ್ಲಾ ಶಾಸ್ತ್ರಗಳಲ್ಲಿ ಹೇಳಿರುವ ಸಾರವಾದ ವಿಷಯ. ಕೊನೆಯಲ್ಲಿ ಶ್ರೀಮನ್ನಾರಾಯಣನ ಸ್ಮರಣೆ ತಪ್ಪದೇ ಬರುವಂತೆ ಬಹುಶಾಸ್ತ್ರಾಭ್ಯಾಸವನ್ನು ಮಾಡಬೆಕು.

ಸಾಂಖ್ಯವೆನಿಸುವ ತತ್ವಶಾಸ್ತ್ರದಿಂದ ಜ್ಞಾನವನ್ನು, ಯೋಗವೆನಿಸುವ ಭಗವತ್ಪೂಜಾಪ್ರತಿಪಾದಕ ಶಾಸ್ತ್ರದಿಂದ ಸಾಧನಾದಿಗಳನ್ನು ತಿಳಿದು ಸ್ವೋಚಿತ ವರ್ಣಾಶ್ರಮಧರ್ಮವನ್ನಾಚರಿಸಿ, ಅವಸಾನ ಕಾಲದಲ್ಲಿ ಶ್ರೀಮನ್ನಾರಾಯಣನ್ನು ಸ್ಮರಿಸುತ್ತ ದೇಹವನ್ನು ಬಿಡಬೇಕು. ಇದೇ ಜನ್ಮ ಸಾಫಲ್ಯವು. ಹೀಗೆಂದೇ ವೇದಾದಿ ಶಾಸ್ತ್ರಗಳು ಹೇಳುವವು.

ಶ್ರೀಮದ್ಭಾಗವತವನ್ನು ಶ್ರವಣಮಾಡಿದವರೆಲ್ಲ ಶ್ರಿಹರಿಯ ವಿವಿಧ ಆಕರ್ಷಕ ಲೀಲೆಗಳು, ಆನಂದಾದಿ – ಕಾರುಣ್ಯಾದಿ ಗುಣಗಳು, ಭಕ್ತರ ವಿಷಯದಲ್ಲಿ ಭಗವಂತನ ಅನುಕಂಪ, ತನ್ನವರನ್ನು ರಕ್ಷಣೆ ಮಾಡತಕ್ಕ ವಿವಿಧ ಪ್ರಕಾರಗಳು ಇವೆಲ್ಲದರಿಂದ ಮನಾಕರ್ಷವಾಗುವದು. ಈ ಗ್ರಂಥದಲ್ಲಿ ಶ್ರದ್ಧೆಯುಳ್ಳವರೆಲ್ಲರಿಗೂ ಕಾಲವಿಳಂಬವಿಲ್ಲದೇ ಶ್ರೀಹರಿಯಲ್ಲಿ ಶುದ್ಧವಾದ ಭಕ್ತಿ ಉಂಟಾಗುವದು, ಸಂಸಾರದಲ್ಲಿ ಕ್ಲೇಶಗಳನ್ನು ಕಂಡು ವಿರಕ್ತರಾಗಿ ಮೋಕ್ಷ ಹೊಂದಬೇಕೆಂಬ ಯೋಗಿಗಳೂ ಶ್ರೀಹರಿಯನಾಮ ಕೀರ್ತನೆಯನ್ನು ಮಾಡುತ್ತಲೇ ಇರುವರು. ಆದ್ದರಿಂದ ಈ ನಾಮಸ್ಮರಣೆಯೇ ಅಂತ್ಯಕಾಲದಲ್ಲಿ ಶ್ರೀಹರಿಯ ಸ್ಮರಣೆಯನ್ನು ತಂದುಕೊಡಲು ಕಾರಣವಾಗುವದು. ವಿಷಯಾಸಕ್ತರಾದವರಿಗೆ ಎಷ್ಟು ದೀರ್ಘ ಆಯಸ್ಸಿದ್ದರೇನು? ಶ್ರೀಹರಿಯ ಸ್ಮರಣೆ ಪೂರ್ವಕವಾಗಿ ಶ್ರೇಯಸ್ಸಾಧನವೆನಿಸಿದ ಒಂದು ಮುಹೂರ್ತವೇ ಅದಕ್ಕಿಂತ ಶ್ರೇಷ್ಠವಾದುದು.

ಇದೆಲ್ಲವನ್ನೂ ಒಂದು ಸಲ ವಿಹಂಗಮ ವೀಕ್ಷಣೆಯಿಂದ ನಿರೀಕ್ಷಿಸಿದರೆ, ನಾವೂ ಸಹ (Late comers) ಇದೇ ಮಾರ್ಗಾವಲಂಬಿಗಳಾಗುವದು ಲೇಸೆಂದು ತೋರುತ್ತದೆ.

ನಮ್ಮ ವಿಚಾರ ಸರಣಿ ಪುಷ್ಟಿಯಾಗುವ ರೀತಿಯಲ್ಲಿ ಶ್ರೀಮದ್ಭಾಗವತದಲ್ಲಿಯ ಇನ್ನು ಕೆಲವು ಆಣಿಮುತ್ತುಗಳನ್ನು ನೋಡಿ ನಮ್ಮ ಕಡೆಗೆ ಧಾವಿಸುವ ಆಶಾಕಿರಣಗಳನ್ನು ಸ್ವಾಗತಿಸುವಾ.

"ಸಕೃನ್ಮನಃ ಕೃಷ್ಣಪದಾರವಿಂದಯೋರ್ನಿವೇಶಿತಂ ತದ್ಗುಣರಾಗಿಯ್ಶೈರಿಹ ।
ನತೇಯಮಂ ಪಾಶಭೃತಶ್ಚ ತದ್ಭಟಾನ್ ಸ್ವಪ್ನೇಪಿಪಶ್ಯಂತಿ ಹಿ
ಚೀರ್ಣನಿಷ್ಕೃತಾ"॥

ಶ್ರೀಮದ್ಭಾಗವತದ ಷಷ್ಠಸ್ಕಂಧದಲ್ಲಿ ಶುಕಾಚಾರ್ಯರು ಪರೀಕ್ಷಿತರಾಜನಿಗೆ ಉಪದೇಶ ಮಾಡಿದ ವಿಷಯ. ಅಜಾಮಿಳೋಪಾಖ್ಯಾನದ ಪೂರ್ವಶ್ಲೋಕವಿದು.

ಪಂಚಮಸ್ಕಂಧದ ಅಂತ್ಯದಲ್ಲಿ ವರ್ಣಿತವಾದ ವಿವಿಧ ನರಕಗಳ ವರ್ಣನೆ, ಅಲ್ಲಿ ಪಾಪ ಮಾಡಿದವರು ಹೊಂದತಕ್ಕ ಯಾತನಾದಿಗಳನ್ನು ಶ್ರವಣಮಾಡಿದ ಪರೀಕ್ಷಿತನು ಭೀತಮನಸ್ಕನಾಗಿ, ಆರನೆಯ ಸ್ಕಂದದ ಆದಿಯಲ್ಲಿ ಆ ನರಕಾದ್ಯನರ್ಥಗಳನ್ನು ತಪ್ಪಿಸಿಕೊಳ್ಳುವ ಉಪಾಯಗಳನ್ನು ತಿಳಿದುಕೊಳ್ಳಲು ಪ್ರಯತ್ನಿಸುತ್ತಾನೆ. ಅದನ್ನೇ ಪ್ರಶ್ನೆ ಮಾಡುತ್ತಾನೆ. ಪಾಪಕ್ಕೆ ಪ್ರಾಯಶ್ಚಿತ್ತ ಮಾಡಕೊಳ್ಳಬೇಕೆಂದು ಶುಕಾಚಾರ್ಯರ ಉತ್ತರ. ಪ್ರಾಯಶ್ಚಿತ್ತ ಮಾಡಿಕೊಂಡರೇನಾಯಿತು, ಪುನಃ ಪಾಪ ಘಟನೆಯಾಗುವದು ಆನೆ ಸ್ನಾನಮಾಡಿ ಪುನಃ ಮಣ್ಣು ತಲೆಯ ಮೇಲೆ ಎರಚಿಕೊಂಡಂತೆ ಎಂದು ಪರೀಕ್ಷಿತನ ಪುನಃಶಂಕಾ.

ಶುಕಾಚಾರ್ಯರು ಪುನಃಸಮಾಧಾನ ಹೇಳುತ್ತಾರೆ.

ತಪಸಾಬ್ರಹ್ಮಚರ್ಯೇಣಚ ಶಮೇನಚ ದಮೇನಚ ।
ತ್ಯಾಗೇನ ಸತ್ಯಶೌಚಾಭ್ಯಾಂ ನಿಯಮೇನ ಯಮೇನಚ ॥
ಕ್ಷಿಪಂತ್ಯಘಂ ಮಹದಪಿ ವೇಣುಗುಲ್ಮ ಇವಾನಲಃ।

ಬ್ರಹ್ಮಚರ್ಯೆ, ಶಮ, ದಮ, ಸತ್ಯ, ತ್ಯಾಗ, ಶುಚಿತ್ವ, ಯಮ, ನಿಯಮಾದಿಗಳು ಮಹತ್ತರವಾದ ಪಾಪಗಳನ್ನು ನಾಶಗೊಳಿಸುತ್ತವೆ. ಇವೆಲ್ಲವೂ ಕೆಲವು ಕಾಲಾನಂತರದಲ್ಲಿ ಮೋಕ್ಷಸಾಧನೀಭೂತವಾದ ಜ್ಞಾನೋದಯಕ್ಕೆ ಕಾರಣವಾಗುತ್ತವೆ. ಇನ್ನು ಕೆಲವರು ಇವೆಲ್ಲವನ್ನೂ

ಮಾಡಲು ಆಗದಿದ್ದರೆ, ಕೇವಲ ವಾಸುದೇವನಲ್ಲಿ ಭಕ್ತಿಮಾಡಿ ಅನಿಷ್ಟರೂಪ ಪಾಪಗಳನ್ನು ಕಳೆದುಕೊಂಡು ಮೋಕ್ಷಸಾಧನ ಮಾಡುತ್ತಾರೆ.

ಅಲ್ಲರೀ, ಕೇವಲ ಭಕ್ತಿಯಿಂದ ಹೇಗೆ ಪಾಪಕಳೆದುಕೊಳ್ಳುವದು. ಅದು ಪ್ರಾಯಶ್ಚಿತ್ತಸಾಧ್ಯವಲ್ಲವೇ? ಅಂದರೆ –

ಮೇಲೆ ಹೇಳಿದ ತಪಸ್ಸು ಇತ್ಯಾದಿ ಚಿರಕಾಲಮಾಡಬೇಕು, ನಂತರ ಅವೆಲ್ಲವೂ ಫಲಕಾರಿಯಾಗುತ್ತವೆ. ಆದರೆ ಭಕ್ತಿಯಿಂದ ವಿಳಂಬವಿಲ್ಲದೇ ಪಾಪನಿರ್ಹರಣವು ಸಾಧ್ಯವೆಂದು ಭಕ್ತಿಯ ಪ್ರಾಧಾನ್ಯವನ್ನು ಸ್ಪುಟೀಕರಣ ಮಾಡಲು "ಸಕೃನ್ಮನಃ" ಎಂಬ ಪದ್ಯದಿಂದ ವಿಶದೀಕರಿಸುತ್ತಾರೆ.

"ಬುದ್ಧಿಪೂರ್ವಕವಾಗಿಯೋ ಅಥವಾ ಆಕಸ್ಮಿಕವಾಗಿಯೋ ಘಟಿಸಿದ ಪಾಪಗಳ ವಿಷಯದಲ್ಲಿ, ಸಾಕಷ್ಟು ಅನುತಾಪ ಉಂಟಾಗಿ, ದುಷ್ಟಕರ್ಮ ಜನಿತ ಪಾಪವಾಗಲಿ – ತತ್ಫಲವಾಗಲಿ ಅಥವಾ ನರಕಾದ್ಯನರ್ಥಗಳಾಗಲಿ ಸೋಂಕದಂತೆ ಮಾಡಿಕೊಳ್ಳಲು ಇಚ್ಛೆಯುಳ್ಳ ಮಾನವನು ಶ್ರೀಕೃಷ್ಣನ ಪಾದ ಪದ್ಮಗಳಲ್ಲಿ ಗಾಢವಾದ ಭಕ್ತಿಯಿಂದ ಶರಣಾಗತಿಬುದ್ಧಿಯಿಂದ ಒಂದು ಸಲ ಅವನ ಕಾರುಣ್ಯಾದಿ, ಸೃಷ್ಟ್ಯಾದಿ, ಭಕ್ತಾನುಕಂಪನಾದಿ, ಗತಿಪ್ರದತ್ವಾದಿ ಗುಣಪೂರ್ಣತೆಗಳನ್ನು ಧ್ಯಾನಮಾಡಿ, ಹೃದಯಾಂತರಾಳದಿಂದ ಈ ದುಷ್ಕರ್ಮಗಳಿಂದ ಪಾರು ಮಾಡಲು ನಿನ್ಹೊರತು ಯಾರು ಇಲ್ಲ ಎಂದು ಅನನ್ಯರಹಿತತ್ವ ಭಾವನೆಯಿಂದ ಮನಸ್ಸಿಟ್ಟರೆ ಅವನು 'ಚೀರ್ಣನಿಷ್ಕೃತಾ" ಕೃತಪ್ರಾಯಶ್ಚಿತ್ತನಂತೆ ಆಗುತ್ತಾನೆ. ಪಾಪನಾಶವಾದ ನಂತರ ಅಥವಾ ಶ್ರೀಕೃಷ್ಣನ ರಕ್ಷಣೆ ಸಿಕ್ಕನಂತರ ಯಮನನ್ನಾಗಲಿ – ಅವನದೂತರನ್ನಾಗಲಿ ಸ್ವಪ್ನದಲ್ಲಿ ಕೂಡ ನೋಡಲಾಗುವದಿಲ್ಲ. ಎಂದರೆ ಕೈಮುತ್ಯನ್ಯಾಯೇನ ನೋಡುವದೇ ಇಲ್ಲವೆಂದು ಧ್ವನಿತವಾಯಿತು. ಪಾಪಾದಿಗಳು ನಷ್ಟವಾದ ಮೇಲೆ ನರಕಾದ್ಯರ್ಥಗಳು ದೂರವಾಗುವವು ಎಂದರ್ಥ. ಒಂದು ಸಲ ಸರ್ವಾತ್ಮನಾ ವಿಷ್ಣುಭಕ್ತನಾದ ಮೇಲೆ ಅವನ ಬಗ್ಗೆ ಏನಾದರೂ ವಿಚಾರಣೆ ಇತ್ಯಾದಿಗಳು ನಡೆಯಬೇಕಾದರೆ ವಿಷ್ಣು ಲೋಕದಲ್ಲಿ ಮಾತ್ರ ಯಮಲೋಕದಲ್ಲಲ್ಲ.

ಏನ್ರಿ ಇದೆಲ್ಲ ವೈದಿಕರಿಗೇ ಎಂದೇ ತೋರುತ್ತದೆ. ಅವೈದಿಕರು, ಎಂದರೆ, ಸ್ತ್ರೀಶೂದ್ರಾದಿಗಳಿಗೆ ಪಾಪಪ್ರಾಯಶ್ಚಿತ್ತವು ಹೇಗಾಗುತ್ತದೆ, ಎಂಬ ಆಕಾಂಕ್ಷೆ ಬಂದರೆ, ಅವರಿಗೂ ಭಗವಂತನಲ್ಲಿ ಭಕ್ತಿಯಿಂದ ಮತ್ತು ಭಗವನ್ನಾಮ ಸಂಕೀರ್ತನೆಗಳಿಂದ ಪಾಪ ಪರಿಹಾರವಾಗುವದೆಂದು ಶುಕಾಚಾರ್ಯರು ಕನ್ಯಾಕುಬ್ಜದೇಶದ ಅಜಾಮಿಲೋಪಾಖ್ಯಾನವನ್ನು ಹೇಳುತ್ತಾರೆ. ಅಂತ್ಯ ಕಾಲದಲ್ಲಿ ನಾರಾಯಣನ ನಾಮೋಚ್ಚಾರಣೆ ಮಾಡಿದ ಅಜಾಮಿಳನನ್ನು ವಿಷ್ಣುದೂತರು – ಯಮದೂತರಿಂದ ಅಂದರೆ ನರಕಾದ್ಯನರ್ಥಗಳಿಂದ ರಕ್ಷಿಸಿದರು.

ಈ ಸಂದರ್ಭವನ್ನೂ "ಸಕೃನ್ಮನಃ ಕೃಷ್ಣಪದಾರವಿಂದಯೋಃ" ಎಂಬ ಶ್ಲೋಕದ ಜೊತೆಗೆ ಪರ್ಯಾಲೋಚಿಸಲಾಗಿ ಸಾಧನದ ಮೊದಲ ಹಂತದಲ್ಲಿದ್ದ ನಮ್ಮಂಥವರಿಗೆ ಅತಿಶಯಪ್ರೋತ್ಸಾಹ ಕೊಡುತ್ತದೆ.

ಇದೇ ಸ್ಕಂಧದ ಇನ್ನೊಂದು ಶ್ಲೋಕವನ್ನು ನೋಡುವಾ.

"ಕೃಷ್ಣಾಂಘ್ರಿಪದ್ಮಮಧು ಲಿಣ್ನಪುನರ್ವಿಸೃಷ್ಟಃ ಮಾಯಾಗುಣೇಷುರಮತೇ ವೃಜಿನಾವಹೇಷು।
ಅನ್ಯಸ್ತು ಕಾಮಹತ ಆತ್ಮರಜಃ ಪ್ರಮಾಷ್ಟು ಮೀಹೇತ ಕರ್ಮಯತ ಏವ ರಜಃಪುನಃಸ್ಯಾತ್"॥

ಒಂದು ಸಲ ಶ್ರೀಕೃಷ್ಣನ ಪಾದಪದ್ಮಗಳ ಮಕರಂದದ ಸವಿಯನ್ನು ಅನುಭವಿಸಿದ ಮಾನವನು, ಸ್ವಕರ್ಮನಿರ್ಮಿತವಾದ ವಿಷಯಸುಖಗಗಳಲ್ಲಿ ಮಗ್ನರಾಗುವದಿಲ್ಲ. ಅದರಲ್ಲಿ ಪುರುಷಾರ್ಥ ಬುದ್ಧಿಯನ್ನು ಮಾಡುವದಿಲ್ಲ. ಅನ್ಯರಂತೆ ವಿಷಯ ಮಗ್ನನಾಗುವದಿಲ್ಲ. ಅನ್ಯರಿಗೆ ಪಾಪ ತೊಳೆದುಕೊಳ್ಳಲು ಪ್ರವೃತ್ತರಾದಾಗ ಪುನಃ ಪಾಪಸಂಘಟಿಸುವದು. ಯಾಕೆಂದರೆ ಅವನಿಗೆ ಪರವಿಷಯದಲ್ಲಿ ಆಸಕ್ತಿಯೇ ಇಲ್ಲ. ಕೆಸರಿನಿಂದ ಕೆಸರು ತೊಳೆದ ಹಾಗೆ ಆಗುತ್ತದೆ.

ಮೇಲಿನ ಎರಡು ಶ್ಲೋಕದಿಂದ ತೋರುವದೇನಂದರೆ ಪರಮಾತ್ಮನು ಕಷ್ಟಸಾಧ್ಯನಲ್ಲ ಭಕ್ತಿಸಾಧ್ಯ.

ಈ ಮೊದಲು ವಿಮರ್ಶೆಮಾಡಿದ "ಅಹೋನೃಜನ್ಮಾ" ಎಂಬ ಶ್ಲೋಕದಿಂದ ಮಾನವ ಜನ್ಮಬಂದಿದ್ದಕ್ಕೆ ಮುಖ್ಯವಾಗಿ ಹೃಷೀಕೇಶನ ಕೀರ್ತಿ / ಮಹಾತ್ಮೆಯನ್ನು, ಜ್ಞಾನಿಗಳ / ವೈಷ್ಣವೋತ್ತಮರ ಸಹವಾಸಪಡೆದು ಕೊಂಡಾಡುವದು. ಅರ್ಥಾತ್ ಜ್ಞಾನಭಕ್ತ್ಯಾದಿದಾರ್ಢ್ಯದಿಂದ ಶ್ರೀಹರಿಯ ಚಿಂತನ, ಧ್ಯಾನಾದಿಗಳನ್ನು ಮಾಡುವದು.

ಮೊದಲನೆಯದಾಗಿ ಭಾಗವತದ ತೃತೀಯ ಸ್ಕಂಧದಲ್ಲಿ ಪರಮಾತ್ಮನ ಮುಖದಿಂದಲೇ ನಿರ್ಗತವಾದ ಮಹಾತ್ಮರ / ಸಾಧುಜನರ ಲಕ್ಷಣ ಅವರಿಂದ ಅಧ್ಯಾತ್ಮಮಾರ್ಗದಲ್ಲಾಗ ತಕ್ಕ ಪ್ರಯೋಜನಗಳನ್ನು ನೋಡುವಾ.

"ತಿತಿಕ್ಷವಃ ಕಾರುಣಿಕಾ ಸುಹೃದಃ ಸರ್ವದೇಹಿನಾಂ ॥ ಇತ್ಯಾದಿ"

ಸಂಯಮುಳ್ಳವರು, ಕರುಣೆಉಳ್ಳವರು, ಎಲ್ಲರಲ್ಲಿ, ಸ್ನೇಹ ಉಳ್ಳವರು, ಶತೃತ್ವರಹಿತರೂ, ಶಾಂತರೂ, ಸಾಧುಗಳೂ, ಸದ್ಗುಣಗಳಿಂದ ಭೂಷಿತರೂ, ನನ್ನನ್ನು ಅನನ್ಯ ಭಕ್ತಿಯಿಂದ ಭಜಿಸತಕ್ಕವರೂ, ನನ್ನ ಮಹಿಮಾದಿ ಜ್ಞಾನದಲ್ಲಿ ಆಸಕ್ತರಾಗಿ, ಸ್ವಜನರಲ್ಲಿ ವಿರಕ್ತರಾಗಿಯೂ, ನನ್ನ ಮಹಿಮೊದಿಗಳನ್ನು ಶ್ರವಣ ಮನನಾದಿಗಳನ್ನು ಮಾಡುತ್ತಾರೆ, ಮಾಡಿಸುತ್ತಾರೆ. ನನ್ನ ಪ್ರೀತಿಗಾಗಿ ವಿವಿಧ ತರಹದ ತಪ, ವ್ರತಗಳನ್ನು ಆಚರಿಸುತ್ತಾರೆ. ಹೇ ಜನನೀ ಇಂಥವರು ಸಾಧುಗಳು ಸರ್ವಸಂಗಪರಿತ್ಯಾಗ ಮಾಡಿದವರು ಅವರ ಸಂಗವನ್ನು ನೀನು ಬಯಸತಕ್ಕದ್ದು". ಎಂದು ಕಪಿಲನಾಮಕ ಪರಮಾತ್ಮನು ದೇವಹೂತಿಗೆ ಹೇಳುತ್ತಾನೆ.

ಸತಾಂಪ್ರಸಂಗಾನ್ಮಮವೀರ್ಯಸಂಪದೋ ಭವಂತಿ ಹೃತ್ಕರ್ಣರಸಾಯನಾಃ ಕಥಾಃ?
ತಜ್ಜೋಷಣಾದಾಶ್ವಪವರ್ಗವತ್ಮನಿ ಶ್ರದ್ಧಾವತೀ ಭಕ್ತಿರನು ಕ್ರಮಿಷ್ಯತಿ॥

ಈ ತರಹದ ಸಜ್ಜನರ ಸಂಗದಿಂದ ಆಗುವ ಪ್ರಯೋಜನವೇನಂದರೆ ಸಜ್ಜನ ಸಮಾಗಮದಿಂದ, ಅವರು ಮಾಡಿಸುವ ಶ್ರವಣಾದಿಗಳಿಂದ ಮನಸ್ಸಿಗೆ ಹರ್ಷವಾಗುತ್ತದೆ. ಅವರ ಸಂಪತ್ತೆಂದರೆ ಶ್ರೀಹರಿಯ ವಿಷಯಕ ಸಮೀಚೀನ ಜ್ಞಾನ. ಅಂಥ ಮಹಾತ್ಮ್ಯ ಜ್ಞಾನ ಸೇವನೆಯಿಂದ ಇತರ ಲೋಕವಿಷಯದಲ್ಲಿ ಅಶ್ರದ್ಧೆಯುಂಟಾಗಿ, ಅಪವರ್ಗಮಾರ್ಗದಲ್ಲಿ ಶೀಘ್ರಗತಿಯಲ್ಲಿ ಶ್ರದ್ಧಾಭಕ್ತಿಗಳು ಅಭಿವೃದ್ಧಿಯಾಗುತ್ತವೆ.

ಈ ರೀತಿ ಉತ್ಪನ್ನವಾದ ಭಕ್ತಿಯಿಂದ ಇಂದ್ರಿಯಗಳಿಂದ ಅನುಭವಿಸತಕ್ಕ ವಿಷಯದಲ್ಲಿ ಅನಾಸಕ್ತಿ(ವೈರಾಗ್ಯ) ಹೊಂದಿ, ನಂತರ ದೇಹಧಾರಿಯಾದ ಮನುಷ್ಯನು ಕಂಡಕಂಡ ಸಂಪತ್ತಿನಲ್ಲಿ ವಿಶೇಷ ಚಿಂತೆಗೊಳಗಾಗದೇ ಅಸಾರ ಅನಿತ್ಯವೆಂದು ಬಿಡುತ್ತಾನೆ. ಪರಮಾತ್ಮನಲ್ಲಿ ಋಜುಮಾರ್ಗದಲ್ಲಿ ಯೋಗಯುಕ್ತನಾಗಿ ಪರಮಾತ್ಮನ ಸಾಕ್ಷಾತ್ಕಾರಕ್ಕೆ ಯತ್ನ ಮಾಡುತ್ತಾನೆ. ಇತ್ಯಾದಿ.

ಶುದ್ಧಿರ್ನೃಣಾಂನತು ತಥೇಡ್ಯದುರಾಶಯಾನಾಂ ವಿದ್ಯಾಶ್ರುತಾಧ್ಯಯನ ದಾನ ತಪಃಕ್ರಿಯಾಭಿಃ। ಸತ್ವಾತ್ಮನಾಂ ಋಷಭತೇ ಯಶಸಿ ಪ್ರವೃದ್ಧ ಸಚ್ಛೃದ್ಧಯಾಶ್ರವಣ ಸಂಭೃತಯಾ ಯಥಾಸ್ಯಾತ್॥

ಹೇ ಪೂಜ್ಯ ಋಷಭನೇ, ಮೋಕ್ಷೇಚ್ಛೆಯುಳ್ಳಸಾಧಕರು ಎರಡು ತರಹ ಇದ್ದಾರೆ. ಮೊದಲನೆಯ ವರ್ಗ ನಿಗೃಹೀತ ಮನಸ್ಸುಳ್ಳವರು. ಎರಡನೆಯ ವರ್ಗ ಅನಿಗ್ರಹೀತ ಮನಸ್ಸುಳ್ಳವರು.

ನಿಗೃಹೀತ ಮನಸ್ಸುಳ್ಳ ಸಾಧಕರಿಗೆ ನಿನ್ನ ಯಶಸ್ಸಿನ ಜ್ಞಾನ ದಿನೇ ದಿನೇ ಪ್ರವೃದ್ಧಮಾನವಾಗಿ, ಶ್ರದ್ಧಾಪೂರ್ವಕ ಮಾಡತಕ್ಕ ಶ್ರವಣಾದಿಗಳಿಂದ ಅತ್ಯಂತ ಮನಃಶುದ್ಧಿಯೂ, ಭಕ್ತ್ಯಾತಿಶಯವೂ ಆಗುತ್ತ ಸರ್ವವೂ ಮಹಾ ಪುರುಷಾರ್ಥಗಳಲ್ಲಿ ಪರಿಅವಸಾನವಾಗುತ್ತವೆ.

ಪತಿತಃ ಸ್ಖಲಿತಃ ಶ್ಚಾರ್ತಃ ಕ್ಷುತ್ವಾವಾ ವಿವಶೋಽಬೃವನ್।
ಹರಯೇ ನಮ ಇತ್ಯುಚ್ಚೈ ಮುಚ್ಯತೇ ಸರ್ವಪಾತಕಾತ್॥
ಸಂಕೀರ್ತ್ಯಮಾನೋಭಗವಾನನಂತಃ ಶ್ರುತಾನುಭಾವ್ಯೋವ್ಯಸನಂ ಹಿ ಪುಂಸಾವ್ ।
ಪ್ರವಿಶ್ಯಚಿತ್ತಂ ವಿಧುನೋತ್ಯಶೇಷಂ ಯಥಾತಮೋಽರ್ಕೋಽಭ್ರಮಿವಾತಿವಾತಃ॥

"ವರ್ಣಾಶ್ರಮಾಚಾರಾದಿಗಳಿಂದ ಭ್ರಷ್ಟನಾಗಿ ಪತಿತನಾಗಲಿ, ಯಾವ ಮಾರ್ಗದಲ್ಲಿಯೇ ಇರಲಿ ಎಡವಿ ಬೀಳಲಿ, ಆರ್ತಸ್ಥಿತಿಯಲ್ಲಿರಲಿ, ಹಸಿವೆ ಯಿಂದಲಾಗಲಿ, ಸ್ಮೃತಿತಪ್ಪಿಯಾಗಲಿ "ಹರಯೇ ನಮಃ" ಎಂದು ಉಚ್ಚಸ್ವರದಲ್ಲಿ ಕೂಗಿದರೆ ಸಕಲಪಾಕಗಳಿಂದ ಮಾನವನು ಮುಕ್ತನಾಗುತ್ತನೆ."

"ಯಾವ ಸಾಧಕನಿಂದ ಭಗವಂತನು ಮಾಹಾತ್ಮ್ಯ ಜ್ಞಾನಪೂರ್ವಕವಾಗಿ ಕೀರ್ತಿಸಲ್ಪಡುತ್ತಾನೋ, ಶ್ರವಣಾನಂದಾದಿ ಅನುಭವಗಳನ್ನು ಪಡೆಯುತ್ತಾನೋ ಅಂಥವನ ಆಧ್ಯಾತ್ಮಿಕ ಅನುಭವಗಳು ಅವನ ಚಿತ್ತವನ್ನು ಪ್ರವೇಶಿಸಿ ಅಶೇಷಕಲ್ಮಷವನ್ನು / ಪಾಪವನ್ನು ತೊಳೆದುಹಾಕುತ್ತದೆ. ಹೇಗೆಂದರೆ (i) ಸೂರ್ಯನ ಬೆಳಕು ಬಂದರೆ ಕತ್ತಲೆಯು ತಾನಾಗಿಯೇ ಸರಿಯುವಂತೆ, (ii) ಸಾಮಾನ್ಯ ರೀತಿಯಲ್ಲಿ ಕೆಲಸವಾಗದಿದ್ದರೆ ಬಲಪ್ರಯೋಗ, ಅತಿಶಯಿತ ಬಿರುಗಾಳಿಗಳು ಮೋಡಗಳನ್ನು ಆಕಾಶದಲ್ಲಿ ಚೆದುರಿಸುವಂತೆ ಕಾರ್ಯವಾಗುತ್ತದೆ."

ಮೇಲೆ ಹೇಳಿದ ಸಕಲವೂ ನಿರಂತರ ಶ್ರೀಹರಿಯ ಸ್ಮರಣಾದಿಗಳಿಂದ ಸಾಧ್ಯ. ಈ ವಿಷಯವನ್ನು ಭಾಗವತವು ಕೆಳಗಿನ ಶ್ಲೋಕಗಳಿಂದ ತಿಳಿಸುತ್ತದೆ.

"ಯಶಃ ಶ್ರಿಯಾಮೇವ ಪರಿಶ್ರಮಃ ಪರೋ ವರ್ಣಾಶ್ರಮಾಚಾರ ತಪಃ
ಶ್ರುತಾದಿಷು।
ಅವಿಸ್ಮೃತಿಃ ಶ್ರೀಧರಪಾದಪದ್ಮಯೋಃ ಗುಣಾನುವಾದಃ
ಶ್ರವಣಾದಿಭಿರ್ಹರೇಃ॥"
"ಅವಿಸ್ಮೃತಿಃ ಕೃಷ್ಣಪದಾರವಿಂದಯೋಃ ಕ್ಷಿಣೋತ್ಯಭದ್ರಾಣಿ
ಶಮಂತನೋತಿಚ।
ಸತ್ವಸ್ಯಶುದ್ಧಿಂ ಪರಮಾಂಚ ಭಕ್ತಿಂ ಜ್ಞಾನಂಚ, ವಿಜ್ಞಾನ ವಿರಾಗಯುಕ್ತಂ॥

"ಲೋಕದಲ್ಲಿ ಪ್ರತಿಯೊಬ್ಬರ ಅನುಭವವೇನೆಂದರೆ ಯಶಸ್ಸು – ಕೀರ್ತಿಗಳನ್ನು ಪಡೆಯಬೇಕಾದರೆ ಅದಕ್ಕಾಗಿ ಸತತ ಪರಿಶ್ರಮವೇ ಉತ್ಕೃಷ್ಟ ಉಪಾಯ. ಹಾಗೆಯೇ ನಿಶ್ರೇಯಸಮಾರ್ಗದಲ್ಲಿ ನಮಗೇನಾದರೂ ಲಭ್ಯವಾಗಬೇಕಾದರೆ ಶಾಸ್ತ್ರವಿಹಿತ ಸ್ವಕರ್ಮ ಆಚರಣೆಗಳಿಂದಲೇ ಸಾಧ್ಯ. ವರ್ಣಾಶ್ರಮಾಚಾರಗಳು, ತಪಸ್ಸು, ಶ್ರವಣಮನನಾದಿಗಳು, ಗುಣಾನುವಾದಗಳು ಶ್ರೀಧರಪಾದಪದ್ಮಗಳಲ್ಲಿ ನಿರಂತರ ಸ್ಮರಣೆ ಇವುಗಳಿಂದ ಏನು ಸಾಧ್ಯ ಎಂಬುದು ಮುಂದಿನ ಶ್ಲೋಕದಲ್ಲಿ ಹೇಳುತ್ತಾರೆ."

"ಸ್ಮೃತಿ ಅಂದರೆ ಸ್ಮರಣೆ. ಅವಿಸ್ಮೃತಿ ಎಂದರೆ ಸ್ಮರಣರಾಹಿತ್ಯಾಭಾವ. ಅಂದರೆ ನಿರಂತರ ಸ್ಮರಣೆ. ಇದನ್ನು ಧೃಡೀಕರಿಸಲು ಎರಡು "ನಞ" ಪ್ರಯೋಗ. ಶ್ರೀ ಕೃಷ್ಣಪಾದಾರವಿಂದಗಳಲ್ಲಿ ಪರಮಾದರ ಪೂರ್ವಕ ಕರ್ತವ್ಯತ್ವೇನಕೃತ ನಿರಂತರ ಸ್ಮರಣೆಯು ಅಮಂಗಳವನ್ನು ದೂರಮಾಡಿ ಸುಖವನ್ನು ತಂದುಕೊಡುತ್ತದೆ. ಸಾಧನಾದಿಗಳಿಗೆ ಒದಗ ತಕ್ಕ ವಿಘ್ನಗಳನ್ನು ಪರಿಹರಿಸುತ್ತದೆ. ಇದು ಸಾಧಕನ ಎಲ್ಲ ಸಮಸ್ಯೆಗಳಗೆ ಇರತಕ್ಕ ಸಾಮಾನ್ಯ ಪರಿಹಾರ. ಅಷ್ಟೇ ಅಲ್ಲ.

(i) ಆದರನೈರಂತರ್ಯಾದಿಗಳಿಂದ ವಿಶೇಷಾಸಕ್ತಿಯಿಂದ ಮಾಡಿದ ಶ್ರವಣ ಮನನ ಜನ್ಯಜ್ಞಾನವು ಅಪರೋಕ್ಷಜ್ಞಾನವನ್ನು ತಂದುಕೊಡುತ್ತದೆ.

(ii) ಅದೇ ಆದರನೈರಂತರ್ಯಾದಿಗಳಿಂದ ವೈರಾಗ್ಯಭಕ್ತಿ ವಿಶೇಷಿತವಾಗಿ ಮಾಡಿದ ಅವಿಸ್ಮೃತಿಯ/ಸ್ಮರಣೆಯು ವಿಜ್ಞಾನವನ್ನು ತಂದುಕೊಡುತ್ತದೆ.

(iii) ಅದೇ ಆದರ ನೈರಂತರ್ಯಾದಿಗಳಿಂದ ವೈರಾಗ್ಯ ಜ್ಞಾನಗಳಿಂದ ವಿಶೇಷಿತವಾದ ಅವಿಸ್ಮೃತಿಯ ಉತ್ಕೃಷ್ಟವಾದ ಭಕ್ತಿಯನ್ನು ತಂದುಕೊಡುತ್ತದೆ.

(iv) ಅದೇ ಪ್ರಕಾರ ಅದರ ನೈರಂತರ್ಯಾದಿಗಳಿಂದ ಜ್ಞಾನಭಕ್ತಾದಿಗಳಿಂದ ಆಚರಿಸಿದ ಅವಿಸ್ಮೃತಿಯು ಉತ್ತಮವಾದ ಧೃಡವೈರಾಗ್ಯವನ್ನು ತಂದುಕೊಡುತ್ತದೆ.

ಇಷ್ಟು ಸಾಮರ್ಥ್ಯವಿದೆ ಶ್ರೀಕೃಷ್ಣಪಾದಾರವಿಂದಗಳ ನಿರಂತರ ಸ್ಮರಣೆಯಿಂದ. ಅಲ್ಲರೀ, ನಿರಂತರಸ್ಮರಣೆ ಮಾಡುವದು ಹೇಗೆ, "ಸ್ಮರ್ತವ್ಯಂ ಸತತಂ ವಿಷ್ಣುಂ ವ್ಯಸ್ಮರ್ತವ್ಯೋನಜಾತುಚಿತ್" ಎಂಬ ವಾಕ್ಯವೂ ಇದೆ. ನಾವು ಪ್ರಾತಃ ಕಾಲದಿಂದ – ನಿದ್ರೆಹೋಗುವವರೆಗೆ ಅನೇಕ ಕಾರ್ಯಗಳಲ್ಲಿ ತೊಡಗಿರುತ್ತೇವೆ. ಅಂಥದರಲ್ಲಿ ಹರಿಧ್ಯಾನ ಮಾಡುವದು ಹೇಗೆ. ನಿತ್ಯಲೌಕಿಕ ಕಾರ್ಯಗಳನ್ನು ಬಿಡಲು ಸಾಧ್ಯವಿಲ್ಲ.

ಹಾಗಾದರೆ ಪರಿಹಾರ? ಇದಕ್ಕೆ ಅಂದರೆ ನಿರಂತರ ಸ್ಮರಣೋಪಾಯಕ್ಕೆ ಒಂದು ಹಾದಿ ಇದೆ ಎಂದು ಹೇಳುತ್ತಾರೆ ಭಾಗವತಕಾರರು.

ಶೃಣ್ವನ್‌ಗೃಣನ್ ಸಂಸ್ಮರಯಶ್ಚಚಿಂತಯನ್ ನಾಮಾನಿರೂಪಾಣಿಚ ಮಂಗಳಾನಿತೇ।
ಕ್ರಿಯಾಸು ಯಸ್ತ್ವಚ್ಚರಣಾರವಿಂದಯೋರಾವಿಷ್ಟಚಿತ್ತೋ ನ ಭವಾಯ ಕಲ್ಪತೇ ॥

ಶ್ರೀ ಕೃಷ್ಣಾವತಾರ ಸಮಯದಲ್ಲಿ ಬ್ರಹ್ಮದೇವರು ಮಾಡಿದ ಸ್ತೋತ್ರವಿದು. ಶ್ರೀಮದ್ಭಾಗವತದಲ್ಲಿ ಯಾವದೇ ಸಂದರ್ಭದಲ್ಲಿ ಇಂಥ ವಿಚಾರ ಪೂರಿತ ಶ್ಲೋಕಗಳು ವ್ಯಕ್ತವಾದರೂ ಅವು ಅನೇಕಾಧಿಕಾರಿಕ ಮತ್ತು ಸಾರ್ವಕಾಲಿಕ. ಇವು ಸೂತ್ರಗಳಿದ್ದಂತೆ (FORMULA) ಅನೇಕ ಸಂದರ್ಭಗಳಲ್ಲಿ ಅನ್ವಯಿಸುವವು.

"ಶ್ರೀಹರಿಯ ಮಂಗಳಕರವಾದ ಮಹಿಮಾಯುಕ್ತವಾದ ನಾಮರೂಪಗಳನ್ನು ಕಥಾಗಳನ್ನು ಶ್ರವಣಮಾಡುವದು ಮತ್ತು ಶ್ರವಣ ಮಾಡಿಸುವದು, ಶ್ರೀಹರಿಯ ನಾಮಗಳನ್ನು ಉಚ್ಚಾರಣೆ ಮಾಡುವದು ಮತ್ತು ಪರರಿಂದ ಮಾಡಿಸುವದು, ಸದಾ ಸ್ಮರಣೆ ಮಾಡುವದು ಅಂಥ ಸ್ಮರಣವಿಧಾನಗಳನ್ನು ಇತರರಿಗೆ ತಿಳಿಸುವದು, ಸ್ವಯಂ ಸಚ್ಛಾಸ್ತ್ರೋದಿತ ಮಾರ್ಗದಲ್ಲಿ ಶಾಸ್ತ್ರ ಚಿಂತನಮಾಡುವದು ಇತರರಿಗೆ ಚಿಂತನ ಮಾಡಿಸುವದು. ಈ ಪ್ರಕಾರ ಸ್ವಯೋಗ್ಯತಾನುಸಾರ ಅನುದಿನ ಆದರದಿಂದ ಶ್ರೀಹರಿಯ ಚರಣಾರವಿಂದಗಳಲ್ಲಿ ನಿರತವಾದ ಚಿತ್ತವೃತ್ತಿ ಉಳ್ಳ ಮನುಷ್ಯನು ಸಂಸಾರದಿಂದ ಜನನಮರಣ ಪ್ರವಾಹದಿಂದ ವಿವಿಧ ಸಾಂಸಾರಿಕ ದುಃಖದಿಂದ ಬಿಡುಗಡೆ ಹೊಂದಿ ಅಂತ್ಯದಲ್ಲಿ ಸಾಧನಸಾಧ್ಯ ಅನೇಕ ಜನ್ಮಗಳ ನಂತರ ಶ್ರೀಹರಿಯ ಪ್ರಸಾದದ್ವಾರಾ ಆತ್ಯಂತಿಕ ಸುಖರೂಪ ಮೋಕ್ಷವನ್ನು ಹೊಂದುತ್ತಾನೆ.

ಇದು ಹೇಗಾಗುತ್ತದೆಂದರೆ ಶ್ರೀಹರಿಯ ವಿಷಯಕವಾದ ಶ್ರವಣ, ಮನನ, ಸ್ಮರಣ, ಧ್ಯಾನ, ಉಚ್ಚಾರಣ, ಚಿಂತನಾದಿಗಳು ಭಗವಂತನ ಜ್ಞಾನವನ್ನು ಒದಗಿಸಿ ಧೃಡವಾದ ಭಕ್ತಿಯನ್ನು ಹುಟ್ಟಿಸಿ ವಿಷಯ ವೈರಾಗ್ಯವನ್ನು ತಂದುಕೊಡುತ್ತದೆ. ಈ ಭಾಗವತದಲ್ಲಿ ಭಕ್ತಿಯು ಮುಕ್ತಿ

ಸಾಧನತ್ವೇನ ಪ್ರತಿಪಾದಿಸಲ್ಪಟ್ಟಿದೆ. ಶ್ರವಣಾದಿಗಳ ಮೂಲಕ ಲಭ್ಯವಾದ ಅಭ್ಯಾಸದಿಂದ ಮನುಷ್ಯನು ಹಗಲಿರುಳು ಮಾಡತಕ್ಕ ಸರ್ವಕ್ರಿಯೆಗಳಲ್ಲಿ ಶ್ರೀಹರಿಯಲ್ಲಿ ಮನಸ್ಸಿಡಲು ಶಕ್ತನಾದರೆ ಅದೊಂದು ಯೋಗವೆಂದೇ ಹೇಳಬೇಕು. ಕರ್ಮೇಂದ್ರಿಯಗಳು ಕೆಲಸದಲ್ಲಿ ತೊಡಗಿದಾಗ, ಜ್ಞಾನೇಂದ್ರಿಯಗಳ ಸಹಾಯದಿಂದ ಮನಸ್ಸನ್ನು ಶ್ರೀಹರಿಯ ನಾಮರೂಪಗಳಲ್ಲಿಡುವ ವಿಧಾನವನ್ನೇ ಅವಿಷ್ಟ ಚಿತ್ತವೆಂದು ಹೇಳಬೇಕು.

ಅಲ್ಲರೀ, ನಾವು ಬೇರೆಯವರಿಂದ ಶ್ರವಣಮಾಡಬೇಕಾದರೆ ಭಗವಂತನ ಕಡೆಗೆ ಲಕ್ಷ್ಯವಿರುತ್ತದೆ. ನಾವೇ ಗ್ರಂಥ ಅವಲೋಕನ ಮಾಡಬೇಕಾದರೆ ಅವನಲ್ಲಿ ಮನಸ್ಸಿಡುತ್ತೇವೆ. ಆದರೆ ಇವರೆಡೂ ಇಲ್ಲದಾಗ, ನಾವು ವೈಯುಕ್ತಿಕ ಲೋಕವ್ಯವಹಾರಗಳನ್ನು ಮಾಡುತ್ತಿರುವಾಗ ಹೇಗೆ ಅತಿಷ್ಟಚಿತ್ತರಾಗುವದು. ಅಂದರೆ ಇದಕ್ಕೂ ನಮಗೆ ಶಾಸ್ತ್ರಗಳು ದಾರಿ ತೋರಿವೆ. ಹೇಗೆಂದರೆ –

ಪಂಚರಾತ್ರಾಗಮ, ಪೂಜಾಕಂಡ, ಶತೋತ್ತರದಲ್ಲಿ, ಪ್ರಾತಸ್ಮರಣವಿಧಿ ಎಂಬ ಸ್ತೋತ್ರ ಭಾಗವಿದೆ. ಇದರಲ್ಲಿ ಪ್ರಾತಃಕಾಲದಿಂದ ಮಲಗುವವರೆಗೂ ಮಾಡತಕ್ಕ ಅನೇಕ ಕೆಲಸಗಳಲ್ಲಿ ಯಾವ ಕಾರ್ಯದಲ್ಲಿ ಯಾವ ನಾಮ/ರೂಪಸ್ಮರಣೆ ಮಾಡಬೇಕೆಂಬದು ಅತೀವ ಮನನೀಯವಾಗಿದೆ. ಆ ಸ್ತೋತ್ರಭಾಗವು ಈ ಕೆಳಗಿನಂತೆ ಇದೆ. (ಒಂದೆರಡು ಶ್ಲೋಕಗಳನ್ನು ಮಾತ್ರ ಕೊಡಲಾಗಿದೆ.)

ಹರಿಃ ಓಂ॥ ಪ್ರಾತರ್ನಾರಾಯಣಂ ಸ್ಮೃತ್ವಾ ತುಳಸೀ ಕೃಷ್ಣವಂದನಂ।
ಶೌಚಶಾಲೇ ಕೇಶವಂತು ಮೃದಾಶೌಚೇ ತ್ರಿವಿಕ್ರಮಂ॥
ದಂತಧಾವನಕಾಲೇತು ಹರಿರ್ಧ್ಯೇಯೋ ಭುಜಾಷ್ಟಕಃ॥
ಮುಖಪ್ರಕ್ಷಾಲನೇಕಾಲೇ ಮಾಧವಂ ಮನಸಾಸ್ಮರೇತ್॥
ಪುಂಡ್ರಾನಾಂ ಧಾರಣೆ ಕಾಲೇಕೃದ್ದ್ವೋಲ್ಕಾದಿ ಹರಿಂಸ್ಮರೇತ್॥
ಏವಮಾದಿ ಪದಾರ್ಥೇಷು ತತ್ತದ್ರೂಪೇಷುಸಂಸ್ಥಿತಂ।
ಹರಿಂಧ್ಯಾತ್ವಾ ಮುಚ್ಯತೇತು ನರೋ ಹತ್ಯಾದಿ ಕಿಲ್ಬಿಷೈಃ ॥ ಇತ್ಯಾದಿ.

"ಪ್ರಾತಃಕಾಲ ಏಳುವಾಗ ನಾರಾಯಣ, ತುಲಸೀವಂದನ ಕಾಲದಲ್ಲಿ ಶ್ರೀಕೃಷ್ಣ, ಶೌಚಕಾಲದಲ್ಲಿ ಕೇಶವ, ಮೃತ್ತಿಕಾಶೌಚ ಕಾಲದಲ್ಲಿ ತ್ರಿವಿಕ್ರಮ,

ದಂತಧಾವನ ಕಾಲದಲ್ಲಿ ಅಷ್ಟಭುಜಉಳ್ಳಹರಿ, ಮುಖಪ್ರಕ್ಷಾಲನ ಕಾಲದಲ್ಲಿ ಮಾಧವ, ಗೋಪಿಚಂದನ ಮುದ್ರಾಧಾರಣ ಕಾಲದಲ್ಲಿ ಕೃದ್ಧೋಲ್ಕಾದಿ ಪಂಚರೂಪಗಳು, ವಸ್ತ್ರಧಾರಣ ಕಾಲದಲ್ಲಿ ಉಪೇಂದ್ರ, ಹೊರಗೆ ಹೊರಡುವಾಗ ಗರುಡಧ್ವಜ, ಊಟಮಾಡುವಾಗ ಮಕ್ಕಳೊಡನಾಡುವಾಗ, ಮಡದಿಯ ಜೊತೆಯಲ್ಲಿರುವಾಗ, ಹಗಲು, ಸಂಧ್ಯಾಕಾಲ ರಾತ್ರಿ ಹೀಗೆ ಅನೇಕಕಾಲ .ಕೆಲಸಗಳಲ್ಲಿ ಆಯಾ ನಾಮ ರೂಪಗಳನ್ನು ಸ್ಮರಿಸಬಹುದು. ಇದನ್ನು ಓದುವದು ಸುಲಭ ಇದೆಲ್ಲವನ್ನೂ ಅನುಷ್ಠನಕ್ಕೆ ತರುವದು ಶ್ರಮಸಾಧ್ಯವಿದೆ. ಒಂದೊಂದನ್ನೇ ಕೆಲವು ದಿನ ಅಭ್ಯಾಸಮಾಡಿ ಜೀವನದಲ್ಲಿ ಅಳವಡಿಸಬೇಕು. ಆಗ ನಾವು "ಆವಿಷ್ಟಚಿತ್ತ"ರಾಗಲು ಸಾಧ್ಯ. ಇದರಲ್ಲಿ ಹರಿಪ್ರೀತಿ ಇದೆ. (ವಿಜಯದಾಸರ ಸುಳಾದಿಯನ್ನೂ ನೋಡಬೇಕು.)

ಭಾಗವತ ತಾತ್ಪರ್ಯವು ಈ 'ಆವಿಷ್ಟಚಿತ್ತ'ತ್ವವನ್ನು ಪುಷ್ಟೀಕರಿಸುತ್ತದೆ.

"ಸರ್ವಕ್ರಿಯಾಸು ಕರ್ತೃತ್ವ ಪೂಜ್ಯತ್ವೇನ ಜನಾರ್ದನಮ್।
ಯೋವೇತ್ತಿನೈತಿ ಸಂಸಾರಂ ತತ್ಪ್ರಸಾದಾನ್ನಸಂಶಯ ॥ಇತಿ॥
ಭಾ.ತಾ.ನಿರ್ಣಯ.

"ಸರ್ವಕ್ರಿಯೆಗಳನ್ನು ಮಾಡಿ ಮಾಡಿಸುವನು ಅವನೇ ಆದ್ದರಿಂದ ಅವನ ಅನಂತನಾಮ ರೂಪ ವಿಭವಗಳನ್ನು ಸ್ಮರಿಸತಕ್ಕ ಮನುಷ್ಯನು ಅವನ ಪ್ರಸಾದದಿಂದ- ಪುನಃ ಸಂಸಾರವನ್ನೈದುವದಿಲ್ಲ."

ಏನ್ರೀ, ಇವೆಲ್ಲವುಗಳನ್ನು ಕೆಲಕಾಲ ವ್ರತ ನಿಯಮಾದಿಗಳಂತೆ ಆಚರಿಸಿ ಬಿಟ್ಟುಬಿಡಬಹುದೋ ಅಥವಾ ಸದಾ ಮಾಡುತ್ತಲೇ ಇರಬೇಕೋ, ಭಾಗವತಕಾರರೇ ಉತ್ತರ ಹೇಳುತ್ತಾರೆ.

"ಯಥಾಯಥಾತ್ಮಾ ಪರಿಮೃಜ್ಯತೇಸೌ ಮತ್ಪುಣ್ಯಗಾಥಾ ಶ್ರವಣಾಭಿಧಾನೈಃ।
ತಥಾತಥಾ ಪಶ್ಯತಿ ತತ್ವಸೂಕ್ಷ್ಮಂ ಚಕ್ಷುರ್ಯಥೈವಾಂಜನ ಸಂಪ್ರಯುಕ್ತಂ"॥

"ನನ್ನ ಪುಣ್ಯಕಥಾಶ್ರವಣಾದಿ ಪುನಃ ಪುನಃ ಸಾಧನಗಳಿಂದ ವೃದ್ಧಿಹೊಂದಿದ ಮನಸ್ಸು ಶೋಧಿತವಾಗಿ ಕಲ್ಮಷರಹಿತವಾಗುತ್ತದೆ. ಹೀಗೆ ಬುದ್ಧಿ ಹೊಂದಿದ ಮನಸ್ಸಿಗೆ ಹೊಸ ಹೊಸ ತತ್ವಸೂಕ್ಷ್ಮಗಳು ತಿಳಿಯುತ್ತವೆ. ಅಂಜನಾದಿಗಳಿಂದ ಸಂವಲಿತವಾದ ಚಕ್ಷುರಿಂದ್ರಿಯವು

ಅತಿಸೂಕ್ಷ್ಮ ಪದಾರ್ಥಗಳನ್ನು ಗ್ರಹಣ ಮಾಡುವಂತೆ ಮನಸ್ಸೂ ಸಹ ಹಾಗೆ ಕೆಲಸಮಾಡುತ್ತದೆ. ಅಂದರೆ ಶ್ರವಣಾದ್ಯಭ್ಯಾಸ ಜನ್ಯ ಭಕ್ತಿಯೇ ಉಪಾಯವೆಂದು ತಿಳಿಯಬೇಕು. ಇದು ಕೇವಲ ಶೀಷ್ಯನ ಬುದ್ಧಿ ಚಾತುರ್ಯದಿಂದ ಸಂಪಾದಿಸತಕ್ಕ ವಿಷಯವಲ್ಲ. ಸಮೀಚೀನ ಗುರುಗಳ ಉಪದೇಶ ಮತ್ತು ಸಹಾಯಬೇಕು."

ಗುರುವಿನಿಂದ ಬ್ರಹ್ಮಜ್ಞಾನೋಪದೇಶ ಪಡೆದು, ಭಾಗವತ ಧರ್ಮಗಳನ್ನು ಯಥಾಶಕ್ತಿ ಜಿಗುಪ್ಸೆ, ಬೇಸರವಿಲ್ಲದೇ ಸುಲಭೋಪಾಯಗಳಿಂದ ಶ್ರೀಹರಿಯ ಸಾಕ್ಷಾತ್ಕಾರ ಪಡೆಯತಕ್ಕ ಸಾಧನಾದಿಗಳನ್ನು ನಿರಂತರ ಆಚರಿಸಬೇಕು.

ಈ ಕಲಿಯುಗದಲ್ಲಿ, ಇತರಯುಗಗಳಲ್ಲಿ ಮಾಡಿದಂತೆ ಕಠಿಣವಾದ ತಪಶ್ಚರ್ಯಾದಿಗಳನ್ನೂ ವ್ರತಗಳನ್ನೂ ಆಚರಿಸಲು ಶಕ್ತಿ ಸಾಲದು, ಆಯಸ್ಸು ಸಾಲದು ಚೇತನರು ಕಾಲಬಲದಿಂದ ನಿರ್ವಿಣ್ಣರಾಗಿದ್ದಾರೆ.

ಏಕಾಂತ ಸ್ಥಳವನ್ನರಸಿ ಕಾಡಿಗೆ ಹೋಗುವ ಹಾಗಿಲ್ಲ. ಅಲ್ಲೆಲ್ಲ ಅರಣ್ಯಾಧಿಕಾರಿಗಳು (FOREST DEPTT) ಇರುತ್ತಾರೆ. ಅಲ್ಲಿಗೆ ಆಕಸ್ಮಿಕ ತಪಸ್ಸಿಗೆ ಹೋದರೆ, ಗಂಧದ ಕಟ್ಟಿಗೆಗೋ, ಖನಿಜಾದಿಗಳಿಗೋ ಇವರು ಬಂದಿರುವರೆಂಬ ಆಪಾದನೆಯಿಂದ ನಮ್ಮನ್ನು ಆ ಸ್ಥಳದಿಂದ ಊರಿಗೆ ಕಳಿಸುತ್ತಾರೆ. ಹಠಮಾಡಿ ಅಲ್ಲಿಯೇ ಇದ್ದರೆ ಕ್ರಮ ಕೈಗೊಳ್ಳುತ್ತಾರೆ. ಹೀಗಿದೆ ಕಲಿಯುಗದಲ್ಲಿ ನಮ್ಮ ಈ ಕಾಲ.

ಆದ್ದರಿಂದ ನಮ್ಮ ಎಲ್ಲ ಸಮಸ್ಯೆಗಳಿಗೂ ಶ್ರೀಮದ್ಭಾಗವತದ ಕೊನೆಯ ವಾಕ್ಯವೇ ಅಂತಿಮ ಪರಿಹಾರ ಮತ್ತು ಉತ್ತರ. ಅದನ್ನೇ ಮನನಮಾಡುವಾ.

"ಭವೇಭವೇಯಥಾಭಕ್ತಿಃ ಪಾದಯೋಸ್ತವ ಜಾಯತೇ॥
ತಥಾಕುರುಷ್ವದೇವೇಶ ನಾಥಸ್ತ್ವಂ ನೋಯತಃ ಪ್ರಭೋ"॥
"ನಾಮಸಂಕೀರ್ತನಂಯಸ್ಯ ಸರ್ವಪಾಪಪ್ರಣಾಶನಮ್।
ಪ್ರಣಾಮೋದುಃಖಶಮನಸ್ತಂ ನಮಾಮಿ ಹರಿಂ ಪರಮ್॥"

"ಹೇ ಪ್ರಭೊ ಯಾವ ಸಹಕಾರಿ ಕಾರಣಗಳಿಂದ / ನಿನ್ನ ದಯೆಯಿಂದ ಪ್ರತಿ ಜನ್ಮಗಳಲ್ಲಿ ನಮಗೆ ನಿನ್ನ ಪಾದಾರವಿಂದದಲ್ಲಿ ನಿಶ್ಚಲವಾದ ಭಕ್ತಿ ಉಂಟಾಗುತ್ತದೋ ಆ ಪ್ರಕಾರ ನೀನು ನಮಗೆ ಅನುಗ್ರಹಮಾಡೆಂದು ಪ್ರಾರ್ಥನೆ."

"ಯಾರ ನಾಮ ಸಂಕೀರ್ತನದಿಂದ ಸರ್ವಪಾಪಗಳೂ ನಾಶವಾಗುತ್ತವೋ ಸಾಂಸಾರಿಕ ದುಃಖಾದಿಗಳು ಉಪಶಮನವಾಗುತ್ತವೋ ಅಂಥ ಸರ್ವೋತ್ತಮನಾದ ಶ್ರೀಹರಿಗೆ ಅನಂತ ವಂದನೆಗಳು."

ಸಮಗ್ರ ಭಾಗವತವು ಅಲ್ಪಭಕ್ತರನ್ನೂ ಸಹ ಪುಷ್ಟೀಕರಿಸುವ ಉತ್ತೇಜನ ಕೊಡುವ ಇಂಥ ಅನೇಕ ಶ್ಲೋಕಗಳಿಂದ ತುಂಬಿದೆ. ಲೇಖನ ದೃಷ್ಟಿಯಿಂದ ಕೇವಲ ಕೆಲವೇ ಶ್ಲೋಕಗಳನ್ನು ಆರಿಸಿ ಬಹಳಷ್ಟು ಬಿಟ್ಟಿದ್ದೇನೆ.

ಈ ಪ್ರಕಾರ ಮೋಕ್ಷೇಚ್ಛು ಒಂದು ಸಲ ಪರಮಾತ್ಮನ ಪಾದಾರವಿಂದಗಳಲ್ಲಿ ಸರ್ವಾತ್ಮನಾ ತನುಮನಗಳನ್ನರ್ಪಿಸಿ ಭಾಗವತೋಕ್ತ ಧರ್ಮಗಳನ್ನು ಯಥಾಶಕ್ತಿ ಗುರೂಪದಿಷ್ಟ ಧಿಶೆಯಲ್ಲಿ ಶ್ರದ್ಧೆಯಿಂದ ಶ್ರವಣ ಮನನಾದಿ – ದ್ವಾರಾ ಸಂಗ್ರಹಿಸಿ ನಿತ್ಯಸಾಧನಾನುಷ್ಠಾನುಗಳಲ್ಲಿ ಅಳವಡಿಸಿ ಅತಿಪ್ರಯಾಸವಿಲ್ಲದೇ ಆತ್ಮಸಂತೋಷದಿಂದ ದಿನೇದಿನೇ ಜ್ಞಾನಭಕ್ತಿ ವೈರಾಗ್ಯದಿಗಳನ್ನು ಅಭಿವೃದ್ಧಿಗೊಳಿಸುತ್ತ, ಸಜ್ಜನರ ಸಂಗದಲ್ಲಿ ದಿನಗಳೆಯಲು ಯತ್ನಮಾಡಬೇಕು. ನೈಜಭಕ್ತನನ್ನು ಭಗವಂತನು ಜನ್ಮಜನ್ಮಗಳಲ್ಲಿ ಅಧ್ಯಾತ್ಮಮಾರ್ಗದಲ್ಲಿ ಮುಂದುವರಿಸುವ ಭರವಸೆ ಕೊಟ್ಟಿರುವದರಿಂದ, ಒಂದಿಲ್ಲೊಂದು ದಿನ ಸಾಧನ ಸಂಪೂರ್ತಿಯಾದ ಮೇಲೆ ತನ್ನ ದರ್ಶನ ಕೊಡುವನೆಂದು ಶಾಸ್ತ್ರಗಳು ತಿಳಿಸುತ್ತವೆ. ಯಾರಿಗೆ ಭಗವದ್ದರ್ಶನವೋ ಅವರಿಗೆ ಮೋಕ್ಷ ಸಿದ್ಧ. ಭಗವದ್ದರ್ಶನ ಮಾಡಿದವರು ಅಪರೋಕ್ಷ ಜ್ಞಾನಿಗಳೆನಿಸಿಕೊಳ್ಳುತ್ತಾರೆ. ಅವರ ಹೆಸರು ಮೋಕ್ಷದ ಗೆಜಿಟ್‌ನಲ್ಲಿ ಸೇರುವದು. ಜ್ಞಾನಿಗಳು ಅಪರೋಕ್ಷ ಜ್ಞಾನಾನಂತರವೂ ಸಾಧನ ಮಾಡುತ್ತಲೇ ಇರುವರು. ಅದರ ಅಭ್ಯಾಸಬಲವೆನ್ನಿ ಅಥವಾ ಮೋಕ್ಷದಲ್ಲಿ ಆನಂದೋದ್ರೇಕಕ್ಕಾಗಿ ಅನ್ನಿ.

ಭಾಗವತವನ್ನು ನೋಡಿದರೆ ಒಂದು ರೀತಿ ಮನೋದಾರ್ಢ್ಯ ಉತ್ಪನ್ನವಾಗುವದು. ಭಗವಂತನಲ್ಲಿ ಭಕ್ತಿ ಇದ್ದವನು ಐಹಿಕ ಆಮುಷ್ಮಿಕ ಸೌಖ್ಯ ಪಡೆಯುವನು. ಶ್ರೀಮದ್ಭಾಗವತ ಪೂರ್ತಿ ಇಂಥ ಭಕ್ತ ವ್ಯಕ್ತಿಗಳೇ ತುಂಬಿದ್ದಾರೆ. ಧ್ರುವ – ಪ್ರಹ್ಲಾದರಂಥ ಬಾಲಕರು ರಕ್ಷಿತರಾಗಿದ್ದಾರೆ. ಲೆಖ್ಖವಿಲ್ಲದಷ್ಟು ರಾಜರುಗಳು ಅನುಗ್ರಹೀತರಾಗಿದ್ದಾರೆ. ಅನುಗ್ರಹೀತ ಋಷಿಮುನಿಗಳದಂತೂ ದೊಡ್ಡ ಪಟ್ಟಿ. ಅಜಗರ, ಗಜರಾಜ, ಮೊಸಳೆ ಇತ್ಯಾದಿ ವನ್ಯ – ಜಲಚರ ಪ್ರಾಣಿಗಳು ಪರಮಾತ್ಮನ ದಯಾಪಾತ್ರರು. ಸುದಾಮನಂಥ ದರಿದ್ರರು ಭಗವಂತನ ದಯಾ ದೃಷ್ಟಿಗೆ ಹೊರತಲ್ಲ. ಶ್ರೀಹರಿ ತನ್ನ ನಾಮಮಹಿಮೆಯನ್ನು ಅಜಾಮಿಳನಿಗೆ ಅನುಗ್ರಹಮಾಡಿ ತೊರಿಸಿಕೊಟ್ಟ.

ಒಬ್ಬರಲ್ಲ ಇಬ್ಬರಲ್ಲ ಅಸಂಖ್ಯಾತ ಜೀವರಾಶಿಗಳು ಭಗವಂತನ ಮಾಹಾತ್ಮ್ಯ ಕಥನಾದಿಗಳನ್ನೂ ತಿಳಿದು ಜ್ಞಾನಪಡೆದು – ಅನನ್ಯ ಭಕ್ತಿಯಿಂದ ಅವನ ಅನುಗ್ರಹಕ್ಕೆ ಪಾತ್ರರಾಗಿ ಸಂಸಾರ ಚಕ್ರದಿಂದ ಪಾರಾಗಿ ಮೋಕ್ಷದ ಗೆಜಿಟ್‌ನಲ್ಲಿ ಸೇರಿಯಾಗಿದ್ದಾರೆ. ಈ ಮುಂದು ಹೋದವರೇ ನಮಗೆ ಮಾರ್ಗದರ್ಶಕರು. ಶ್ರೀಮದ್ಭಾಗವತವೇ ಮೋಕ್ಷಮಾರ್ಗದೀಪಿಕೆ. ಜೀವನದಲ್ಲಿ ಒಬ್ಬ ವ್ಯಕ್ತಿಗೆ ಯಾವಾಗ ಈ ಪ್ರಜ್ಞೆ ಬಂದರೂ ಸರಿ ಭಾಗವತವನ್ನು ಹಿಡಿದರೆ ಭಗವಂತನನ್ನು ಹಿಡಿದ ಹಾಗೆ. ಒಂದಿಲ್ಲೊಂದು ದಿನ ಅವನ ದರ್ಶನ ಅನುಗ್ರಹ ಅತ್ಯರ್ಥಪ್ರಸಾದ – ಮೋಕ್ಷ ಖಚಿತವೆಂಬ ಆಧ್ಯಾತ್ಮಿಕ ಆಶಾಕಿರಣಗಳು ಮೂಡಿಬರುವದರಲ್ಲಿ ಸಂದೇಹವೇ ಇಲ್ಲ.

‘ಓಂ ತತ್ಸತ್

# ಆಧ್ಯಾತ್ಮಿಕ ಆಶಾಕಿರಣಗಳು ಭಾಗ - 4

ಈ ಶೀರ್ಷಿಕೆಯ ಲೇಖನದ ಪ್ರಥಮಭಾಗದಲ್ಲಿ ಯಾರೊಬ್ಬ ಸಾಧಕನು, ಜೀವನದಲ್ಲಿ ಬಹಳ ವಿಳಂಬವಾಗಿ ಭಗವಂತನ ಅಸ್ತಿತ್ವದ ಬಗ್ಗೆ ಪ್ರಜ್ಞೆಮೂಡಿ ಅವನ ಮಹತ್ವಾದಿಗಳನ್ನು ಅರಿತು, ಆತನನ್ನು ಸಾಕ್ಷಾತ್ಕರಿಸುವ ಉದ್ದೇಶ್ಯದಿಂದಲೂ ಮೋಕ್ಷಾರ್ಥಿಯಾಗಿಯೂ ಸಾಧನ ಮಾಡಲು ಪ್ರಯತ್ನಶಾಲಿಯಾದರೆ ಅವನಿಗೆ ದೇವ, ದೇವತೆಗಳು ಶಾಸ್ತ್ರಗಳು ಸಾಕಷ್ಟು ಪ್ರೋತ್ಸಾಹಿಸುತ್ತವೆ. ಇವನ ಪ್ರವೃತ್ತಿಯನ್ನು ಅನುಮೋದಿಸುತ್ತವೆ. ಇವನಲ್ಲಿ ನೈಜಶ್ರದ್ಧಾಭಕ್ತಿಗಳು ಮಾತ್ರ ಇರಬೇಕು. ಆಶಾಕಿರಣಗಳು ಇವನ ಕಡೆಗೆ ಪ್ರಸರಿಸುತ್ತವೆ.

ಪ್ರಥಮ ಭಾಗಲ್ಲಿ ನಾವು ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರು ರಚಿಸಿದ "ಶ್ರೀಕೃಷ್ಣಾಮೃತ ಮಹಾರ್ಣವ" ದಿಂದಲೂ, ದ್ವಿತೀಯ ಭಾಗದಲ್ಲಿ ಶ್ರೀಕೃಷ್ಣ ಪರಮಾತ್ಮನು ಅರ್ಜುನನಿಗೆ ಉಪದೇಶ ಮಾಡಿದ ಲೋಕಪ್ರಸಿದ್ಧ ಶ್ರೀಮದ್ಭಗವದ್ಗೀತೆ, ಗೀತಾರ್ಥ ಬೋಧಕ ಗೀತಾಭಾಷ್ಯ ಮತ್ತು ಗೀತಾತಾತ್ಪರ್ಯಗಳಿಂದಲೂ, ತೃತೀಯ ಭಾಗದಲ್ಲಿ ಶ್ರೀಮದ್ಭಾಗವತ ತದ್ಭಾವಬೋಧಕ ಭಾಗವತ ತಾತ್ಪರ್ಯ ನಿರ್ಣಯದಿಂದಲೂ ಹೊರಹೊಮ್ಮಿ ಬಂದ ಆಶಾಕಿರಣಗಳಿಂದ ಅತ್ಯಂತ ಪ್ರೋತ್ಸಾಹ ಹೊಂದಿದೆವು.

ಪ್ರಕೃತ ಈ ನಾಲ್ಕನೆಯ ಭಾಗದಲ್ಲಿ ಶ್ರೀ ವಿಷ್ಣು ಪುರಾಣ ಮತ್ತು ಶ್ರೀ ವಿಷ್ಣುರಹಸ್ಯ ಗ್ರಂಥಗಳಿಂದ ನಮ್ಮ ಕಡೆಗೆ ಧಾವಿಸಿ ಬರತಕ್ಕ ಆಧ್ಯಾತ್ಮಿಕ ಆಶಾಕಿರಣಗಳನ್ನು ಸ್ವಾಗತಿಸುವಾ.

ಈ ಗ್ರಂಥಗಳ ಕಡೆಗೆ ದೃಷ್ಟಿ ಹರಿಸಿದಾಗ ಪ್ರಶ್ನೆರೂಪವಾದ ಈ ಕೆಳಗಿನ ಶ್ಲೋಕಗಳು ಕಂಡುಬರುತ್ತವೆ.-

ಮೈತ್ರೇಯ ಉವಾಚಃ

"ಸೋಽಹ ಮಿಚ್ಛಾಮಿ ಧರ್ಮಜ್ಞ ಶ್ರೋತುಂ ತ್ವತ್ತೋ ಯಥಾಜಗತ್।
ಬಭೂವ ಭೂಯಶ್ಚ ಯಥಾ ಮಹಾಭಾಗ ಭವಿಷ್ಯತಿ ॥1-1-4
ಲೀನಮಾಸೀದ್ಯಥಾಯತ್ರ ಲಯಮೇತದ್ಭವಿಷ್ಯತಿ"॥ 1-1-5

"ವಿಷ್ಣುಪುರಾಣವು ಶ್ರೀಬಾದರಾಯಣರಿಂದ ರಚಿಸಿದ ಅಷ್ಟಾದಶ ಪುರಾಣಗಳಲ್ಲಿ ಮೂರನೆಯದು. ಇದು ಮೈತ್ರೇಯ – ಪಾರಾಶರರ ಸಂವಾದರೂಪದಲ್ಲಿದೆ. ಮೈತ್ರೇಯರು ಪ್ರಶ್ನಕರು. ಪಾರಾಶರ ಮುನಿಗಳು ಉತ್ತರಿಸುವವರು. ಪ್ರಥಮಾಂಶದ ಪ್ರಥಮಾಧ್ಯಾಯಾದಲ್ಲಿ ಮೈತ್ರೇಯರು ಕೇಳುತ್ತಾರೆ. "ಧರ್ಮಜ್ಞರಾದ ಮಹಾತ್ಮರೇ, ಈ ಜಗತ್ತು ಹೇಗೆ ಹುಟ್ಟಿತು? ಮುಂದೆ ಏನಾದೀತು? ಈ ಜಗತ್ತಿಗೆ ಉಪಾದಾನ ಕಾರಣಯಾವದು? ಚರಾಚರಾತ್ಮಕವಾದ ಇದು ಯಾರಿಂದ ಸೃಷ್ಟಿಸಲ್ಪಟ್ಟಿತು? ಮೊದಲು ಎಲ್ಲಿ ಅಡಗಿತ್ತು? ಮುಂದೆ ಎಲ್ಲಿ ಲಯ ಹೊಂದುತ್ತದೆ? ಇತ್ಯಾದಿ."

ಮೈತ್ರೇಯ ಉವಾಚ :

"ಅಙ್ಗುಲಸ್ಯಾಷ್ಟಭಾಗೋಽಪಿ ನಸೋಽಸ್ತಿ ಮುನಿಸತ್ತಮ।
ನಸಂತಿ ಪ್ರಾಣಿನೋಯತ್ರ ಕರ್ಮಬಂಧನಿಬಂಧನಾ ॥3.7.4।
ಸರ್ವೇಚೈತೇ ವಶಂಯಾಂತಿ ಯಮಸ್ಯಭಗವಾನ್ ಕಿಲ।
ಆಯುಷೋಽನ್ತೇ ತಥಾಯಾನ್ತಿ ಯಾತನಾಸ್ತತ್ಪ್ರಚೋದಿತಾ ॥3.7.5॥
ಸೋಹಮಿಚ್ಛಾಮಿ ತತ್‌ಶ್ರೋತುಂ ಯಮಸ್ಯವಶವರ್ತಿನಃ।
ನ ಭವಂತಿ ನರಾಯೇನ ತತ್ಕರ್ಮಕಥಯಸ್ವಮೇ ॥3.7.7॥
(ವಿಷ್ಣುಪುರಾಣ)

ಮೂರನೆಯ ಅಂಶದ ಏಳನೆಯ ಅಧ್ಯಾಯದಲ್ಲಿ ಮೈತ್ರೇಯರು ಹೀಗೆ ಪ್ರಶ್ನೆ ಮಾಡುತ್ತಾರೆ. "ಹೇ ಮುನಿವರರೇ, ಕರ್ಮಬಂಧದಲ್ಲಿ ಸಿಕ್ಕಿಕೊಂಡಿರುವ ಈ ಪ್ರಾಣಿಗಳಿಲ್ಲದಿರುವ, ಒಂದು ಅಂಗುಲದ ಎಂಟರಲ್ಲೊಂದಂಶದ ಸ್ಥಳವೂ ವಿಶ್ವದಲ್ಲಿಲ್ಲ. ಹೇ, ಭಗವಾನ್, ಆಯುಸ್ಸು ಕಳೆದಮೇಲೆ ಇವರೆಲ್ಲರೂ ಯಮನ ವಶಕ್ಕೆ ಒಳಗಾಗಿ ಆತನು ಕೊಡುವ ಯಾತನೆಗೆ ಒಳಗಾಗುತ್ತವೆಯಲ್ಲವೇ? ಅನಂತರ ಯಾತನೆಗಳು ಕಳೆದ ಮೇಲೆ

ದೇವಮಾನವಾದಿ ಯೋನಿಗಳಲ್ಲಿ ಈ ಜೀವಿಗಳು ಮತ್ತೆ ಸುತ್ತಾಡುತ್ತವೆ. ಎಂಬದು ಶಾಸ್ತ್ರೀಯ ಸಿದ್ಧಾಂತವಾಗಿದೆ. ಆದ್ದರಿಂದ ಯಾವ ಕರ್ಮವನ್ನು ಮಾಡಿದರೆ ಜನರು ಯಮನ ವಶವರ್ತಿಗಳಾಗುವದಿಲ್ಲವೋ ಆ ಕರ್ಮವು ಯಾವದೆಂದು ಕೇಳಲು ಬಯಸುತ್ತೇನೆ. ಅದನ್ನು ದಯಮಾಡಿ ಹೇಳಬೇಕು.''

ಋಷಯಃ ಊಚುಃ –

"ಯಸ್ಮಿನ್ ಶ್ರುತೇ ಶ್ರುತಂ ಸರ್ವಂ ಯಸ್ಮಿನ್ ಕೃತೇಽಖಿಲಂಕೃತಂ॥
ಯದಜ್ಞಾನೇನ ಕಿಂಚಿತ್ ಜ್ಞೋಽಯಸ್ಮಿನ್ ಜ್ಞಾತ್ಯೇಚ ಸರ್ವವಿತ್ ॥1.1.4 ॥
ತಾದೃಶಂಬ್ರೂಹಿನಃ ಕಿಂಚಿತ್ ಕಿಂವ್ಯಥಾವಚನಾತ್‌ಫಲಂ।
ಕ್ಷಣೇ ಕ್ಷಣೇ ಪ್ರಯಾತ್ಯೇತ ದಾಯುರ್ನೃಣಾಂ ಮಿತಂ ಚ ತತ್॥
ತಸ್ಮಾತ್ ತತ್ಸಾರ್ಥಕಂ ಯೇನ ತಾದೃಶಂ ಸುಧಿಯಾಸದಾ।
ಶ್ರೋತವ್ಯಂ ಚಾಪಿ ವಕ್ತವ್ಯಂ ಕರ್ತವ್ಯಂ ಚ ತದೇವಹಿ॥

(ವಿಷ್ಣುರಹಸ್ಯ)

'ಶೌನಕಾದಿ ಋಷಿಗಳು ಸೂತಾಚಾರ್ಯರನ್ನು ಕುರಿತು ಪ್ರಶ್ನೆ ಮಾಡುತ್ತಾರೆ. ಹೇ ವಕ್ತೃಶ್ರೇಷ್ಠರಾದ ಸೂತಾಚಾರ್ಯರೇ, ದುಃಖ ಸಾಗರದಲ್ಲಿ ಮುಳುಗಿರುವ ಜೀವರಿಗೆ ಸಂಸಾರದಿಂದ ಬಿಡುಗಡೆಯಾಗಿ ನಿತ್ಯಾನಂದರೂಪವಾದ ಪರಮಹಿತವು ಹೇಗೆ ದೊರೆಯುತ್ತದೆ. ಯಾವದರ ಶ್ರವಣದಿಂದ ಕೇಳಬೇಕಾದ ಸರ್ವವನ್ನೂ ಕೇಳಿದಂತಾಗುವದೋ ಬೇರೇನೂ ಕೇಳಬೇಕಾದದು ಉಳಿಯುವದಿಲ್ಲವೋ ಮತ್ತು ಯಾವದನ್ನು ಮಾಡಿದರೆ ಸರ್ವವನ್ನೂ ಮಾಡಿದಂತಾಗುವದೋ; ಯಾವದನ್ನು ತಿಳಿದರೂ ಅಲ್ಪಜ್ಞನೆನಿಸುವನೋ ಮತ್ತು ಯಾವದನ್ನು ತಿಳಿಯುವದರಿಂದ ಸರ್ವವನ್ನು ತಿಳಿದಂತಾಗುವದೋ ನಮಗೆ ಅದನ್ನು ಹೇಳುವವರಾಗಿರಿ.'

ಬ್ರಹ್ಮೋವಾಚ:

ಕಸ್ಯಾಂಮೂರ್ತೌ ಪ್ರಕರ್ತವ್ಯಂ ಪೂಜನಂ ತವವೈಷ್ಣವೈಃ।
ಕಥಂಚೈತತ್ ಪ್ರಕರ್ತವ್ಯಂ ಭಗವನ್ ತದ್ವದಸ್ವಮೇ॥

**ಇಮೇ ನಾನಾ ವಿಧಾ ಜೀವಾಃ ನಾನಾಕಾರಶ್ಚಸರ್ವಶಃ।**
**ಕಥಂ ಮೋಕ್ಷಂಪ್ರಾಪ್ನುವಂತಿ ನಿರ್ಭದ್ಧಾನಾದಿಕರ್ಮಣಾ ॥**

(ವಿಷ್ಣುರಹಸ್ಯ)

"ಚತುರ್ಮುಖ ಬ್ರಹ್ಮದೇವರು - ಶ್ರೀಹಯಗ್ರೀವ ದೇವರನ್ನು ಕುರಿತು ಪ್ರಶ್ನೆಮಾಡುತ್ತಾರೆ. ಹೇ ಪ್ರಭೋ, ವಿಷ್ಣು ಭಕ್ತರು ನಿನ್ನನ್ನು ಯಾವ ಪ್ರತಿಮೆಯಲ್ಲಿ ಪೂಜಿಸಬೇಕು ಮತ್ತು ಹೇಗೆ ಪೂಜಿಸಬೇಕು. ನನಗಾಗಿ ತಿಳಿಸಬೇಕೆಂದು ಬ್ರಹ್ಮದೇವರ ಪ್ರಾರ್ಥನೆ.

ಇನ್ನೊಂದು ಸಂದರ್ಭದಲ್ಲಿ ಪುನಃ ಬ್ರಹ್ಮದೇವರು ಪ್ರಶ್ನಿಸುತ್ತಾರೆ. ಹೇ, ದೇವ, ಅನಾದಿಕಾಲದಿಂದ ಕರ್ಮದಿಂದ ಬಂಧಿತರಾಗಿರುವ ನಾನಾ ಆಕಾರ ಉಳ್ಳ ವಿವಿಧ ಜೀವರೆಲ್ಲರೂ ಹೇಗೆ ಮೋಕ್ಷವನ್ನು ಹೊಂದುತ್ತಾರೆ."

ವಿಷ್ಣು ಪುರಾಣ, ವಿಷ್ಣು ರಹಸ್ಯಗಳಲ್ಲಿ ಇಂಥ ಅನೇಕ ವಿಷಯಗಳ ಸಂಬಂಧವಾಗಿ ಮುಮುಕ್ಷುಜೀವರು ಜ್ಞಾನಿಗಳನ್ನು / ದೇವತೆಗಳನ್ನು ಮತ್ತು ದೇವತೆಗಳು ದೇವಾಧಿ ದೇವನನ್ನು ಪ್ರಶ್ನೆ ಮಾಡಿದ್ದಾರೆ. ಇಂಥ ಪ್ರಶ್ನೆಗಳು ಮಾನವನ ಜೀವನದಲ್ಲಿ ಒಂದಿಲ್ಲೊಂದು ದಿನ ಉದ್ಭವಿಸತಕ್ಕವೇ. ಇಂಥ ಆಧ್ಯಾತ್ಮಿಕ ಪ್ರಶ್ನೆಗಳಿಗೆ ನವೀನ ಗ್ರಂಥಗಳಲ್ಲಿ ಉತ್ತರ ಸಿಗಲಾರದು. ಪ್ರಾಚೀನ ವಿಚಾರದವರು ಮತ್ತು ಆಧುನಿಕ ವಿಚಾರ ಸರಣಿಯವರು ಇಂಥ ಪ್ರಶ್ನೆಗಳಿಗೆ ಸಮಾಧಾನಗಳನ್ನು ಆ ಗ್ರಂಥಗಳಲ್ಲಿಯೇ ಹುಡುಕಬೇಕು. ಈ ಪ್ರಶ್ನೆ ಸಮುದಾಯಗಳನ್ನು ನೋಡಿದರೆ ಕಾಲ ಪ್ರವಾಹದಲ್ಲಿ ಭೂಮಿಯಲ್ಲಿ ಜನಿಸತಕ್ಕ ಮುಮುಕ್ಷುಗಳ ಪರವಾಗಿ ಕೇಳಿದಂತಿದೆ. ಈ ಪ್ರಶ್ನೆ ಸಮುದಾಯಗಳಿಗೆ ಜ್ಞಾನಿಗಳು, ದೇವತೆಗಳು, ಭಗವಂತನೂ ನೀಡಿದ ಉತ್ತರಗಳು, ಉಪದೇಶಗಳು, ಸಮಾಧಾನಗಳು ಅತ್ಯಂತ ಸೂಕ್ತವಾಗಿಯೂ ಹೇರಳವಾಗಿಯೂ ಇವೆ. ಸಂಸ್ಕೃತ ವಾಙ್ಮಯ ಭಾಂಡಾರವು ವಿಚಾರಪೂರ್ಣವಚನಗಳಿಂದ ತುಂಬಿದೆ. ಮಾನವನ ಉದ್ಧೃತಿಗೆ ಬೇಕಾದ ಸಕಲಮಾರ್ಗದರ್ಶನಗಳು ಮತ್ತು ಪ್ರೋತ್ಸಾಹ ನುಡಿಗಳು ಆಕಾಂಕ್ಷಿ ಮುಮುಕ್ಷು ಜೀವರ ಕಡೆಗೆ ಸಾರಿ ಬರುತ್ತವೆ. ಪ್ರಕೃತ ಮೇಲೆ ಹೇಳಿದ ಆಕರ ಗ್ರಂಥಗಳಿಂದ ಸಾಧಕರ ಕಡೆಗೆ ಸೂಸಿ ಬರುವ ಆಧ್ಯಾತ್ಮಿಕ ಆಶಾಕಿರಣಗಳನ್ನು ಸ್ವಾಗತಿಸುವಾ.

ವಿಷ್ಣುಪುರಾಣದಲ್ಲಿ ಚಾತುರ್ವರ್ಣಗಳಿಗೆ ಮತ್ತು ಚತುರಾಶ್ರಮಗಳಿಗೆ ಬಹಳ ಮಹತ್ವ ಹೇಳಿದ್ದಾರೆ. ವಿಹಿತ ಧರ್ಮಕರ್ಮಗಳನ್ನು ತತ್ತದ್ವರ್ಣದವರು ತತ್ತದಾಶ್ರಮಾನುಸಾರವಾಗಿ ಆಚರಿಸಿದರೆ ಸಾಕು. ಈ ಗ್ರಂಥದಲ್ಲಿ ಚಾತುರ್ವರ್ಣಗಳ ಸೃಷ್ಟಿಯ ವಿವರಗಳನ್ನು ನೋಡಿದರೆ ಯಾರೂ ಯಾವ ರೀತಿಯಲ್ಲಿ ಅಪಾರ್ಥಮಾಡಿಕೊಳ್ಳಲು ಸಾಧ್ಯವಿಲ್ಲ. ಈ ವಿಭಾಗವು ಜೀವನ ಸಹಜ ಗುಣ (ಸತ್ವ,ರಜಃ,ತಮಃ) ಮತ್ತು ಕರ್ಮಯೋಗ್ಯತಾದಮೇಲೆ ಅವಲಂಬಿಸಿದೆ. ಈ ಎರಡು ಧರ್ಮಗಳನ್ನೂ ತಿಳಿಯಲು ಭಗವಂತನಿಗೆ ಮಾತ್ರಸಾಧ್ಯ. ಆದ್ದರಿಂದಲೇ "ಚಾತುರ್ವರ್ಣ್ಯಂ ಮಾಯಾಸೃಷ್ಟಂ" ಎಂದು ಶ್ರೀಕೃಷ್ಣ ಹೇಳಿಕೊಂಡಿದ್ದಾನೆ. ಎಲ್ಲರಿಗೂ ಎಲ್ಲ ವಿಧಿಗಳನ್ನಾಚರಿಸಲು ಸಾಧ್ಯವೇ ಇಲ್ಲ. ಯೋಗ್ಯತಾನುಸಾರವಾಗಿ ಸಾಧನ ದಲ್ಲಿ ಹೆಚ್ಚು ಕಡಿಮೆ ನಿಯಮಾದಿಗಳಿವೆ. ಚಾತುರ್ವರ್ಣದವರೆಲ್ಲರೂ ಮೋಕ್ಷಪಡೆಯಲು ಸಾಧ್ಯ. ಆದರೆ ಶಾಸ್ತ್ರ ವಿಹಿತ ಕರ್ಮಗಳು ಯೋಗ್ಯತಾನುಸಾರ, ಬೇರೆ ಬೇರೆಯಾಗಿವೆ. ಅಷ್ಟನ್ನೇ ಭಕ್ತಿಯಿಂದ ಆಚರಿಸಿದರೆ ಸಾಕು ನಮ್ಮ ಕೆಲಸ ಮುಗಿಯಿತು. ಮುಂದಾಗುವದನ್ನು ಆ ದಯಾಳುವಾದ ಭಗವಂತನಿಗೇ ಬಿಡುವಾ.

ಇಲ್ಲಿ ಪ್ರಾಸಂಗಿಕವಾಗಿ ಜಗತ್ ಸೃಷ್ಟಿ, ವರ್ಣಾಶ್ರಮಗಳ ಸೃಷ್ಟಿ, ವರ್ಣಾಶ್ರಮಾಚಾರಗಳು, ಧೃವ, ಪ್ರಹ್ಲಾದ, ಶ್ರೀಕೃಷ್ಣ ಮುಂತಾದವರ ಚರಿತ್ರೆಗಳು ಮಾನವನ ಉಧೃತಿಗೆ ಬೇಕಾದ ಅನೇಕ ಚರ್ಚೆಗಳು, ವಿವರಣೆಗಳು ಮತ್ತು ಸಮಾಧನಗಳು ತುಂಬಿವೆ.

ಇಲ್ಲಿ ಒಂದು ಸ್ವಾರಸ್ಯ ವಿಷಯವೇನೆಂದರೆ ತೃತೀಯಾಂಶದ ಏಳನೆಯ ಅಧ್ಯಾಯದಲ್ಲಿ "ಯಮಗೀತೆ" ಎಂಬ ಮೈತ್ರೇಯ–ಪರಾಶರರ, ನಕುಲ–ಭೀಷ್ಮರ, – ಭೀಷ್ಮ - ಕಾಳಿಂಗರ ಸಂವಾದರೂಪದ ವಿಷಯ ನಿರೂಪಣೆ ಇದೆ. ಈ ಅಂಶದಲ್ಲಿ ಭವ ದುಃಖದಿಂದ ಪಾರಾಗುವ ಮಾರ್ಗ, ಮತ್ತು ಸದ್ಗತಿಯನ್ನು ಹೊಂದತಕ್ಕ ಉಪಾಯಗಳು ಶ್ರೀ ಯಮದೇವರ ವಾಕ್ಯಗಳಿಂದಲೇ ಸ್ಪಷ್ಟೀಕರಿಸಲ್ಪಟ್ಟಿವೆ. ಮರಣಾಂತ್ಯದಲ್ಲಿ ಯಾರು ಯಮಧರ್ಮನ ಅಧಿಪತ್ಯಕ್ಕೆ ಒಳಪಡುತ್ತಾರೆ ಯಾರು ಇಲ್ಲ ಎಂಬ ವಿಷಯವೂ ನಿರೂಪಿಸಲ್ಪಟ್ಟಿದೆ. ಇಲ್ಲಿ ತಿಳಿಸಿದ ವಿಧಿಮುಖವಾದದ್ದನ್ನು

ನಾವು ಜೀವನದಲ್ಲಿ ತಡವಾದರೂ ಸರಿಯೇ ಆಚರಿಸಿದರೆ ಸಾಕು, ಯಮನ ವಶವರ್ತಿಗಳಾಗದಿರಲು ಸಾಧ್ಯವೆಂದು ಮನಗಾಣುವೆವು. ಮುಂದಿನ ಕೆಲವು ಶ್ಲೋಕಗಳನ್ನು ನೋಡುವಾ.

ಮೈತ್ರೇಯರು ಪ್ರಶ್ನೆ ಮಾಡುತ್ತಾರೆ.

"ಯಾವ ಕರ್ಮಗಳನ್ನಾಚರಿಸಿದರೆ ಜನರು ಯಮನ ವಶವರ್ತಿಗಳಾಗುವದಿಲ್ಲವೋ, ಆ ಕರ್ಮವು ಯಾವುದೆಂದು ತಿಳಿಯಲು ನಾನು ಇಚ್ಛಿಸುತ್ತೇನೆ."

ಇದೇ ಪ್ರಶ್ನೆಯನ್ನು ನಕುಲನು ಭೀಷ್ಮರನ್ನು ಕೇಳಿದನು. ಭೀಷ್ಮರು ಕಳಿಂಗನನ್ನು ಕೇಳಿದರು. ಕಳಿಂಗನ ವಿವರಣೆ ಹೀಗಿದೆ. ಕಳಿಂಗನು ಯಮ ಮತ್ತು ಯಮದೂತರ ಮಧ್ಯ ನಡೆದ ಸಂವಾದವನ್ನು ಜಾತಿಸ್ಮರಮುನಿಯು ಹೇಳಿದ ರೀತಿಯಲ್ಲಿ ಸ್ಮರಿಸಿಕೊಂಡು ಹೇಳಿದನು. ಕಾಳಿಂಗ ಉವಾಚ –

ಸ್ವಪುರುಷಮಭಿವೀಕ್ಷ್ಯ ಪಾಶಹಸ್ತಂ ।
ವದತಿ ಯಮಃ ತಸ್ಯ ಕರ್ಣ ಮೂಲೇ॥
ಪರಿಹರ ಮಧುಸೂದನ ಪ್ರಪನ್ನಾನ್।
ಪ್ರಭುರಹಮನ್ಯನೃಣಾಮವೈಷ್ಣವಾನಾಂ॥ 3.7.14
ಹರಿಗುರು ವಶಗೋಸ್ಮಿ ನ ಸ್ವತಂತ್ರಃ।
ಪ್ರಭವತಿ ಸಂಯಮನೇ ಮಮಾಪಿ ವಿಷ್ಣುಃ ॥ 3.7.15
ಹರಿಮಮರವರಾರ್ಚಿತಾಂಘ್ರಿಪದ್ಮಂ।
ಪ್ರಣಮತಿ ಯಃ ಪರಮಾರ್ಥತೋ ಹಿ ಮರ್ತ್ಯಃ॥
ತಮಪಗತ ಸಮಸ್ತಪಾಪ ಬಂಧಂ।
ವ್ರಜ ಪರಿಹೃತ್ಯ ಯಥಾಗ್ನಿಮಾಜ್ಯ ಸಿಕ್ತಮ್
ಕಥಯಮಮ ವಿಭೋ ಸಮಸ್ತಧಾತುರ್ಭವತಿ ಹರೇಃಖಲು
ಯಾದೃಶೋಽಸ್ಯ ಭಕ್ತಃ

ಯಮನು ತನ್ನ ಭೃತ್ಯರನ್ನು ಹತ್ತಿರ ಕರೆದು ಈ ರೀತಿ ಆಜ್ಞೆ ಮಾಡಿದನು.

ಅಲ್ಲರೀ, ಯಮಹೇಳಿದ್ದು ನಾವೇಕೆ ಅಷ್ಟು ಪ್ರಾಮಾಣಿಕವಾಗಿ ಗ್ರಹಿಸಬೇಕು?

"ಮತ್ಪ್ರಸಾದಾದ್ವಿಜಾನಾತಿ ಯಮೋರಾಜಾಖಿಲಾನಿತು ॥ವಿಷ್ಣುರಹಸ್ಯ॥

ಹಯಗ್ರೀವದೇವರು ಬ್ರಹ್ಮದೇವರಿಗೆ ಹೇಳುತ್ತಾರೆ, – "ನನ್ನಪ್ರಸಾದದಿಂದ ಯಮರಾಜನು ಸಕಲ ಕರ್ಮಭೇದ ಪ್ರಭೇದಗಳನ್ನೂ, ತಜ್ಜನ್ಯ ಪುಣ್ಯ ಪಾಪಗಳನ್ನೂ ಅನೇಕ ಧರ್ಮಸೂಕ್ಷ್ಮಗಳನ್ನೂ ತಿಳಿದಿದ್ದಾನೆ."

ನನ್ನ ಪ್ರಸಾದದಿಂದ ನೀನು ಸರ್ವಜ್ಞನಾಗಿದ್ದೀಯೆ.

ಕಳಿಂಗನು ಹೇಳುತ್ತಾನೆ. "ಭೀಷ್ಮರೇ, ಜಾತಿಸ್ಮರನಾದ ಆ ಮುನಿಯು (ಜನ್ಮಾಂತರ ಸ್ಮರಣೆಯುಳ್ಳ ಆ ಮುನಿಯು) ಒಂದು ಪರಮ ರಹಸ್ಯವನ್ನು ನನಗೆ ಹೇಳಿದ್ದಾನೆ. ಯಮನಿಗೂ ಅವನ ದೂತರಿಗೂ ನಡೆದ ಸಂವಾದವದು. ಅದನ್ನೇ ನಿನಗೆ ಹೇಳುತ್ತೇನೆ."

ಯಮಧರ್ಮರಾಜನು ಪಾಶಹಸ್ತನಾಗಿದ್ದ ತನ್ನ ಸೇವಕನನ್ನು ನೋಡಿ ಹೀಗೆ ನುಡಿದನು. "ದೂತ, ಶ್ರೀವಿಷ್ಣುವಿಗೆ ಶರಣಾಗತರಾದವರನ್ನು ಬಿಟ್ಟು ಬಿಡು. ವಿಷ್ಣು ಭಕ್ತರಲ್ಲದ ಜನರ ಮೇಲೆ ಮಾತ್ರ ನಾನು ಅಧಿಕಾರಿಯಾಗಿದ್ದೇನೆ."

"ದೇವೇಂದ್ರನಿಂದ ಪೂಜಿತರಾದ ಬ್ರಹ್ಮದೇವರು ಲೋಕದಲ್ಲಿ ಪಾಪಪುಣ್ಯಗಳನ್ನು ನಿಯಮಿಸಬೇಕೆಂದು ನನ್ನನ್ನು ಯಮಪದವಿಯಲ್ಲಿ ನಿಯೋಜಿಸಿದ್ದಾರೆ. ನಾನು ಶ್ರೀಹರಿ – ಗುರುಗಳ ಅಧೀನದಲ್ಲಿರುತ್ತೇನೆ, ಸ್ವತಂತ್ರನಲ್ಲ. ಶ್ರೀವಿಷ್ಣುವು ನನ್ನನ್ನೂ ನಿಯಮಿಸಲು ಸಮರ್ಥನಾಗಿದ್ದಾನೆ."

"ಸಕಲ ದೇವತೆಗಳಿಂದ ಪೂಜಿಸಲ್ಪಟ್ಟ ಪಾದಪದ್ಮವುಳ್ಳ ಶ್ರೀಹರಿಯನ್ನು ಯಾವ ಮನುಜನು ಪರಮಾರ್ಥ ಬುದ್ಧಿಯಿಂದ ನಮಸ್ಕರಿಸುತ್ತಾನೋ ಅವನು ಸಮಸ್ತಪಾಪ ಬಂಧಗಳಿಂದ ಬಿಡುಗಡೆ ಹೊಂದಿರುತ್ತಾನೆ. ಆದ್ದರಿಂದ ಹೇ ದೂತನೇ, ಆಜ್ಯಾಹುತಿಯಿಂದ ಪ್ರಜ್ವಲಿತವಾದ ಅಗ್ನಿಯಂತಿರುವ ಆ ವಿಷ್ಣು ಭಕ್ತರನ್ನು ಬಿಟ್ಟು ದೂರ ಹೋಗು."

ಈ ಪ್ರಕಾರವಾದ ಯಮರಾಜನ ಮಾತುಗಳನ್ನು ಕೇಳಿ ಪಾಶಧಾರಿಯಾಗಿದ್ದ ಯಮದೂತನು ತನ್ನೊಡೆಯನನ್ನು ಕುರಿತು

"ಸ್ವಾಮೀ, ಸಮಸ್ತ ಚರಾಚರವಸ್ತುಗಳಿಗೂ ನಿಯಾಮಕನಾದ ಶ್ರೀಹರಿಯ ಭಕ್ತನು ಯಾರು, ಅವನು ಹೇಗಿರುತ್ತಾನೆ ಅದನ್ನು ನನಗೆ ತಿಳಿಸಿರಿ" ಎಂದು ಕೇಳಿದನು.

ಯಮರಾಜನು ಹೇಳುತ್ತಾನೆ -

"ಯಾವನು ತನ್ನ ವರ್ಣಾಶ್ರಮ ಧರ್ಮಗಳಿಂದ ವಿಚಲಿತನಾಗುವದಿಲ್ಲವೋ, ತನ್ನ ಶತ್ರು-ಮಿತ್ರರಲ್ಲಿ ಸಮಭಾವದಿಂದಿರುವನೋ, ಬಲಾತ್ಕಾರದಿಂದ ಮತ್ತೊಬ್ಬರ ಸ್ವೊತ್ತನ್ನಪಹರಿಸುವದಿಲ್ಲವೋ, ಹಿಂಸಾರಹಿತನಾಗಿಯೂ ಮತ್ತು ಶುದ್ಧಚಿತ್ತನಾಗಿರುವನೋ ಅವನನ್ನು ವಿಷ್ಣುಭಕ್ತನೆಂದು ತಿಳಿ."

ಯಾವನ ಚಿತ್ತವು ಕಲಿಕಲ್ಮಷದಿಂದ ಮಲೀನವಾಗಿಲ್ಲವೋ, ಸದಾಕಾಲದಲ್ಲಿ ವಿಷ್ಣುವನ್ನು ಹೃದಯದಲ್ಲಿ ಆರಾಧಿಸುವನೋ ಅವನು ವಿಷ್ಣುವಿನ ಅಂತರಂಗ ಭಕ್ತನು.

ಯಾವನು ಪರರ ದ್ರವ್ಯಕನಕಾದಿಗಳಿಂದ ಆಕರ್ಷಿರನಾಗುವದಿಲ್ಲವೋ, ಭಗವಂತನಲ್ಲಿ ಅನನ್ಯ ಚಿತ್ತದಿಂದಿರುವನೋ, ಮಾತ್ಸರ್ಯರಹಿತನಾಗಿಯೂ, ಪ್ರಶಾಂತನಾಗಿಯೂ, ಪ್ರಿಯಹಿತವಚನನೂ, ವಂಚನೆಯನ್ನರಿಯದವನೂ ಇರುತ್ತಾನೋ ಅಂಥವನ ಹೃದಯದಲ್ಲಿ ಶ್ರೀವಿಷ್ಣುವು ಸದಾ ಪ್ರಸನ್ನತೆಯಿಂದ ನೆಲೆಸಿರುತ್ತಾನೆ.

ಯಾವನು ಯಮ–ನಿಯಮಾದಿಗಳಿಂದ ಪಾಪಗಳನ್ನು ತಡೆದುಹಾಕಿ, ಅನುದಿನವೂ ಅಚ್ಯುತನನ್ನು ಮನಸ್ಸಿನಲ್ಲಿ ಧ್ಯಾನಿಸುತ್ತ, ಮದ, ಅಭಿಮಾನ ಮತ್ತು ಮಾತ್ಸರ್ಯದಿಗಳಿಂದ ದೂರವಿರುವನೋ ಎಲೈ, ಭಟರೇ ಅಂಥವರಿಂದ ನೀವು ಅತಿದೂರದಿಂದಲೇ ಬಿಟ್ಟು ಹೋಗಿರಿ.

ಯಾವನ ಹೃತ್ಕಮಲದಲ್ಲಿ ಶ್ರೀಹರಿಯು ಪೂಜಿತನಾಗಿರುವನೋ ಅಂಥವನ ಪಾಪವು ಶ್ರೀಹರಿಯ ವಿಶೇಷ ಸನ್ನಿಧಾನದಿಂದ ಧ್ವಸ್ತವಾಗಿರುತ್ತದೆ, ಅವನು ನಿಷ್ಪಾಪಿ. ಅಂಥವನಿಂದ ದೂರವಿರಿ.

ಪ್ರಾಸಂಗಿಕವಾಗಿ ಯಮರಾಜನು ಅಭಕ್ತರ ಲಕ್ಷಣಗಳನ್ನೂ ತನ್ನ ದೂತರಿಗೆ ತಿಳಿಸುತ್ತಾನೆ.

"ಪರಧನವನ್ನು ಅಪಹರಿಸುವವ, ಪ್ರಾಣಿಹಿಂಸಕ, ಅನೃತ ಹೇಳುವವ, ಕಠೋರ ನುಡಿಯುಳ್ಳವ, ಮದಾಂಧ, ದುಷ್ಟ ಅಂಥವನ ಹೃದಯದಲ್ಲಿ ಶ್ರೀಹರಿಯು ಇರುವದಿಲ್ಲ."

"ದುರ್ಮಾರ್ಗಿ, ಅಸೂಯಾಪರ, ಸಜ್ಜನ ನಿಂದಕ, ಯಜ್ಞರಹಿತ, ಲೋಭೀ, ಮಾತಾಪಿತೃ, ಮಗ ಮಡದಿ ಬಾಂಧವರಲ್ಲಿ ಕುತ್ಸಿತ ಬುದ್ಧಿ, ಕೇವಲ ಹಣದಾಶೆ ಇರುವವನು, ವಿಷ್ಣು ಭಕ್ತನಲ್ಲವೆಂದು ತಿಳಿ."

"ದುರ್ಬುದ್ಧಿಯುವ, ದುರ್ಮಾರ್ಗಿ, ದುಶ್ಶೀಲರ ಸಹವಾಸದಿಂದ ಮದಿಸಿದವ ಪಾಪಕಾರ್ಯನಿರತ, ಇಂತಹ ನರಪಶುವು ಸರ್ವಥಾ ವಿಷ್ಣು ಭಕ್ತನಲ್ಲ."

ಇಂಥವರನ್ನು ನಿಮ್ಮ ಪಾಶಕ್ಕೆ ಗುರಿಪಡಿಸಿ ನನ್ನೆಡೆ ಬನ್ನಿರಿ.

ಯಾವ ಮನುಜನು ವಿಷ್ಣುವನ್ನು ಶರಣಾಗತಿ ಹೊಂದಿ ಅನನ್ಯಭಕ್ತಿಯಿಂದ ಆಶ್ರಯಿಸಿದ್ದಾನೋ ಮತ್ತು ಯಾವನ ಮನಸ್ಸಿನಲ್ಲಿ ಅವ್ಯಯನಾದ ವಿಷ್ಣುವು ನೆಲೆಸಿದ್ದಾನೋ ಅವನನ್ನು ದೂರದಿಂದಲೇ ಬಿಟ್ಟುಹೋಗಿರಿ. ಎಂದು ಯಮಧರ್ಮನು ತನ್ನ ಭಟರಿಗೆ ಶಾಸನಮಾಡಿದನಂತೆ.

ಇದೆಲ್ಲವನ್ನೂ ವಿವೇಚನೆ ಮಾಡಿದರೆ, ಈ ಸಂಸಾರದಲ್ಲಿ ವಿಷ್ಣುವನ್ನು ಬಿಟ್ಟರೆ ಅನ್ಯರಕ್ಷಕರಿಲ್ಲ. (ಈ ವಿಷಯವು ಶ್ರೀಮದ್ಭಾಗವತದಲ್ಲಿಯೂ ಆರನೆಯ ಸ್ಕಂದದಲ್ಲಿ ಅಜಾಮಿಳೋಪಾಖ್ಯಾನದಲ್ಲಿ ವರ್ಣಿತವಾಗಿದೆ.)

ಯಮ/ಯಮಭಟರ ಪಾಶದಿಂದ ತಪ್ಪಿಸಿಕೊಳ್ಳುವ ಉಪಾಯವನ್ನು ಯಮರಾಜನೇ ಹೇಳಿದನಲ್ಲ. ವಿಷ್ಣು ಭಕ್ತನಾಗಿ ನರಕಾದ್ಯನರ್ಥಗಳನ್ನು ತಪ್ಪಿಸಿಕೊಳ್ಳಬೇಕೆಂದು.

ಮೇಲೆಹೇಳಿದ ಧರ್ಮಗಳನ್ನು ಅನುಸರಿಸಲು ಕಾಲವಿಳಂಬ ದೊಡ್ಡ ದೋಷವಲ್ಲ ವಿಷ್ಣುಭಕ್ತನಾಗದಿರುವದೇ ಪ್ರಬಲದೋಷ ಮತ್ತು ಅನರ್ಥಕಾರಣ.

ವಿಷ್ಣು ಆರಾಧನೆಯ ಫಲವನ್ನು ಇಲ್ಲಿಯೇ ಹೇಳುತ್ತಾರೆ.

ಔರ್ವ ಉವಾಚಃ

"ಭೌಮಂ ಮನೋರಥಂ ಸ್ವರ್ಗಂ ಸ್ವರ್ಗಿವಂದ್ಯಂಚ ಮತ್ಪದಮ್।
ಪ್ರಾಪ್ನೋತ್ಯಾರಾಧಿತೇವಿಷ್ಣೌ ನಿರ್ವಾಣಮಪಿ ಚೋತ್ತಮಮ್॥

(ವಿಷ್ಣುಪುರಾಣ)

"ವಿಷ್ಣುವನ್ನು ಆರಾಧಿಸಿದರೆ ಈ ಭೂಮಂಡಲದಲ್ಲಿ ದೊರಕ ಬಹುದಾದ ಸಕಲ ಮನೋರಥವೂ, ಸ್ವರ್ಗವೂ, ಸ್ವರ್ಗವಾಸಿಗಳಿಗೆ ಸಹಪೂಜ್ಯವಾದ ಬ್ರಹ್ಮಪದವೂ, ಮತ್ತು ಸರ್ವೋತ್ತಮವಾದ ಮೋಕ್ಷವೂ ಸಿಗುತ್ತದೆ. ಮಹಾರಾಜ ಸಗರ, ವಿಷ್ಣುವನ್ನು ಆರಾಧಸಿದರೆ ಅದು ಅಲ್ಪವಾಗಲಿ. ಭೂರಿಯಾಗಲಿ ಯಥಾಯೋಗ್ಯ ತಾನುಸಾರ ಫಲಪಡೆದೇ ಪಡೆಯುತ್ತಾನೆ."

ವಿಷ್ಣು ಆರಾಧನಾ ಸಹ ಕಠಿಣಶ್ರಮಸಾಧ್ಯವ್ರತವಲ್ಲ. ವಿಷ್ಣುವಿನ ಪೂಜೆ ಸುಲಭ. ಔರ್ವಮುನಿ ಸಗರನಿಗೆ ಹೇಳುತ್ತಾರೆ –

"ವರ್ಣಾಶ್ರಮಚಾರವತಾ ಪುರುಷೇಣ ಪರಃಪುಮಾನ್।
ವಿಷ್ಣುರಾರಾಧ್ಯತೇ ಪಂಥಾ ನಾನ್ಯಃ ತತ್ತೋಷಕಾರಣಃ ॥3.8.9॥

"ಆ ಪರಮ ಪುರುಷನಾದ ವಿಷ್ಣುವನ್ನು ಸಂತೋಷಪಡಿಸುವ ಏಕೈಕ ದಾರಿಯೆಂದರೆ, ವರ್ಣಾಶ್ರಮಾಚಾರೋಚಿತ ಧರ್ಮಗಳಿಂದಲೇ, ಬೇರೆ ಇಲ್ಲ."

ಯಮಧರ್ಮರಾಜನು ಈ ಮೇಲೆ ಹೇಳಿದ ವಿಷ್ಣು ಭಕ್ತನ ಲಕ್ಷಣಗಳು ಅನುಷ್ಠಾನದಲ್ಲಿದ್ದು ಅವು ವ್ಯಕ್ತಿಗತ ಧರ್ಮಗಳಾಗಬೇಕು. ಅಂದರೇನೆ ಫಲಭಾಗಿಗಳಾಗಲು ಸಾಧ್ಯ.

ಪ್ರಕೃತ ಪ್ರಸಕ್ತವಾದ ವಿಷಯವನ್ನೇ, ವಿಷ್ಣುರಹಸ್ಯವು ಅಧಿಕ ವಿವರಣೆಯನ್ನು ಕೊಟ್ಟು ಸಾಧಕನ ಮನಸ್ಸಿಗೆ ಸ್ಥೈರ್ಯವನ್ನು ತಂದುಕೊಡುತ್ತದೆ. ಇದರಲ್ಲಿ ಮೊದಲಿನ ೧೯ ಅಧ್ಯಾಯಗಳು ಚತುರ್ಮುಖಬ್ರಹ್ಮದೇವರ - ಹಯಗ್ರೀವ ದೇವರ ಸಂವಾದರೂಪ. ಬ್ರಹ್ಮದೇವರು ಮುಮುಕ್ಷುಗಳಲ್ಲಿ ಹಿರಿಯರು. ಅವರೇ ಸಕಲರಪರವಾಗಿ ಅನೇಕಪ್ರಶ್ನೆಗಳನ್ನು ಕೇಳಿ ಸಾಕ್ಷಾತ್ ಭಗವಂತನಿಂದ ಉತ್ತರ ಪಡೆದಿದ್ದಾರೆ. ಅಧಿಕಾರಿಗಳಿಗೆ ಬೇಕಾದ ಕೆಲವು ರಹಸ್ಯವಿಷಯಗಳೂ ಇಲ್ಲಿ ಉಕ್ತವಾಗಿವೆ.

ವಿಷ್ಣುವಿನ ಪೂಜಾದಿಗಳನ್ನು ಹೇಗೆ ಮಾಡಬೇಕೆಂಬ ವಿಷಯದಲ್ಲಿ ಈ ಗ್ರಂಥವು ಇನ್ನು ಮುಂದೆ ಹೇಳಲ್ಪಡುವ ವಿವರಣೆಗಳನ್ನು ತಿಳಿಸಿಕೊಡುತ್ತದೆ. ಆರಾಧನೆಗೆ ಮಂತ್ರ ತಂತ್ರಗಳ ವಿಷಯಃ

ಶ್ರೀಹಯಗ್ರೀವ ಉವಾಚಃ-

"ಸರ್ವರೂಪ ಸ್ತುತಿಪರಾಃ ಸರ್ವೇವೇದಾ ಹಿ ಮುಖ್ಯತಃ।
ಆವ್ಹಾನ ತತ್ಪರಾಣ್ಯಾಹುಃ ಸರ್ವತಂತ್ರಾಣಿ ಮುಖ್ಯತಃ॥7.3॥
ವೇದಾಶ್ರುತಯ ಇತ್ಯುಕ್ತಾಸ್ತಂತ್ರಾಣಿಸ್ಮೃತಯಸ್ಮೃತಿ।
ಶ್ರುತಿಸ್ಮೃತಿ ಉಭೇನೇತ್ರೇ ವಿಪ್ರಾಣಾಂಪರಿಕೀರ್ತಿತಃ॥
ಏಕೇನಹೀನಃ ಕಾಣಃ ಸ್ಯಾತ್ ದ್ವಾಭ್ಯಾಂ ಅಂಧಃ ಪ್ರಕೀರ್ತಿತಃ।
ಅತೋ ವಿಪ್ರೇಣ ಕರ್ತವ್ಯಂ ಶೀಲನಂ ವೇದ ತಂತ್ರಯೋಃ ॥7.5॥

"ಎಲ್ಲ ವೇದಗಳೂ ಮುಖ್ಯವಾಗಿ ನನ್ನ ಸ್ವರೂಪಗಳನ್ನೇ (ಮಹಿಮೆಗಳನ್ನೇ) ಸ್ತುತಿಸುತ್ತವೆ. ಸಕಲ ತಂತ್ರಗಳು ಮುಖ್ಯವಾಗಿ ನಾನು ಪೂಜಾರ್ಥವಾಗಿ ಪ್ರತಿಮಾಗಳಲ್ಲಿ ಬರಲು ನನ್ನನ್ನು ಆವ್ಹಾನಿಸುವ ವಿಧಿ ವಿಧಾನಗಳನ್ನು ತಿಳಿಸುವ ತಾತ್ಪರ್ಯ ಉಳ್ಳವುಗಳೇ ಆಗಿರುತ್ತವೆ. ವೇದಗಳು ಶ್ರುತಿಗಳೆಂದೂ, ತಂತ್ರಗಳು ಸ್ಮೃತಿಗಳೆಂದೂ ಕರೆಯಲ್ಪಡುತ್ತದೆ. ಶ್ರುತಿ ಸ್ಮೃತಿಗಳೆರಡೂ ಬ್ರಾಹ್ಮಣನಿಗೆ ಎರಡೂ ಕಣ್ಣುಗಳಿದ್ದಂತೆ. ಅದರಲ್ಲಿ ಒಂದು ಕಣ್ಣಿಲ್ಲದವನು ಒಕ್ಕಣ್ಣನು. ಎರಡೂ ಕಣ್ಣಿಲ್ಲದವನು ಕುರುಡನೆಂದೂ ಜ್ಞಾನಿಗಳು ಕರೆಯುತ್ತಾರೆ. ಆದ್ದರಿಂದ ಬ್ರಾಹ್ಮಣನು ವೇದ ಮತ್ತು

ತಂತ್ರಗಳ ಅಧ್ಯಯನ ಅನುಷ್ಠಾನಗಳಲ್ಲಿ ಆಸಕ್ತನಾಗಿರಬೇಕಾದುದು ಅವಶ್ಯಕರ್ತವ್ಯವಾಗಿದೆ.''

ಅಧಿಕಾರಿಗಳಲ್ಲಿ ಮೂರು ತರಹದ ಜನರಿದ್ದಾರೆ, ಸಾತ್ವಿಕ, ರಾಜಸ ಮತ್ತು ತಾಮಸರೆಂದು.

"ಬ್ರಾಹ್ಮಣಾದ್ಯಾಶ್ಚ ಸರ್ವೇಪಿ ಸಂಸಾರಾದ್ಯೇ ಮುಮುಕ್ಷವಃ।
ತೇತು ತಂತ್ರಂ ಪಂಚರಾತ್ರಮಾಶ್ರಯೇಯುರ್ನಚೇತರತ್॥"7.25 (ವಿ.ರ)

"ಬ್ರಾಹ್ಮಣಾದಿ (ವೇದಾಧಿಕಾರಿಗಳಾದ ಇತರ ವರ್ಣಗಳೂ) ವರ್ಣಗಳಲ್ಲಿ ಜನಿಸಿದ ಸಾತ್ವಿಕ ಜೀವರು, ಮೋಕ್ಷಾಪೇಕ್ಷೆಯುಳ್ಳವರಾಗಿ ಪಂಚರಾತ್ರಾಗಮವನ್ನು ಆಶ್ರಯಿಸುತ್ತಾರೆ. ಇತರ ಪಾಶುಪತಾತಿ ಆಗಮಗಳನ್ನು ಆಶ್ರಯಿಸುವದಿಲ್ಲ.

ವಿದ್ಯೆ, ಐಶ್ವರ್ಯ ಧನ ಇತ್ಯಾದಿ ಐಹಿಕ ಫಲಗಳಿಗಾಗಿ ಶಾಕ್ತ, ಗಾಣಪತ್ಯ, ಸೌರ ಇತ್ಯಾದಿಗಳನ್ನು ಆಶ್ರಯಿಸುವವರು ರಾಜಸರು.

ಪರಸ್ತ್ರೀ, ಪರದ್ರವ್ಯ, ಪರವಶೀಕರಣ, ಪರರನಾಶಾದಿಗಳನ್ನು ಮಾಡಲಿಚ್ಛಿಸುವವರು ಅಂಥ ಕ್ಷುದ್ರದೇವತೆಗಳನ್ನಾಶ್ರಯಿಸಿ ಸ್ಮಶಾನಗಳಲ್ಲಿ ಸಾಧಿಸುತ್ತಾರೆ. ಇವರು ತಾಮಸರು. ಅಂತ್ಯದಲ್ಲಿ ಇವರಿಗೆ ನರಕವಾಸ ತಪ್ಪಿದ್ದಲ್ಲ.

ಈ ಸಂದರ್ಭದಲ್ಲಿ ಭಗವಂತನು ಸ್ವಯಂ ಹೀಗೆ ಹೇಳಿದ್ದಾನೆ –

"ಪಂಚರಾತ್ರಸ್ಯ ಕೃತ್ಸ್ನಸ್ಯ ವಕ್ತಾಹಂ ಸ್ವಯಮೇವಹಿ"॥7.32॥
ಅತೋಹಿ ಸರ್ವಶಾಸ್ತ್ರೇಷು ವರಮೇತನ್ನಿಗದ್ಯತೇ॥7.33॥

"ಯದ್ಯಪಿ ಇತರ ಆಗಮಗಳನ್ನು ನನ್ನ ಆಜ್ಞೆಯಿಂದ ರುದ್ರಾದಿಗಳಿಂದ ರಚಿಸಲ್ಪಟ್ಟಿದ್ದರೂ, ಸಮಗ್ರ ಪಂಚರಾತ್ರಾಗಮವನ್ನು ಮಾತ್ರ ನಾನೇ ರಚಿಸದ್ದೇನೆ. ಆದ್ದರಿಂದ ಇದು ಶ್ರೇಷ್ಠವೆಂದು ಜ್ಞಾನಿಗಳ ಮತ. ನನ್ನ ಭಕ್ತರಾದವರು ಇದನ್ನು ವಿಷ್ಣುಭಕ್ತರಿಗೆ ಮಾತ್ರ ಶ್ರವಣಮಾಡಿಸುತ್ತಾರೆ.''

ಈ ಪ್ರಕಾರ ಆರಾಧನ ಮಾಡಿದ ಭಗವದ್ಭಕ್ತರು ಯಾರೆಂಬದನ್ನೂ ತಿಳಿಸುತ್ತಾರೆ.

**ಪ್ರಹ್ಲಾದ ಧೃವಬಲ್ಯಾದ್ಯಾ ವಸಿಷ್ಠಾದ್ಯಾಮಹರ್ಷಯಃ ॥7.35**
**ಸ್ವಾಯಂಭುವಾದ್ಯಾಮನವೋ ಹ್ಯನ್ಯೇತದ್ವಂಶಜಾಸ್ತಥಾ॥**
**ವಿಭೀಷಣಾದ್ಯಾ ಸರ್ವೇಪಿ ಬ್ರಹ್ಮರುದ್ರಾದಿ ದೇವತಾ।**
**ಆರಾಧ್ಯ ಪಂಚರಾತ್ರೇಣ ವಿಧಿನಾ ಮಾಂ ಪ್ರಪೇದಿರೇ॥7.37 (ವಿ.ರ)**

ಪ್ರಹ್ಲಾದ, ಧ್ರುವ, ಬಲಿ, ವಶಿಷ್ಠಾದಿ ಮಹರ್ಷಿಗಳು, ಸ್ವಾಯಂಭುವಮನು ಅವನ ವಂಶಜರು, ವಿಭೀಷಣಾದಿಗಳು, ಬ್ರಹ್ಮರುದ್ರಾದಿಗಳು ಪಂಚರಾತ್ರಾಗಮೋಕ್ತ ವಿಧಿವಿಧಾನಗಳಿಂದ ಆರಾಧನೆ ಮಾಡಿ ನನ್ನನ್ನು ಹೊಂದಿದ್ದಾರೆ.

ಮಂತ್ರ ತಂತ್ರಾದಿಗಳಿಂದ ವಿಷ್ಣುವನ್ನು ವಿಧ್ಯುಕ್ತವಾಗಿ ಆರಾಧಿಸಲು ವಿಷ್ಣುದೀಕ್ಷೆ ಪಡೆಯುವದು ಅವಶ್ಯಕ. ಸುಮ್ಮನೆ ಪುಸ್ತಕ ಓದಿ ಮಾಡಿದರೆ ಸಾಲದು ಎನ್ನುತ್ತಾರೆ.

**ಉಪನೀತಾ ದ್ವಿಜಾಃ ಸರ್ವೇ ವೇದೇಷ್ವಧಿಕೃತಾಮತಾಃ॥**
**ತಂತ್ರೇಷು ದೀಕ್ಷಿತಾ ಏವ ಪ್ರೋಚ್ಯಂತೆ ಹ್ಯಧಿಕಾರಣಃ॥7.38॥**

"ಉಪನಯನ ಸಂಸ್ಕರವು ಹೇಗೆ ದ್ವಿಜರಿಗೆ ವೇದಾಧಿಕಾರವನ್ನು ದೊರಕಿಸಿಕೊಡುತ್ತದೆಯೋ, ಹಾಗೆಯೇ ತಂತ್ರೋಕ್ತ ಪೂಜಾದಿ ಕರ್ಮಾನುಷ್ಠಾನ ವಿಷಯಗಳಲ್ಲಿ ವಿಧಿಪೂರ್ವಕ ವಿಷ್ಣು ದೀಕ್ಷೆಯನ್ನು ಪಡೆಯುವವರು ಮಾತ್ರ ಅಧಿಕಾರಿಗಳಾಗುತ್ತಾರೆ."

ವಿಷ್ಣು ದೀಕ್ಷಾವಿಷಯದಲ್ಲಿ ವಿಶೇಷ ವಿವರಣೆ ಕೊಡುತ್ತಾರೆ.

**"ದೀಕ್ಷಾಹಿ ದ್ವವಿಧಾ ಪ್ರೋಕ್ತಾ ಬಾಹ್ಯಾಭ್ಯಾಂತರಭೇದತಃ।**
**ಜ್ಞಾನಿನಾಂ ಉಭಯಂ ತತ್ರ ಬಾಹ್ಯೋವಾ ಅಜ್ಞಾನಿನಾಂ ಭವೇತ್।"**
**7.39**

ಬಾಹ್ಯದೀಕ್ಷೆ ಅಂತರ್ದೀಕ್ಷೆ ಎಂದು ದೀಕ್ಷೆಯು ಎರಡು ವಿಧವಾಗಿದೆ. ಅದರಲ್ಲಿ ಜ್ಞಾನಿಗಳಿಗೆ ಎರಡೂ ವಿಹಿತ. ಅಜ್ಞಾನಿಗಳಿಗೆ ಬಾಹ್ಯದೀಕ್ಷೆ ಮಾತ್ರವೆಂದು ವಿಧಿಸಲಾಗಿದೆ.''

ಮೊದಲು ಅಂತರ್ದೀಕ್ಷೆಯನ್ನು ನಿರೂಪಿಸಿದ್ದಾರೆ.-

"ಅಯಂ ಸರ್ವೇಷ್ಟದಾತಾವೇ ಸರ್ವಾರಿಷ್ಟ ನಿವಾರಕಃ।
ಸರ್ವೋತ್ಕೃಷ್ಟೋಯಮೇವೈಕಸ್ತದಿಯೋಽಹಂ ಸವೇಽಪತಿಃ॥7.40॥
ಇತಿ ಜ್ಞಾನಂ ನಿಶ್ಚಿತಂ ಯತ್ ಸಾದೀಕ್ಷಾಭ್ಯಂತರಂಮತಾ॥"

"ಶ್ರೀ ವಿಷ್ಣುವೇ ನನಗೆ ಸಕಲ ಅನಿಷ್ಟ ನಿವೃತ್ತಿದ್ವಾರಾ ಸರ್ವಾಭೀಷ್ಟದಾಯಕನು. ಆತನೊಬ್ಬನೇ ಸರ್ವೋತ್ಕೃಷ್ಟತಮ. ಆತನಿಗೆ ಸಮರೂ ಅಧಿಕರೂ ಯಾರೂ ಯಾವ ಕಾಲದಲ್ಲಿಯೂ ಇಲ್ಲವೇ ಇಲ್ಲ. ನಾನು ಅವನ ಪರಿವಾರದಲ್ಲೊಬ್ಬ ದಾಸ. ಆತನೇ ನನಗೆ ಸದಾಸ್ವಾಮಿಯು. ಇಂಥ ನಿಶ್ಚಿತ ದಾರ್ಢ್ಯಜ್ಞಾನವೇ ಅಂತರ್ದೀಕ್ಷೆ ಎನ್ನಿಸಿಕೊಳ್ಳುತ್ತದೆ.''

ಬಾಹ್ಯದೀಕ್ಷೆಯ ವಿವರಣೆ ಹೀಗಿದೆ.-

"ನಾಮಚಿಹ್ನಾದಿನಾ ದೇಹೇ ವಹ್ನಿನಾ ವಾ ಮೃದಂಕನಂ।7.41॥
ಸಾಬಾಹ್ಯಾ ಪ್ರೋಚ್ಯತೇ ದೀಕ್ಷಾ ಹ್ಯಜ್ಞಾನಾಂ ಜ್ಞಾನಿನಾಮಪಿ॥"

"ಶ್ರೀ ವಿಷ್ಣುವಿನ ವಿವಿಧ ನಾಮಗಳಿಂದ ಲೋಕವ್ಯವಹಾರಕ್ಕಾಗಿ ಕರೆಯಿಸಲ್ಪಡುವದು. ಆತನ ಶಂಖ, ಚಕ್ರ, ಗದಾ, ಪದ್ಮ ನಾರಾಯಣಾದಿ ಮುದ್ರೆಗಳನ್ನು, ಕೆಲವು ಸಲ ತಪ್ತಮುದ್ರೆಗಳಿಂದಲಾಗಲಿ, ನಿತ್ಯದಲ್ಲಿ ಗೋಪೀಚಂದನಾದಿ ಮೃತ್ತಿಕೆಗಳಿಂದ ದೇಹದಲ್ಲಿ ಗುರುತಿಸಿಕೊಳ್ಳವದು. ಇದು ಬಾಹ್ಯದೀಕ್ಷೆಯು. ಜ್ಞಾನಿ ಅಜ್ಞಾನಿ ಉಭಯತರಿಗೂ ವಿಹಿತವಾಗಿದೆ.''

ವಿಷ್ಣುದೀಕ್ಷೆ ಪಡೆದ ಮನುಷ್ಯನು ಲೋಕದಲ್ಲಿ ಮಾನ್ಯನಾಗುತ್ತಾನೆ. ಕೇವಲ ದೀಕ್ಷೆ ಇದ್ದರೆ ಸಾಲದು, ಸತ್ಯ ಶೌಚಾದಿಗಳು ಅವಶ್ಯಕ ಎಂದು ತಿಳಿಸುತ್ತಾರೆ.-

"ಸ್ವ ಸ್ವ ವರ್ಣಾಶ್ರಮಾಚಾರ ನಿರತಃ ಸತ್ಯವಾಕ್ ಶುಚಿಃ।
ಸ ಏವಲಭತೇ ಸರ್ವಂ ದೀಕ್ಷಾಗ್ರಹಣಜಂ ಫಲಂ॥7-51॥

"ವಿಷ್ಣುದೀಕ್ಷೆ ಪಡೆದವನು ಸ್ವವರ್ಣ - ಆಶ್ರಮಕ್ಕೆ ಯೋಗ್ಯವಾದ ಕರ್ಮಗಳಲ್ಲಿ ನಿತ್ಯನಿರತನಾಗಿಯೂ, ಸತ್ಯಭಾಷಿಯೂ, ಕಾಯಾವಾಚಾ ಮನಸಾ ಶುಚಿರ್ಭೂತನಾಗಿಯೂ ಇದ್ದರೆ ಮಾತ್ರ ವಿಷ್ಣುದೀಕ್ಷೆ ಯಿಂದಾಗುವ ಪೂರ್ಣಫಲಗಳನ್ನು ಹೊಂದುತ್ತಾನೆ."

ಸರ್ವದೀಕ್ಷೆಗಳಲ್ಲಿ ವಿಷ್ಣುದೀಕ್ಷೆಯೇ ಮೇಲು. ಏಕೆಂದರೆ ವಿಷ್ಣುವೇ ಸಕಲ ದೇವ, ಋಷಿ, ಗಂಧರ್ವ, ಮನುಷ್ಯಾದಿಗಳಿಗೆ ಆರಾಧ್ಯದೇವತೆಯು, ಸರ್ವಸ್ವಾಮಿಯು, ಸ್ವತಂತ್ರನು, ಪೂರ್ಣನು, ಸರ್ವನಿಯಾಮಕನು ಆಗಿದ್ದಾನೆ. ಆದ್ದರಿಂದ ಅವನಲ್ಲಿ ಮಾಡಿದ ಉತ್ಕೃಷ್ಟ ಭಕ್ತಿಯು ಮುಕ್ತಿಗೆ ಕಾರಣವಾಗುತ್ತದೆ.

ತಪ್ತಮುದ್ರೆಯ ವೈಶಿಷ್ಟ್ಯವನ್ನು ದಾರ್ಢ್ಯಪೂರ್ವಕ ತಿಳಿಸುತ್ತಾರೆ.

"ತಪ್ತಚಕ್ರಾಂಕಿತೋ ಯಃ ಸ್ಯಾತ್ ಸಚಂಡಾಲೋ ವರೋ ಭವೇತ್।
ಕಿಂಪುನಬ್ರಾಹ್ಮಣಾ ಪುಣ್ಯಾಃ ಸದಾಚಾರಾ ವಿಶೇಷತಃ"॥7.61॥

"ತಪ್ತಚಕ್ರಾಂಕಿತ ದೇಹವುಳ್ಳ ಚಂಡಾಲನೂ ಸಹ, ಅದೀಕ್ಷಿತ ಉತ್ತಮವರ್ಣದವರಿಕಿಂತ ದರ್ಶನಾದಿಗಳಿಗೆ ಪ್ರಶಸ್ತನಾಗಿರುವಾಗ, ತಪ್ತಚಕ್ರಾದಿ ಚಿಹ್ನೆಗಳುಳ್ಳ ಪುಣ್ಯವಂತರಾದ ಬ್ರಾಹ್ಮಣರು ಅದರಲ್ಲಿಯೂ ವಿಶೇಷವಾಗಿ ಸದಾಚಾರ ನಿಷ್ಠರಾದವರು (ದೇವಪಿತೃ ಕಾರ್ಯದಲ್ಲಿ ದಾನಾದಿಗಳಿಗೆ ಶ್ರೇಷ್ಠಪಾತ್ರರೆಂದು) ಉತ್ತಮರು ದರ್ಶನೀಯರೆಂದು ಪ್ರತ್ಯೇಕ ಹೇಳಲೇನಿದೆ."

ವಿಷ್ಣುದೀಕ್ಷೆ ಪಡೆದವರು ವಿಷ್ಣುವಿನ ಪ್ರಸನ್ನತೆಗಾಗಿ ಆತನ ನಾಮ ಮಂತ್ರಗಳನ್ನು ಜಪಮಾಡುವದು ಸಹಜ.

ತೀವ್ರ ಶಿಷ್ಟಾಚಾರ ಶುಚ್ಯಾದಿವ್ರತರು, ಅಗ್ನಿಹೋತ್ರ, ವೇದಾಧ್ಯಯನ ಪ್ರಾಣಾಯಾಮ ಪರಾಯಣರೂ, ಪರಪೀಡಾ ಪರದ್ರವ್ಯವಿಮುಖರೂ, ಕ್ರೋಧಾದಿರಹಿತರೂ, ಇಂದ್ರಿಯಜಯ ಉಳ್ಳವರು, ದೇವದ್ವಿಜರಲ್ಲಿ ಭಕ್ತಿಯುಳ್ಳವರು, ಉಕ್ತ ಉಪವಾಸಪರಾಯಣರೂ ನರಸಿಂಹ, ಹಯಗ್ರೀವ,

ವರಾಹ, ಪರಶುರಾಮಾದಿ ಮಂತ್ರಗಳನ್ನು ಜಪಿಸಬಹುದು. ಆದರೆ ಶಿಷ್ಟಾಚಾರ ರಹಿತರು ದುರಾಚಾರಿಗಳು ಈ ಮಂತ್ರವನ್ನು ಜಪಿಸಿದರೆ ಕಾಲಾಂತರದಲ್ಲಿ ದುಷ್ಫಲಗಳುಂಟಾಗದೇ ಇರದು.

ಆಧುನಿಕ ದಿನಗಳಲ್ಲಿ ಜೀವನ ನಿರ್ವಹಣೇಗಾಗಿ ವಿವಿಧ ಕ್ಷೇತ್ರಗಳಲ್ಲಿ ಕಾರ್ಯಾಸಕ್ತರಾದಾಗ ಆಚಾರಾದಿಗಳಲ್ಲಿ ಸಡಿಲ ಪರಿಸ್ಥಿತಿ ಉಂಟಾದಾಗ ಅಥವಾ ಧರ್ಮಮಾರ್ಗದಲ್ಲಿ ಹೆಚ್ಚಿನ ರಿಯಾಯಿತಿ ಬೇಕಾದಾಗ, ಆಸ್ತಿಕ ಜನರು ಮಂತ್ರ ಜಪಿಸುವದನ್ನೇ ಬಿಡಬಾರದು. ದೀಕ್ಷಾ / ಉಪದೇಶಗಳನ್ನು ಸ್ವೀಕಾರ ಮಾಡಿ ರಾಮ, ಕೃಷ್ಣ, ಗೋಪಾಲ, ಹರಿ, ದಾಮೋದರಾದಿ ಸೌಮ್ಯವಾದ ನಾಮಮಂತ್ರಗಳನ್ನು ಜಪಮಾಡಿ ಶ್ರೀಹರಿ ಪ್ರಸಾದಕ್ಕೆ ಪಾತ್ರರಾಗಲು ಸಾಧ್ಯತೆ ಇದೆ. ದುಷ್ಫಲವಾಗುವದಿಲ್ಲ.

ಆಹಾರಾದಿಗಳ ನಿಯಮೋಲ್ಲಂಘನೆ ಮಾಡಿದವರು (ಅಭಕ್ಷ್ಯಭಕ್ಷಣ ಅಪೇಯಪಾನಾದಿಗಳಲ್ಲಿ ನಿರತರು) ಧೃಡವಾದ ಅಂತಃಶ್ರದ್ಧೆ ಒಡ ಮೂಡಿದಾಗ ನಿಷಿದ್ಧಗಳನ್ನು ತ್ಯಾಗಮಾಡಿ, ಪ್ರಾಯಶ್ಚಿತ್ತಾದಿಗಳೊಡನೆ ಸೌಮ್ಯಮಂತ್ರಸ್ವೀಕಾರ ವಿಷ್ಣುದೀಕ್ಷೆಗಳನ್ನು ಪಡೆಯಬಹುದು. ಪಾಪ ಪರಿಹರಿಸಿಕೊಳ್ಳಲು ವಿಷ್ಣು ಮಹಿಮಾ ಶ್ರವಣ ಮನನಾದಿಗಳೇ ಮುಖ್ಯ ಉಪಾಯ.

ತತ್ವಾಭಿಮಾನಿ ದೇವತೆಗಳಲ್ಲಿ ಶ್ರೀಮುಖ್ಯಪ್ರಾಣನು ಶ್ರೇಷ್ಠನು.

"ಅಥ ತ್ವಮಸಿ ನೋ ನಾಥಸ್ತ್ವದ್ದಾಸಾ ಅಖಿಲಾವಯಂ" **18-17**

ದೇವತೆಗಳೆಲ್ಲರೂ ಸ್ಪರ್ದಿಸಿದ ನಂತರ ಕೊನೆಗೆ ಎಲ್ಲರೂ ಮುಖ್ಯಪ್ರಾಣನನ್ನು ಕುರಿತು ಹೇಳುತ್ತಾರೆ. "ಹೇ ಪ್ರಾಣ, ನೀನೇ ನಮ್ಮೆಲ್ಲರ ಸ್ವಾಮಿಯು ನಾವೆಲ್ಲರೂ ನಿನ್ನದಾಸರು."

ಮುಖ್ಯಪ್ರಾಣನ ಮಹಿಮಾ ತಿಳಿಯುವದು ಅವಶ್ಯಕವಿಧೆ. ಆತನು ಸಕಲಜೀವರಿಗೆ ಚೇಷ್ಟಾ ಪ್ರದನು. ಅವನಿಂದಲೇ ಶ್ವಾಸೋಚ್ಛ್ವಾಸ – ಜೀವನ. ಜೀವರನ್ನು ಅವರವರ ಕರ್ಮಾನುಸಾರ ದೇಹಾಂತರ ಹೊಂದಿಸುವವನು ಅವನೇ. ಪ್ರಳಯ ಕಾಲದಲ್ಲಿಯೂ ಕೂಡ ನಿದ್ರೆ, ಅಜ್ಞಾನಾದಿ ರಹಿತನಾದ್ದರಿಂದ ಈತನನ್ನು "ಪ್ರತಿಭಾತ ಪರಾವರ"ನೆನ್ನುತ್ತಾರೆ.

ಸರ್ವಜೀವರಲ್ಲಿ ಶ್ವಾಸಮಂತ್ರ ಜಪಕರ್ತನು. ಜೀವರಿಗೆ ಬಲ, ಜ್ಞಾನ, ಧೈರ್ಯ, ಬುದ್ಧಿ, ಭಕ್ತಿಶ್ರದ್ಧೆಗಳು ಈತನಿಂದಲೇ. ಮುಖ್ಯ ಪ್ರಾಣನಿಗೆ ಚೇಷ್ಟಕ ಶ್ರೀಹರಿ

"ಬಲಂ ಜ್ಞಾನಂ ಧೃತಿರ್ಬುದ್ಧಿರ್ಭಕ್ತಿಶ್ರದ್ಧಾತ ಏವಹಿ।
ಪ್ರಾಣಸ್ಯಾಸ್ಯಾಪಿ ಸಪ್ರಾಣಃ ಶ್ರೀ ವಿಷ್ಣುಃ ಸಕಲೇಶ್ವರಃ॥18-24॥ (ವಿ.ರ)

ಸರ್ವಕರ್ಮಗಳನ್ನು ಮುಖ್ಯ ಪ್ರಾಣಾಂತರ್ಯಾಮಿ ಶ್ರೀವಿಷ್ಣುವಿಗೆ ಸಮರ್ಪಣೆ ಮಾಡಬೇಕು. ಧೃಡಭಕ್ತಿ ಮಾತ್ರದಿಂದ ವಿಷ್ಣು ಪ್ರಸಾದ ಲಭ್ಯ.

ಸಾಂಸಾರಿಕ ಜೀವರ ತ್ರಿವಿಧ ತಾಪಗಳ ಪರಿಹಾರಕ್ಕೆ ಶ್ರೀವಿಷ್ಣುವನ್ನು ಶರಣು ಹೊಂದುವದೊಂದೇ ಪರಮೋಪಾಯ.

"ಯತ್ರೋದ್ವಿಗ್ನಾ ಇಮೇ ತಾಪೈಃ ಪ್ರಯಾತಾ ಶರಣಂ ಹರಿಂ"19-17

ಶರಣಾಗತಿಯ ಲಕ್ಷಣಗಳನ್ನು ಈ ಮೊದಲೇ ಹೇಳಿದೆ.

ವಿಷಯವೈರಾಗ್ಯದ ಅಭಾವವೇ ಸಂಸಾರದಲ್ಲಿ ದುಃಖ ಪರಂಪರೆಗೆ ಪ್ರಧಾನಕಾರಣ. ಅಭಿಮಾನವು ಜೀವರನ್ನು ಸಂಸಾರ ಚಕ್ರದಿಂದ ಬಂಧಿಸುತ್ತದೆ. ಜೀವರಿಗೆ ಈ. ಸಂಸಾರ ಚಕ್ರವ್ಯೂಹದ ಒಳಗೆ ಪ್ರವೇಶ ಮಾತ್ರ ಗೊತ್ತು, ಆದರೆ ನಿರ್ಗಮನ ತಿಳಿದಿಲ್ಲ. ಶ್ರುತಿ ಸ್ಮೃತಿಗಳು ತಿಳಿಸಿದ ಮಾರ್ಗದಿಂದ ಹೊರಗೆ ಬರಬೇಕು. ಐಹಿಕಾಮುಷ್ಮಿಕ ಸುಖಾಪೇಕ್ಷೆಯನ್ನು ತ್ಯಜಿಸಿ ಕೇವಲ ಶ್ರೀವಿಷ್ಣುಪ್ರೀತ್ಯರ್ಥವಾಗಿ ಶ್ರಮಿಸುವದು ಅವಶ್ಯಕ.

ವಿಷ್ಣುಪುರಾಣ – ವಿಷ್ಣುರಹಸ್ಯ ಗ್ರಂಥಗಳನ್ನು ನೋಡಿದರೆ, ವಿಷ್ಣ್ವಾರಾಧನೆಯ ವಿಷಯದಲ್ಲಿ ತಿಳಿದುಮಾಡುವದೇ ಹೆಚ್ಚಿಗೆ ಇದೆ. ಕಾಯಾ, ವಾಚಾ, ಮನಸಾ ಮಾಡತಕ್ಕ ಸಾಧನಗಳಲ್ಲಿ, ಕಾಯಾ, ವಾಚಾ, ಶೇಕಡಾ 20%ರಷ್ಟು, ಮಾನಸಿಕ ಶೇಕಡಾ80%ರಷ್ಟು. ತಿಳಿದುಮಾಡುವ ಸಾಧನಗಳೆಲ್ಲ ಬಾಲ್ಯಾವಸ್ಥೆಯಲ್ಲಿ ಆಗಲಾರವು. ಆಗ ಕಾಯಾ-ವಾಚಾ ಕರ್ಮಗಳು ಆಗುತ್ತವೆ. ಆಗ ಮಾಡಿದ್ದೂ ಹರಿ ಪ್ರೀತಿಯೇ ಯಾಕಂದರೆ ಕಾಮ್ಯ ಕರ್ಮಗಳಲ್ಲ. ವಿಷ್ಣು ಮಹಿಮಾ ಶ್ರವಣ ಮನನಾದಿಗಳು, ಇಂದ್ರಿಯಜಯ, ಸ್ಥಿರಾಸನ ಪ್ರಾಣಾಯಾಮಗಳು, ಉಪೋಷಣ ವ್ರತಗಳು, ಜ್ಞಾನ, ಭಕ್ತಿ, ವೈರಾಗ್ಯದಾರ್ಢ್ಯಾದಿಗಳು. ಸರ್ವಕರ್ಮಸಮರ್ಪಣೆ,

ಉಕ್ತಾನುಸಂಧಾನಗಳು ಇತ್ಯಾದಿಗಳೆಲ್ಲವೂ ಬುದ್ಧಿಪ್ರೌಢಿಮೆ ಬಂದಾಗ ತಿಳಿದು ನಿಷ್ಠೆಯಿಂದ ಮಾಡುವ ಕ್ರಿಯೆಗಳು. ಆದ್ದರಿಂದ ತಡವಾಯಿತಲ್ಲವೆಂದು ನಾವು ವ್ಯಥೆಪಡಬೇಕಾದ್ದಿಲ್ಲ. ಒಂದುರೀತಿ ಒಳ್ಳೆಯದೇ. ತಿಳಿದು ಶ್ರದ್ಧಾನಿಷ್ಠೆಯಿಂದ ಮಾಡುವದೇ ಉತ್ತಮಸಾಧನ.

ಕಾಲವೈಪರೀತ್ಯದಿಂಧ ಸಾಧನ ಕ್ಷೇತ್ರಕ್ಕೆ ತಡವಾಗಿ ಬಂದವರು ನಾವು ಮಾತ್ರ ಅಲ್ಲ. ಶ್ರೀಮನ್ಮಧ್ವಾಚಾರ್ಯರ ಪೂರ್ವಾಶ್ರಮದ ಅನುಜರಾದ - ತರುವಾಯದಲ್ಲಿ ಶ್ರೀವಿಷ್ಣುತೀರ್ಥರೆಂದು ಪ್ರಸಿದ್ಧರಾದವರೂ ಒಬ್ಬರು. ಸುಮಧ್ವವಿಜಯದ ಸರ್ಗ - ೧೫ರಲ್ಲಿ ಬರತಕ್ಕ ಅವರ ಸಾಧನ ವಿಚಾರಗಳು ಸಾಕಷ್ಟು ಸ್ಫೂರ್ತಿಯನ್ನು ಕೊಡುತ್ತವೆ. ಇವರೂ ಜೀವನದಲ್ಲಿ ವಿವಿಧ ಸಾಂಸಾರಿಕ ದುಃಖದರ್ಶನದಿಂದ ವೈರಾಗ್ಯಹೊಂದಿ ತುರೀಯ ಆಶ್ರಮ ಪಡೆದರು. ಆದರೆ ಅವರು ಮಾಡಿದ ಸಾಧನದ ಬಗೆ ಬಹುತೀವ್ರ ಕಠಿಣ. ಬಹುಕಾಲದಿಂದ ಶಿಷ್ಯರಾಗಿದ್ದ ಪದ್ಮನಾಭಾದಿಯತಿಗಳು ಆಚಾರ್ಯರ ಜೊತೆಯಲ್ಲಿದ್ದು ಜ್ಞಾನ ಭಕ್ತ್ಯಾತಿಶಯಗಳನ್ನು ಪಡೆದು ಪ್ರಥಮಶ್ರೇಣಿಯ ಶಿಷ್ಯರಾಗಿದ್ದರು. ಆದರೆ ತಡವಾಗಿ ಈ ಗುಂಪಿಗೆ ಸೇರಿದ ಶ್ರೀವಿಷ್ಣುತೀರ್ಥರ ದೀಕ್ಷೆ ಭಕ್ತಿ ಮನೋದಾರ್ಢ್ಯಾದಿಗಳು ಹೇಗಿದ್ದವೆಂದು ಈ ಕೆಳಗಿನ ಶ್ಲೋಕವು ತಿಳಿಸುತ್ತದೆ.

"ಚತುರೋಽಸೌ ಪ್ರವಚನೇ ಮನುಸಂಸಿದ್ಧಿಮಾನ್ಮನಃ।
ಸಂಖ್ಯಾವಮಾಂ ಪೂರಣೀಮಾಗಾನ್ಮಧ್ವದಾಸಮಿತಿವ್ಯಧಾತ್॥"

(ಸುಮಧ್ವವಿಜಯ)

"ಶ್ರೀವಿಷ್ಣುತೀರ್ಥರು ಮಧ್ವಶಾಸ್ತ್ರ ಪ್ರವಚನದಲ್ಲಿ ಚತುರರಾಗಿದ್ದರು. ಮಂತ್ರಸಿದ್ಧಿಗಳನ್ನು ಪಡೆದವರಾಗಿದ್ದರು. ಆದರೆ ಮಧ್ವರ ಶಿಷ್ಯರನ್ನು ಗಣನೆ ಮಾಡುವಾಗ ಇವರನ್ನು ಎರಡನೆಯವರು "ಅಥವಾ ಮೂರನೆಯವರು ಎಂದು ಎಣಿಸದಿರಲಿ, ಇವರೂ ಸಹ ಶಿಷ್ಯಾಗ್ರಗಣ್ಯರೆಂದೇ ಎಣಿಸುವಂತಾಗಬೇಕೆಂದು ಮನೋಸಂಕಲ್ಪ ಮಾಡಿದರಷ್ಟೇ ಅಲ್ಲದೆ ಅದಕ್ಕೆ ತಕ್ಕಂತೆ ಶಾಸ್ತ್ರವ್ಯಾಸಂಗ/ಪ್ರವಚನಗಳನ್ನು ಮಾಡಿದರು ಮತ್ತು ಕಠಿಣತರ ತಪಸ್ಸನ್ನಾಚರಿಸಿ ಶ್ರೀಮಧ್ವರ ಕೃಪೆಗೆ ಪಾತ್ರರಾದರು." ಇವರ ಧೃಡ ಭಕ್ತಿ, ಸತತ ಪರಿಶ್ರಮ, ವಿದ್ಯಾರ್ಜನ, ದೇಹದಂಡನ, ತಪಸ್ಸು, ಆಸಕ್ತಿ, ಪ್ರೀತಿ ಇತ್ಯಾದಿಗಳಿಂದ ಪ್ರೀತರಾದ ಶ್ರೀಮಧ್ವರು ಇವರಿಗೆ ಎಷ್ಟು ಅನುಗ್ರಹ

ಮಾಡಿದರೆಂಬದನ್ನು ಹೇಳಲು ಸಾಧ್ಯವಿಲ್ಲ "ಸಚಿತ್ತಾದ್ವಿಷಯತ್ವಾದ್ವಾ ಗೋಪ್ಯತ್ವಾದ್ವಾ ನ ವರ್ಣ್ಯತೇ" ॥

ಹೀಗೆ ನಾವು ಅಧ್ಯಾತ್ಮ ಕ್ಷೇತ್ರದಲ್ಲಿ ಸ್ವಲ್ಪ ತಡವಾಗಿ ಪ್ರವೇಶಿಸಿದರೂ ಧೃಡವಾದ ಶ್ರದ್ಧಾಭಕ್ತಿಗಳಿಂದ ಶ್ರೀವಿಷ್ಣುತೀರ್ಥರಿಂದ ಸ್ಫೂರ್ತಿಹೊಂದಿ, ಶ್ರೀವಿಷ್ಣುಭಕ್ತಪ್ರವರರಾದ ಶ್ರೀಮನ್ಮಧ್ವರ ಅನುಗ್ರಹ ಸಂಪಾದಿಸಿ ಇನ್ನೂ ಕಾಲವಿಳಂಬ ಮಾಡದೇ ಸಾಧನ ಕ್ಷೇತ್ರದಲ್ಲಿ ಮುಂದೆ ಸಾಗಿ ಶ್ರೀವಿಷ್ಣುವಿನ ಕೃಪಾ/ಪ್ರಸಾದಕ್ಕೆ ಪಾತ್ರರಾಗುವಾ.

—— o ——

# ಆಧ್ಯಾತ್ಮಿಕ ಆಶಾಕಿರಣಗಳು
# ಭಾಗ ೫

ಈ ಶೀರ್ಷಿಕೆಯ ಪ್ರಥಮಭಾಗದಲ್ಲಿ ಯಾರೊಬ್ಬ ಸಾಧಕನು, ಜೀವನದಲ್ಲಿ ವಿಳಂಬವಾಗಿ ಭಗವಂತನ ಅಸ್ತಿತ್ವದ ಬಗ್ಗೆ ಪ್ರಜ್ಞೆಮೂಡಿ ಅವನ ಮಹತ್ವಾದಿಗಳನ್ನು ಅರಿತು, ಆತನನ್ನು ಸಾಕ್ಷಾತ್ಕರಿಸುವ ಉದ್ದೇಶದಿಂದಲೂ ಮೋಕ್ಷಾರ್ಥಿ (ಮುಮುಕ್ಷು) ಯಾಗಿಯೂ ಸಾಧನಮಾಡಲು ಪ್ರಯತ್ನಶಾಲಿಯಾದರೆ ಅವನಿಗೆ ದೇವದೇವತೆಗಳು ಶಾಸ್ತ್ರಗಳು ಸಾಕಷ್ಟುಪ್ರೋತ್ಸಾಹಿಸುತ್ತವೆ. ನಿವೃತ್ತಿಮಾರ್ಗದಲ್ಲಿ ಅವನ ಪ್ರವೃತ್ತಿಯನ್ನು ಅನುಮೋದಿಸುತ್ತವೆ. ಆದರೆ ಇವನಲ್ಲಿ ಜೀವನದ ವ್ಯರ್ಥಕಾಲ ಹೋದದ್ದಕ್ಕೆ ಪಶ್ಚತ್ತಾಪ ಮತ್ತು ಭಗವದ್ವಿಷಯುಕ ಶ್ರದ್ಧಾಭಕ್ತಿಗಳು ಮಾತ್ರ ಇರಬೇಕು. ಆಶಾಕಿರಣಗಳು ಇವನತ್ತ ಪ್ರಸರಿಸುತ್ತವೆ.

ಪ್ರಥಮಭಾಗದಲ್ಲಿ ನಾವು ಶ್ರೀಮದಾನಂದ ತೀರ್ಥ ಭಗವತ್ಪಾದಾಚಾರ್ಯರಿಂದ ರಚಿತವಾದ ಶ್ರೀಕೃಷ್ಣಾಮೃತ ಮಹಾರ್ಣವ ದಿಂದಲೂ, ದ್ವಿತೀಯ ಭಾಗದಲ್ಲಿ ಶ್ರೀಕೃಷ್ಣಪರಮಾತ್ಮನು ಅರ್ಜುನನಿ ಗುಪದೇಶಿಸಿದ ಲೋಕಪ್ರಸಿದ್ಧವಾದ ಶ್ರೀಮದ್ಭಗವದ್ಗೀತೆ, ಗೀತಾರ್ಥಬೋಧಕ ಗೀತಾಭಾಷ್ಯ ಮತ್ತು ಗೀತಾತಾತ್ಪರ್ಯಗಳಿಂದಲೂ, ತೃತೀಯಭಾಗದಲ್ಲಿ ಶ್ರೀಮದ್ಭಾಗವತ ತದ್ಭಾವಬೋಧಕ ಭಾಗವತ ತಾತ್ಪರ್ಯ ನಿರ್ಣಯದಿಂದಲೂ, ಚತುರ್ಥಭಾಗದಲ್ಲಿ ಶ್ರೀವಿಷ್ಣುಪುರಾಣ ಮತ್ತೂ ಶ್ರೀವಿಷ್ಣುರಹಸ್ಯಗಳಿಂದಲೂ ಹೊರಹೊಮ್ಮಿದ ಆಧ್ಯಾತ್ಮಿಕ ಆಶಾಕಿರಣಗ ಳಿಂದ ಅತ್ಯಂತ ಪ್ರೋತ್ಸಾಹ ಹೊಂದಿದೆವು.

ಪ್ರಕೃತ ಈ ಲೇಖನದ ಅಂತಿಮಭಾಗವಾದ ಈ ಐದನೇ ಭಾಗದಲ್ಲಿ ಸಕಲಶಾಸ್ತ್ರಗಳ (ದ್ವೈತತತ್ವಗಳ) ಸಾರವನ್ನು ಪ್ರಾಕೃತ ಭಾಷೆಯಲ್ಲಿ ಗಾನರೂಪದಲ್ಲಿ ದಾಸರಾಯರ ಹೃದಯದಿಂದ ಭಕ್ತಿಭಾವದಿಂದ

ಹೊರಹೊಮ್ಮಿ ನಮ್ಮ ಕಡೆಗೆ ಧಾವಿಸಿ ಬರತಕ್ಕ ಆಶಾಕಿರಣಗಳನ್ನು ಸ್ವಾಗತಿಸುವಾ.

ದೈಶಿಕ, ಕಾಲಿಕ, ಸಾಮಾಜಿಕ ಮತ್ತು ರಾಜಕೀಯ ವಿಪ್ಲವಗಳಿಗೊಳಗಾಗಿ ಈ ಕಾಲದಲ್ಲಿ ನಾವು ಬಾಲ್ಯ ಯೌವನಗಳಲ್ಲಿ ವ್ಯರ್ಥಕಾಲಕಳೆದು ಭಗವಂತನ ವಿಷಯಕವಾಗಿ ತೀರ ವಿಳಂಬವಾಗಿ ಪ್ರಜ್ಞೆಮೂಡಿತು ಎಂದುಕೊಂಡು ಶಾಸ್ತ್ರಗಳಿಂದ ಸಹಾಯ ತೆಗೆದುಕೊಳ್ಳಬಯಸಿ ಪ್ರಯತ್ನಿಸುತ್ತಿದ್ದೇವೆ.

ಪ್ರಕೃತ ದಾಸರಾಯರ ವಾಣಿಯನ್ನು ನೋಡಿದರೆ ಇಂಥ ಸಂದರ್ಭಗಳು ನಮ್ಮ ಪೂರ್ವಿಕರಿಗೂ ಒದಗಿದಂತೆ ತೋರುತ್ತದೆ. ಆಕಾಲದಲ್ಲಿಯೂ ಕೂಡ ನಮ್ಮಹಾಗೆ ಮೊದಲು ಕಾಲಕಳೆದು ಕೆಟ್ಟಮೇಲೆ ಬುದ್ಧಿಬಂದವರು ಕೆಲವರಾದರು ಇದ್ದಾರೆಂದು ಇಲ್ಲಿ ಮುಂದೆ ಸಂಗ್ರಹಮಾಡತಕ್ಕ ಅವರ ಪದಗಳಿಂದ ವ್ಯಕ್ತವಾಗುತ್ತದೆ.

ಈ ಪದಗಳನ್ನು ರಚಿಸಿದ ಪುರಂದರ, ವಿಜಯ, ಗೋಪಾಲ, ಜಗನ್ನಾಥ, ಪ್ರಾಣೇಶ ದಾಸವರ್ಯರಾರೂ ಈ ಮುಂದಿನ ಪದಗಳಲ್ಲಿ ವಿವರಿಸಿದ ಶಾಸ್ತ್ರವಿರೋಧ ಕೃತ್ಯಗಳನ್ನು ಆಚರಿಸುವ ಸಾಧ್ಯತೆಯೇ ಇಲ್ಲ. ಇವರುಗಳೆಲ್ಲಾ ದೇವಾಂಶ ಸಂಭೂತರು. ಭೂಲೋಕಕ್ಕೆ ಬಂದಮೇಲೆ ಪಾಂಚಭೌತಿಕ ಶರೀರಾದಿಗಳಿಂದಲೂ ಮಾನುಷಾನ್ನದಿಂದಲೂ ಅಂತಃಪ್ರಜ್ಞೆ ಆಚ್ಛಾದಿತವಾಗುವ ಸಂಭವ ಉಂಟು. ಆದರೆ ಪದಗಳಲ್ಲಿ ವಿವರಿಸಿದ ಕೃತ್ಯಗಳನ್ನು ಎಸಗಲು ಅಂಥ ಪ್ರೇರಣೆಯೇ ಅವರಿಗಾಗುವದಿಲ್ಲ.

ಪುರಂದರದಾಸರು, ಶ್ರೀನಿವಾಸನಾಯಕರಾಗಿದ್ದಾಗ ಲೋಭ ಪ್ರಕಟಮಾಡಿದ್ದಾರೆ. ಜಗನ್ನಾಥದಾಸರು ಒಂದು ಸಮಯದಲ್ಲಿ ಪಾಂಡಿತ್ಯದ ಅಭಿಮಾನವನ್ನು ವ್ಯಕ್ತಿಮಾಡಿದ್ದರು. ಆದರೆ ಇವೆಲ್ಲವೂ ಪದಗಳಲ್ಲಿ ಅದ ವರ್ಣನೆಗಳಂತಿಲ್ಲ. ಇವು ತೀರ ಕನಿಷ್ಟಪಕ್ಷದ ಮಾನವನ ದೌರ್ಬಲ್ಯಗಳು. ಇವರಿಗೆಲ್ಲ ಅಂತಃಪ್ರಜ್ಞೆ ಪ್ರಕಟವಾದ ಮೇಲಂತೂ ಅವರ ಜೀವನವೇ ಬೇರೆ. ಇವರೆಲ್ಲ ಕೇವಲ ಸಾತ್ವಿಕ ಪರಮಭಗವದ್ಭಕ್ತರು. ಮಾನವ

ಜನಾಂಗವನ್ನು ಭಗವಂತನ ಮಹಿಮೆಗಳನ್ನು ತಿಳಿಸಿ ಭಕ್ತಿ ಉತ್ಪನ್ನ ಮಾಡಿಸಿ ಉದ್ಧರಿಸಲು ಬಂದ ಮಹಾತ್ಮರಿವರು.

ಹಾಗಾದರೆ ಪದಗಳಲ್ಲಿ ಇಷ್ಟು ಪಾಪಕೃತ್ಯಗಳ ವರ್ಣನೆ ಏಕೆ ಇದೆ? ಅಂದರೆ ನಾನು – ನನ್ನಂಥವರು (ಆಗ ಜನ್ಮವೆತ್ತಿದಾಗ) ಜೀವನದಲ್ಲಿ ಬುದ್ಧಿಪೂರ್ವಕವೋ ಆಕಸ್ಮಿಕವೋ ಪಾಪಕರ್ಮವನ್ನೆಸಗಿದನಂತರ, ಲೋಕದಲ್ಲಿ ಎಲ್ಲರಿಂದಲೂ ನಿಂದಿತರಾಗಿ, ಬಂಧುಬಾಂಧವರೆಲ್ಲ ವಿರೋಧಿಗಳಾಗಿ, ಜೀವನ ಬೇಸರವಾಗಿ, ಅದು ಶಾಸ್ತ್ರೀಯ ಅಪರಾಧವೆಂದು ತಿಳಿದು, ಪಶ್ಚಾತ್ತಾಪ ಉಂಟಾಗಿ, ಎಲ್ಲರೂ ನಮ್ಮನ್ನು ಪೂರ್ಣಕೈಬಿಟ್ಟಾಗ ಪರಮಾತ್ಮನೇ ಗತಿ ಎಂದು ನಂಬಿ ಅವನಿಗೆ ನಮ್ಮ ಅಪರಾಧಗಳನ್ನು ಪಶ್ಚಾತ್ತಾಪ ಪೂರ್ವಕ ನಿವೇದನೇ ಮಾಡಿ, ಕ್ಷಮೆಕೇಳಿ ರಕ್ಷಿಸೆಂದು ಪ್ರಾರ್ಥಿಸುವದು. ಪದಗಳಲ್ಲಿ ವರ್ಣನೆಯು ಇದೇ ರೀತಿಯಲ್ಲಿದೆ. ನನಗೆ ನನ್ನಂಥವರಿಗೆ ಪದಗಳು ಹೃದ್ಯವಾಗಿವೆ. ಯಾಕೆಂದರೆ ಇವು ನಮಗೆ ಅನ್ವಯಿಸುತ್ತವೆ. ಒಂದಿಲ್ಲೊಂದು ಕಾಲದಲ್ಲಿ ಅಂಥಪಾಪಕಾರ್ಯಗಳು ಕಾಯಿಕ, ಮಾನಸಿಕ, ವಾಚನಿಕವಾಗಿ ಸಂಭಾವ್ಯಕಗಳಾಗಿವೆ.

ಒಂದು ರೀತಿಯಲ್ಲಿ ನೋಡಿದರೆ ಈ ಪದಗಳೆಲ್ಲವೂ, ಪಾಪಕರ್ಮಿಯು ಭಗವಂತನಿಗೆ ಬರೆದುಕೊಂಡ ಅರ್ಜಿಯ ಮಾದರಿಗಳಾಗಿವೆ. ಪಶ್ಚಾತ್ತಾಪವೇ ಒಂದು ತರಹದ ಪ್ರಾಯಶ್ಚಿತ್ತ. ದಾಸರಾಯರು, ಭಗವಂತನಲ್ಲಿ ಹೇಗೆ ಕರ್ಮಗಳನ್ನು ನಿವೇದಿಸಿ, ಕ್ಷಮೆಕೇಳಿ ರಕ್ಷಣೆ ಪಡೆಯುವ ಪ್ರಕಾರವನ್ನು ತಿಳಿಸಿದ್ದಾರೆನ್ನಬಹುದು.

ವಿಳಂಬಸಾಧಕರಿಗೆ ಅನುಕೂಲವಾದ ಈ ಪದಗಳನ್ನು ಎರಡು ಭಾಗವಾಗಿ ನೋಡುವಾ.

೧. ಪಶ್ಚಾತ್ತಾಪಪೂರ್ವಕ ಜೀವನದ ವ್ಯರ್ಥಕಾಲಹರಣ ನಿವೇದನೆ.

೨. ಅಧ್ಯಾತ್ಮಮಾರ್ಗದಲ್ಲಿ ಭಗವತ್‌ಸಾಕ್ಷಾತ್ಕಾರದ ಸುಲಭೋಪಾಯಗಳು.

೧. ಮೊದಲು ಕೆಲವು ಪದಗಳಿಂದ ಪೂರ್ವಾರ್ಧ ಆಯಸ್ಸನ್ನು ವ್ಯರ್ಥಕಳೆದ ರೀತಿಯನ್ನು ದಾಸರಾಯರ ವಾಕ್ಯಗಳಿಂದ ನೇರವಾಗಿ ನೋಡುವಾ. ಇವೆಲ್ಲವೂ ಕನ್ನಡದ ಸುಲಭ ಭಾಷೆಯಲ್ಲಿ ಸ್ಪಷ್ಟಾರ್ಥ ದ್ಯೋತಕವಾದ್ದರಿಂದ ಹೆಚ್ಚಿಗೆ ಬರೆಯಬೇಕಾದ ಪ್ರಸಕ್ತಿಯೇ ಇಲ್ಲ.

ಪ್ರಾಯಶಃ ಈ ಪದಗಳಲ್ಲಿ ಪಶ್ಚಾತ್ತಾಪೂರ್ವಕ ಕರ್ಮನಿವೇದನೆ, ಕ್ಷಮಾಪ್ರಾರ್ಥನೆ, ಪರಿಹಾರಪ್ರಾರ್ಥನೆ, ಅಂತಿಮಹಂತವಾದ ಶರಣಾಗತಿ ಇವುಗಳನ್ನು ಕಾಣಬಹುದು.

(i) ನಾಮಾಡಿದಕರ್ಮ ಬಲವಂತವಾದರೆ।
ನೀಮಾಡುವದೇನೋ ಹರಿಯೇ॥

ಅತಿಥಿಗಳಿಗೆ ಅನ್ನ ಕೊಟ್ಟವನಲ್ಲ ಪರ।
ಸತಿಯರಸಂಗಗಳ ಬಿಟ್ಟವನಲ್ಲ॥
ಮತಿಹೀನನಾಗಿ ಮರುಳಾಗಿದ್ದನೋ ದೇವ।
ಗತಿಯಾವದಿನ್ನು ಗರುಡಗಮನಕೃಷ್ಣ ॥೧॥

ಅನ್ನಪಾನಂಗಳಿಗೆ ಅಗ್ರಗಣ್ಯನಾಗಿ।
ಸ್ನಾನ ಜಪ ಸಂಧ್ಯಾನ ಜಪವ ನೀಗಿ॥
ದಾನವಾಂತಕ ನಿನ್ನಧ್ಯಾನವ ಮಾಡದೇ।
ಶ್ವಾನನಂತೆ ಮನೆಮನೇ ತಿರುಗುತಲಿದ್ದೇ ॥೨॥

ಇನ್ನಾದರು ನಿನ್ನ ದಾಸರಸಂಗವಿತ್ತು ।
ಮನ್ನಿಸಿ ಸಲಹಯ್ಯ ಮನ್ಮಥ ಜನಕ॥
ಅನ್ಯರೊಬ್ಬರ ಕಾಣೆ ಆದರಿಸುವವರಿಲ್ಲ ।
ಪನ್ನಗಶಯನ ಶ್ರೀಪುರಂದರವಿಠಲನೇ ॥೩॥

(ii) ಸಾಕು ಸಾಕಿನ್ನೀ ಸಂಸಾರಸುಖವು ।
ಶ್ರೀಕಾಂತ ನೀನೊಲಿದು ಕರುಣಿಸೈ ಹರಿಯೇ ॥
ಬಾಲ್ಯದಲಿ ಕೆಲವು ದಿನ ಬರಿದೆ ಹೋಯಿತು ಹೊತ್ತು ।
ಮೇಲೆ ಗೋಳಿಟ್ಟು ವಿದ್ಯೆಯನು ಕಲಿತು ॥

ಮೇಲೆ ಯೌವನ ಬರಲು ತನುಮೂಲ ವನುಮರೆತು।
ಬಾಲೆಯರನರಸಿ ನಾ ಮರುಳಾದೆ ಹರಿಯೆ ॥೪॥
ದೇವನೇ ನಾನಿನ್ನು ಯೋನಿಮಾರ್ಗದ ಒಳಗೆ ।
ಈ ವಿಧದಿ ಭವಣೆ ಬಡಲಾರೆ ಬಹಳ॥
ಕಾವಕರುಣೆಯ ನಮ್ಮ ಪುರಂದವಿಠಲನೇ ।
ಭಾವ ಭಕುತಿಯ ಕೊಟ್ಟು ರಕ್ಷಿಸೋ ಹರಿಯೇ ॥೧೨॥

(iii) ಕಾಯಲಾರೆನು ಕೃಷ್ಣ ಕಂಡವರ ಬಾಗಿಲನು॥
ಉದಯಕಾಲದಲೆದ್ದು ಸ್ನಾನವಿಧಿಯನು ಬಿಟ್ಟು ।
ಪದುಮನಾಭನ ಸ್ಮರಣ ವೊದಲಿಲ್ಲದೇ ॥
ಮುದದಿ ನಿನ್ನರ್ಚಿಸದೆ ಪರರಸದನವ ಪೊಕ್ಕು ।
ಒದಗಿಸೇವೆಯ ಮಾಡಿ ಅವರ ಬಾಗಿಲನು ॥೧॥

ಇಂತು ನಾಚಿಂತೆಯಲಿ ನಿನ್ನನೇ ನೆನೆಯದೇ ।
ಭ್ರಾಂತಿ ಎಂತೆಂಬ ಹೆಬ್ಬಲೆಯಲಿ ಸಿಲುಕಿ ॥
ಅಂತ್ಯವನು ನಾಕಾಣೆ ಆದರಿಸುವವರಿಲ್ಲ ।
ಚಿಂತೆಯ ಬಿಡಿಸಯ್ಯ ಪುರಂದರ ವಿಠಲ ॥೨॥

(iv) ಕಾಯಬೇಕೆನ್ನ ಗೋಪಾಲ ।
ಒಂಧುಪಾಯವನರಿಯೆ ಭಕ್ತರ ಪಾಲ ॥
ವಿತ್ತದೊಳಗೆ ಮನವಿಟ್ಟು । ನಿನ್ನ ।
ಉತ್ತಮನಾಮದ ಸ್ಮರಣೆಯ ಬಿಟ್ಟು ।
ನ್ಮತ್ತನಾಗಿ ಮತಿಗೆಟ್ಟು । ಇದು ।
ಚಿತ್ತದೊಳಗೆ ತಿಳಿದು ಬಲುದಯವಿಟ್ಟು ॥೨॥

ಈ ರೀತಿ ಪಾಪಾಗಳಿಗೆಲ್ಲ । ಅನ್ಯ ।
ನರರೇನು ಅರಿವರು ಯಮಧರ್ಮಬಲ್ಲ ।
ನರಕಕ್ಕೆ ಒಳಗಾದೆನಲ್ಲ । ಸಿರಿ ।
ವರನಾರಾಯಣ ಪುರಂದರವಿಠಲ ಬಲ್ಲ ॥೩॥

(v) ಉಬ್ಬದಿರು ಕೊಬ್ಬದಿರು ಎಲೆಮಾನವ ॥ಪ॥
ಹೆಬ್ಬುಲಿಯಂತೆ ಯಮು ಬೊಬ್ಬಿಡುತ ಕಾದಿರುವ ॥ಅ.ಪ॥
ಮಾಳಿಗೆ ಮನೆಯೆಂದು ಮತ್ತೆ ಸತಿಸುತರೆಂದು ।
ಜಾಳಿಗೆ ಧನಧಾನ್ಯ ಪಶುಗಳೆಂದು ॥
ವೇಳೆತಪ್ಪದೆ ತಿಂಬಕೂಳು ತನಗುಂಟೆಂದು ।
ಗಾಳಿಗಿಕ್ಕಿದ ದೀಪಬಾಳು ಬದುಕೆಲ್ಲ ॥೪॥

ಅಸ್ಥಿರ ಭವದೊಳಗೆ ಅತಿಶಯಗಳೆಣಿಸದಲೇ ।
ವಸ್ತು ಇದರಲಿ ಕೇಳುವೈರಾಗ್ಯವ ॥
ವಿಸ್ತಾರಮಹಿಮ ಶ್ರೀಪುರಂದರ ವಿಠಲನ ।
ಸ್ವಸ್ತಚಿತ್ತಿದಿ ನೆನದು ಮುಕ್ತಿಪಡೆಮನುಜ ॥೫॥

(vi) ಏಕೆನ್ನೊಳಿಂತು ಕೃಪೆ ಇಲ್ಲ ಹರಿಯೆ ।
ಕಾಕು ಮಾಡದೆ ಕಾಯೋ ಸಂಗದೊಳು ಬಳಲಿದೆನು ॥ಪ॥
ಕಂದರ್ಪಬಾಧೆಯಿಂ ಮಾನಿನಿಯರೊಶನಾಗಿ ।
ಮಂದಮತಿಯಿಂದ ನಾ ಮರುಳಾದೆನು ॥
ಸಂದಿತ್ತೈಯೌವನವು ಬುದ್ಧಿಬಂದಿತು ಈಗ ।
ಸಂದೇಹಬಿಡದೇ ನೀ ಕರುಣಿಸೈ ಎನ್ನ ॥೧॥

ಅಟ್ಟಮೇಲೆ ಒಲೆಯು ಉರಿಯುವಂತೆ ಎನಗೀಗ ।
ಕೆಟ್ಟಮೇಲೆ ಅರಿವು ಬಂದಿತಯ್ಯ ।
ನೆಟ್ಟನೇ ಪುರಂದರ ವಿಠಲನೇ ಕೈಬಿಡದೇ ।
ದೃಷ್ಟಿಯಿಂದಲಿ ನೋಡಿ ಪಾಲಿಸಯ್ಯ ॥೭॥

(vii) ಸಾಕು ಸಂಸಾರ ತೆರೆಯು ನೂಕಲಾರೆನು ।
ಬೇಕು ನಿನ್ನಚರಣಕಮಲ । ಬೇಡನ್ಯತ್ರ ಗತಿಯು ಕಾಣೆ ॥ಪ॥
ತುಂಡು ತುತ್ತು ಕೂಳಿಗಾಗಿ ।
ಕಂಡವರ ಕಾಡಿಬೇಡಿ ॥
ಹಿಂಡಿ ಹಿಪ್ಪೆ ಮಾಡಿಮನವ । ಹೀನಗೊಳಿಸಿದೆ ॥
ಉಂಡುಬಾರದ ಊಟವನ್ನು ।
ಕಾಣಬಾರದ ಕರ್ಮವನ್ನು ।

ಗುಂಡಿಗಾರರಕೇರಿಗೆ ಸಿಕ್ಕಿ । ಚಂಡಿಗಿಂತ ಹಗುರನಾದೆ ॥೩॥
ಇಷ್ಟು ದಿನದಿ ಜನರಕ್ಕೈಯು ।
ನಿಷ್ಟುರಾದ ಮಾತು ಕೇಳಿ ।
ಕಷ್ಟಕಾಲ ಬಂತು ಫಳಿಗೆ । ಕಳೆಯಲಾರೆನು ॥
ಇಷ್ಟರ ಮೇಲೆ ನಿನ್ನ ಮನಸು ।
ವಿರಕವಿಲ್ಲದೇ ಕೇಳು ।
ಇಷ್ಟನೀನಹುದು ಪುರಂದರ । ವಿಠಲ ನೀನಲ್ಲದಿಲ್ಲ ॥೫॥

(viii) ಭಂಡನಾದೆನು ನಾನು ಸಂಸಾರದಿ ।
ಕಂಡುಕಾಣದ ಹಾಗೆ ಇರಬಹುದೇ ಹರಿಯೇ ॥ಪ॥
ಬುದ್ಧಿಹೀನರ ಮಾತು ಕೇಳಿ ಮೋಸಹೋದೆ ।
ಶುದ್ಧಿಲ್ಲದೆ ಮನವು ಕೆಟ್ಟು ಹೋಯ್ತು ।.
ಮಧ್ವನುತ ಪುರಂದರ ವಿಠಲನೆ ತತ್ವ ।
ಸಿದ್ಧಿಯನು ದಯಗೈದು ಉಳುಹು ನೀತಂದೇ ॥

(ix) ನಿನ್ನನೇನಂಬಿದೆನೊ ನೀ ಎನ್ನ ಸಲಹಯ್ಯ ।
ಎನ್ನ ಗುಣದೋಷಗಳ ಎಣಿಸಬೇಡಯ್ಯ ॥ಪ॥
ಆಸೆ ಎಂಬದು ಅಜನ ಲೋಕಕ್ಕೆ ಮುಟ್ಟುತಿದೆ ।
ಬೇಸರದೆ ಸ್ತ್ರೀಯರೊಳು ಬುದ್ಧಿ ಎನಗೆ ॥
ವಾಸುದೇವನ ಸ್ಮರಣೆ ಒಮೆ ಮ್ಮಾಡ್ಡವನಲ್ಲ ।
ಕೇಶವನೇ ಕ್ಲೇಶಗಳ ಪರಿಹರಿಸಿ ಕಾಯೋ ॥೧॥

ಈ ತೆರದಿ ಕಳೆದೆನೋ ಇಂದಿರೇಶನೇ ಕಾಲ ।
ಭೀತನಾಗದೆ ಯಮಗೆ ಅಜ್ಞಾನದಿ ॥
ಮಾತೆ ಶಿಶುವನು ಕರೆದು ಮನ್ನಿಸುವ ತೆರನಂತೆ ।
ದಾತಪುರಂದರ ವಿಠಲ ದಯಮಾಡಿ ಸಲಹೋ ॥

(x) ಶಿರಿರಮಣ ತವಚರಣ ದೊರಕುವದು ಹ್ಯಾಂಗಿನ್ನು
ಪರಮಪಾಪಿಷ್ಠ ನಾನೂ ॥ಪ॥ ನರಹರಿಯೇ ನಿನ್ನ ನಾಮಸ್ಮರಣೆ
ಮಾಡದಲೆ ವ್ಯರ್ಥ ನರಕಕ್ಕೆ ಗುರಿಯಾದೆನೋ ॥ಪ॥
ಹೊಸಮನೆಯ ಕಂಡಬಲು ಹಸಿದು ಭೂಸುರರು ಬರೆ ।

ಕೊಸರಿಹಾಕುತ ದಬ್ಬುತ ।
ಶಶಿಮುಖಿಯೆ ಬಾರೆಂದು ಅವಸರದಿ ಬಣ್ಣಿಸಿ
ಹಸನಾಗಿ ಅವಳೊಲಿಸುತ ।
ದಶಮಿ ಏಕಾದಶಿ ದ್ವಾದಶಿ ದಿನಗಳಲಿ
ಅಶನ ವೆರಡ್ವೊತ್ತುನುಣುತ ॥
ಘಸಘಸನೆ ತಾಂಬೂಲ ಪಶುವಿನಂದದಿ ಮೆದ್ದು
ಕುಸುಮಗಂಧಿಯ ರಮಿಸುತ । ಸತತ ॥೧॥

ಸ್ನಾನ ಸಂಧ್ಯಾನ ಅತಿಮೌನ ಗಾಯತ್ರೀ ।
ಭಾನುಗರ್ಘ್ಯವನು ಕೊಡದೇ ।
ಹೀನತತ್ವವಹಿಸಿ ದಾನಧರ್ಮಬಿಟ್ಟು
ಶ್ವಾನನಂದದಿಚರಿಸಿದೆ ।
ಶ್ರೀನಿವಾಸನೆ ನಿನ್ನ ಸಾನುರಾಗದಿ ಪೂಜೆ ।
ನಾನೊಂದು ಕ್ಷಣ ಮಾಡದೆ ॥
ಬೇನೆಬಂದಂತಾಗಿ ಹೀನ ಸಕೇಶಿಕೈಲಿ
ನಾನಾವಿಧನ್ನ ತಿಂದೇ । ನೊಂದೇ ॥೪॥

ಸಿತಿಕಂಠನುತ ಜಗನ್ನಾಥ ವಿಠಲನಿನಗೆ
ನುತಿಸದೇ ಬೆಂಡಾದೆ ಕಾಯೋ । ಹರಿಯೇ ॥೭॥

(xi) ಅನಘಾ ನಿನ್ನಂಘ್ರಿ ಸೇವೆ ಎನಗೆಂತು ದೊರಕುವದೋ ॥ಪ॥
ಮನದ ದುರ್ವಿಷಯದಾಕಾಂಕ್ಷೆಗೆ ಕೊನೆಗಾಣೆ ಕೇಶವ ॥ಅ.ಪ॥
ನೋಡಬಾರದ ರೂಪವನೋಡಿ ನಯನಕಂಗೆಡಿಸಿತೋ ॥
ಆಡಬಾರದ ಜಿಹ್ವೆ ಅತಿ ತುಚ್ಛನ್ನ ಮಾಡಿತೋ ॥
ಮಾಡಬಾರದ ಬಯಕೆಮಾಡಿ ಮನವು ಹೊಲೆಗಲೆಸಿತೋ ।
ನೋಡಲಿಲ್ಲ ಪಾಡಲಿಲ್ಲ ನಿನ್ನ ಧ್ಯಾನ ಮಾಡಲಿಲ್ಲ ಕ್ಷಣವನು ॥೧॥

ಆಲಸ್ಯ ಸಲ್ಲದು ಭವದಿ, ಆರಿಗೆ ಮೊರೆಯಿಡುವೆನೋ ।
ಪಾಲಿಸುವದುಚಿತ ಗುರು, ಗೋಪಾಲ ವಿಠಲಾ ವೆಂಕಟಾ ॥೫॥

ಈ ಮೇಲಿನ ಪದಗಳಿಂದ, ಜೀವನದ ಪೂರ್ವಾರ್ಧ ಕಳೆದ ಮೇಲೆ ಧರ್ಮಮಾರ್ಗದ ಕಡೆಗೆ ಮನಸೆಳೆದಿದೆ ಎನ್ನುವದು ತಿಳಿಯುತ್ತದೆ.

ಎಲ್ಲರಿಗೂ ಕೆಟ್ಟ ಬುದ್ಧಿಯೇ ಇರಬೇಕೆಂಬ ನಿಯಮವಿಲ್ಲ. ಉದಾಸೀನತೆ ಅತಿಯಾದ ಸೋಮಾರಿತನದಿಂದ ಹೀಗಾಗುವ ಸಂಭವವುಂಟು. ಸೋಮಾರಿಸ್ವಭಾವದವರನ್ನು ಸರಿಮಾಡುವದು ಕಷ್ಟ. ದೇವರೇ ಗತಿ.

೨. ಕಾಲವನ್ನು ಕಳೆದದ್ದೇನೋ ಆಯಿತು. ಆದರೆ ಪ್ರಕೃತ ಉಳಿದ ಕಾಲವನ್ನು ಪರಮಾವಧಿ ಸದುಪಯೋಗ ಪಡಿಸಿಕೊಳ್ಳುವ ಮಹತ್ವಾಕಾಂಕ್ಷೆ, ಉತ್ಕಟೇಚ್ಛಾ, ಮನಸ್ಸಿನಲ್ಲಿ ಧೈರ್ಯಸ್ಥೈರ್ಯಗಳು ಪರಮಾತ್ಮನಲ್ಲಿ ಭಕ್ತಿಬಂದ ಮೇಲೆ ಎಲ್ಲವೂ ಸುಗಮವಾಗುತ್ತ ಹೋಗುತ್ತವೆ. ಧರ್ಮಮಾರ್ಗದಲ್ಲಿ ಗತಿಸಲು ಸುಲಭೋಪಾಯಗಳಿವೆ. ಶಾಸ್ತ್ರಗಳಿಂದ ಜ್ಞಾನಿಗಳಿಂದ ಅವುಗಳನ್ನು ತಿಳಿಯುವಾ. ಆಧ್ಯಾತ್ಮಜ್ಞಾನದ ದೀವಟಿಗೆಯನ್ನು ಹಿಡಿದು ಮೋಕ್ಷಮಾರ್ಗದಲ್ಲಿ ಭಕ್ತಜನರೊಡನೆ ಸಾಗುವಾ. ವೈಕುಂಠಪುರ ಸೇರುವಾ. ವಿಷ್ಣುದರ್ಶನ ಮಾಡುವಾ. (ಪಡೆಯುವಾ)

ದಾಸರಾಯರಿಂದುಪದಿಷ್ಟವಾದ ಶಾಸ್ತ್ರಸಾರರೂಪದಲ್ಲಿರುವ ಪದ್ಯಪದ್ಯಸುಳಾದಿಗಳಿಂದ ಕೆಲವು ಸುಲಭ ಸಾಧನಮಾರ್ಗಗಳನ್ನು ಅರಸುವಾ. ಅವುಗಳನ್ನು ಜೀವನದಲ್ಲಿ ಅಳವಡಿಸುವಾ.

(i) ಇನ್ನಾದರು ಹರಿಯ ನೆನೆಕಂಡ್ಯ ಮನುಜ ।
ಮುನ್ನಾದ ದುಃಖವು ನಿಜವಾಗಿ ತೊಲಗುವದು ॥ಪಲ್ಲ॥
ಕೆಟ್ಟ ಈ ಬದುಕುಗಳ ಮಾಡಿದರೆ ಫಲವೇನು
ತಟ್ಟನೇ ಶ್ರೀ ಹರಿಯುಪದವ ನಂಬು ॥
ದಿಟ್ಟಶ್ರೀ ಪುರಂದರ ವಿಠಲ ಗತಿ ಎಂದರೆ ।
ಬಿಟ್ಟು ಹೋಗುವವಯ್ಯ ಕಷ್ಟರಾಶಿಗಳು ॥೫॥

(ii) ಹರಿಯ ನೆನೆಯಿರೋ । ನಮ್ಮ । ಹರಿಯ ನೆನೆಯಿರೋ ॥ಪ॥
ಬರಿಯ ಮಾತನಾಡಿ ಬಾಯ । ಬರಡುಮಾಡಿ ಕೆಡಲುಬೇಡಿ ॥ಅ.ಪ॥
ಇದಕ್ಕೊಳ್ಳಿ ಭವರೋಗಕೌಷಧವನು ॥ಪ॥
ಇಂದ್ರಿಯವ ಜೈಸುವದಕೆ ಇದಕೆ ಇಚ್ಛಾಪಥ್ಯ ॥ಅ.ಪ॥
ವಾಸುದೇವನ ನಾಮ ವಾತವಿಧ್ವಂಸಿನೀ ।
ಜನಾರ್ಧನನ ನಾಮ ಜ್ವರಾಂಕುಶ ॥
ಮಾಧವನ ನಾಮವೇ ಮನಗಂಡ ಮಂಡೂರ ।

ಮಂಗಳಾತ್ಮನನಾಮ ಮಾಲ್ಯವಸಂತ ॥೧॥
ಸದಮಲ ಮನದಿಂದ ನೆನೆನೆನೆದು ।
ಮುದದಿ ಪ್ರಹ್ಲಾದ ಮುಚುಕುಂದ ಧ್ರುವನು ॥
ಸದಮಲೆ ದ್ರೌಪದಿಯು ಅಜಮಿಳನು ಬದುಕಿದರು ।
ಪದುಮಾಕ್ಷಪುರಂದರ ವಿಠಲನೆಂಬೌಷಧವು ॥೫॥

ನಂಬಿಕೆಟ್ಟವರಿಲ್ಲವೋ । ರಂಗಯ್ಯನ । ನಂಬದೇ ಕೆಟ್ಟರೇ ಕೆಡಲೀ ॥ಪ॥
ಅಂಬುಜನಾಭನ ಅಖಿಳ ಲೋಕೇಶನ ಕಂಬುಕಂಧರ ಕೃಷ್ಣ ಕರುಣಾ
ಸಾಗರನ ॥ಅ.ಪ॥
ತರುಳ ಪ್ರಹ್ಲಾದ ಸಾಕ್ಷಿ । ಸರಸಿಯೊಳಿದ್ದ ಕರಿರಾಜನೊಬ್ಬ ಸಾಕ್ಷಿ ॥
ಮರಣ ಕಾಲದಿ ಅಜಮಿಳನು ಮಗನ ಕರೆಯೆ
ಗರುಡನೇರಿಬಂದ ಗರುವರಹಿತನ ॥೧॥

ತರುಣಿ ದ್ರೌಪದಿ ಸೀರೆಯ ದುಃಶಾಸನ । ಸರಸರಸೆಳೆಯುತಿರೆ ।
ಕರುಣೆ ತನ್ನೊಡತಿಯನು ಆಡುವದ ಬಿಟ್ಟು ।
ತ್ವರದಿ ಅಕ್ಷಯವಿತ್ತಶಿರಿಕೃಷ್ಣರಾಯನ ॥೩॥

ರಾಮನಾಮ ಭಜಿಸಿದವಗೆ ಉಂಟೆ ಭವದ ಬಂಧನ ॥ಪ॥
ಕಾಮಹರನ ಸತಿಯು ಸದಾನೇಮದಿಂದ ಭಜಿಸುವ ಶ್ರೀ ॥ಅ.ಪ॥
ಪ್ರಹ್ಲಾದ ದ್ರೌಪದಿ । ವರವಿಭೀಷಣರೆಲ್ಲರು ।
ಹರಿಯ ಸ್ಮರಣೆ ಮಾಡಿ ಸುಖಿ । ಭರಿತರಾಗಲಿಲ್ಲವೇ ॥೨॥

ಗಿರಿಜೆರಾಮ ಮಂತ್ರದಿಂದ । ಪರಮ ಮಂಗಳೆಯಾದಳು ।
ವರದಗೋಪಾಲವಿಠಲನಾಮ । ದುರಿತಕಾನನ ಪಾವಕ ಶ್ರೀ ॥೩॥

ಕಾಮಕ್ರೋಧಗಳನು ತೊರೆದು ।
ಕಾಮನಯ್ಯನ ಕಥೆಯ ಬರೆದು ॥
ಪ್ರೇಮದಿಂದ ಭಜಿಸಿರಯ್ಯ ।
ಪಾಮರರಂತೆ ತಿರುಗದೇ ॥೨॥

ಹಾಳುಹರಟೆಯಾಡಿ ಮನವ
ಬೀಳುಮಾಡಿ ಕೊಳ್ಳಬೇಡಿ ॥
ಏಳುದಿನದ ಕಥೆಯ ಕೇಳಿ ।
ಏಳಿರೋ ವೈಕುಂಠಪುರಕೆ ॥
ಮೆಟ್ಟಿ ಪುಣ್ಯ ಕ್ಷೇತ್ರವನ್ನು ।
ಸುಟ್ಟು ಹೋಗ್ವದಯ್ಯ ಪಾಪ ॥
ಮುಟ್ಟಿ ಭಜಿಸಿರಯ್ಯ ಪುರಂದರ ।
ವಿಠಲನ್ನ ಚರಣಗಳನು ॥೪॥

(iii) ಕಲಿಯುಗದಲಿ ಹರಿ ನಾಮವನೆನೆದರೆ ।
ಕುಲಕೋಟಿಗಳುದ್ಧರಿಸುವವು ॥ಪ॥
ಸುಲಭದ ಮುಕುತಿಗೆ ಸುಲಭನೆಂದೆನಿಸುವ ।
ಜಲರುಹನಾಭನ ನೆನೆಮನವೇ ॥ಅ.ಪ॥
ಸ್ನಾನವನರಿಯೆನು ಮೌನವನರಿಯೆನು ।
ಧ್ಯಾನವನರಿಯೆ ನೆಂದೆನಬೇಡ ॥
ಜಾನಕಿವಲ್ಲಭ ದಶರಥನಂದನ ।
ಗಾನವಿನೋದನ ನೆನೆಮನವೇ ॥೧॥

ಜಪವೊಂದರಿಯೆನು ತಪವೊಂದರಿಯೆನು ।
ಉಪದೇಶ ವಿಲ್ಲೆಂದೆನಬೇಡ ।
ಅಪಾರಮಹಿಮ ಶ್ರೀ ಪುರಂದರ ವಿಠಲನ ।
ಉಪಾಯದಿಂದಲಿ ನೆನೆಮನವೇ ॥

(vi) ಅನುದಿನವು ಶ್ರವಣ ಮನನಾದಿ ಸಾಧನ ಮಾಡೋ ।
ಇನಿತು ಸಂಶಯವೇತಕೋ ಮನುಜಾ ॥ಪ॥
ಏನು ಶಪಥವ ಮಾಡಲೀ ಮತವೆ ಪಿರಿದೆಂದು ।
ಜ್ಞಾನಿಗಳ ಸಮ್ಮತವು ಮನಜಾ ॥ಅ.ಪ.॥
ಗುರುಮಧ್ವರಾಯರೇ ಆತ್ಮರಕ್ಷಕರೆಂದು ।
ಅನಲವನು ನಾಪಿಡಿಯಲಾ ॥
ಸಿರಿಹಯವದನನೇ ಅಮಿತಗುಣಪೂರ್ಣನೆಂದು ।
ಅಶರೀರವನು ನುಡಿಸಲಾ ಮನುಜಾ ॥೫॥

(vii) ದಾಸನಾಗು ವಿಶೇಷನಾಗು ।ಪ।
ಏಸು ಕಾಲಂಗಳ ಕಳೆದು । ಎಂಬತ್ ನಾಲ್ಕು ಲಕ್ಷಜೀವ ।
ಈ ಶರೀರ ತಾನಲ್ಲ ನನ್ನದಲ್ಲ ಮುಂದೆ ಬಾಹೋದಲ್ಲ ॥ಅ.ಪ.॥
ನಾರಾಯಣ ಅಚ್ಯುತಾನಂತ ಕೇಶವನ್ನ
ಸಾರಾಮೃತವನುಂಡುಭಜಿಸೋ
ಲಂಡಜೀವನೇ, ನೀ ಭಂಡಜೀವನೇ ॥೫॥

(viii) ಮನವೇ ಮಾಧವನ ಮರೆತುದರಿಂದೆ, ।
ದಣುವಾಯಿತು ಹಿಂದೆ ।.ಕ್ಷಣವೊಂದು ಬಿಡದಿರು ಕೃಷ್ಣನ ಮುಂದೆ ॥
ಹರಿಯುಂಘ್ರಿಪರಾಗವ ಗ್ರಹಿಸ್ಯಾಘ್ರಣಿಸು ।
ಹರಿಯುವರಿಗೆ ಉಣಿಸು ॥
ಹರಭಕ್ತಿಜ್ಞಾನವೈರಾಗ್ಯವ ಗಳಿಸು ।
ಹರಿಪ್ರಿಯ ಪ್ರಭುಮಧ್ವಾಚಾರ್ಯರ ಪ್ರಿಯುವೋಲ್ ಗಿರಿ
ಪ್ರಸನ್ವೆಂಕಟ ದೊರೆಯನೆ ನಂಬು ॥೫॥

(ix) ಮಲಗಿ ಪರಮಾದರದಿ ಪಾಡಲು ಕುಳಿತುಕೇಳುವ ।
ಕುಳಿತುಪಾಡಲು ನಿಲುವ । ನಿಂತರೆ ನಲಿವ ।
ನಲಿದರೆ ಒಲಿವನಿಮಗೆಂಬ ॥
ಸುಲಭನೋ ಹರಿ ತನ್ನವರ । ನರಘಳಿಗೆ ಬಿಟ್ಟಗಲನು ।
ರಮಾಧವ ನೊಲಿಸಲರಿಯದೆ ಪಾಮರರು ಬಳಲುವರು ಭವದೊಳಗೆ ॥

(x) ಎಲೋ ದಾರಿಕಾರನೆ ಮಲಗಿಕೊಂಬರೆ ಹೀಗೆ
ಬಲುದೂರ ವೈಕುಂಠಪ್ರವಾಸವೋ ॥ಪ॥
ಹಿಂದೆ ಹಲವು ಕವಚಂಗಳ ಕಳಕೊಂಡಿ ।
ಇಂದೀಕವಚವಾದರೂ ಪೋಪದು ॥
ಮುಂದಾದರೆದ್ದು ಸಾಧನ ಪುರಂದರ ವಿಠಲನ ।
ಪೊಂದು ಪೊಳಲನೆ ಬೇಗೆಲೋ ಮನವಾ ॥

(xi). ಚಿಂತೆ ಯಾತಕೋ ಬಯಲ ಭ್ರಾಂತಿ ಏತಕೋ ॥
ಕಂತು ಪಿತನ ದಿವ್ಯನಾಮ ಮಂತ್ರವನ್ನು ಜಪಿಸುವವಗೆ ॥

ಪರದಲ್ಲಿ ಪದವಿಯುಂಟು ಇಹದಲ್ಲಿ ಸೌಖ್ಯ ಉಂಟು ।
ಗುರುಪುರಂದರ ವಿಠಲನ್ನ ಸ್ಮರಣೆಯನ್ನು ಮರೆಯದವಗೆ ॥

(xii) ಫಲವಿದು ಬಾಳ್ದುದಕೆ ಸಿರಿನಿಲಯನ ಗುಣಗಳ
ತಿಳಿದು ಭಜಿಸುವದೆ ॥ಪ॥
ಪವನಮತಾನುಗರವನಾನೆಂತೆಂ । ದವನಿಯೊಳಗೆ ಸತ್ಕವಿಜನರ ।
ಭವನಗಳಲಿ ಪ್ರತಿದಿವಸದಿ ಸುಕಥಾ । ಶ್ರವಣಮಾಡುತಲಿ
ಪ್ರವರನಾಗುವದೇ ॥

(xiii) ನಾಚಿಕೆಗೊಳಬೇಡ ಮನದಲಿ ಯೋಚಿಸಿ ಕೆಡಬೇಡ ॥ಪ॥
ನೀಚವೇನೋ ನಮ್ಮಚ್ಯುತನೋಲಗ ಮೆಚ್ಚಿಕೊಟ್ಟಿದೆ ನಿನಗ್ಹೆಚ್ಚಿನ
ಪದವಿಯ ॥
ಭಕ್ತಜನರ ಕೂಡೋ ಭವಭಯ । ಬತ್ತಿಪೋಪದು ನೋಡೋ ।
ಮುಕ್ತಿದಾಯಕ ನಮ್ಮ ಪುರಂದರ ವಿಠಲನ ಭಕ್ತಿಯಿಂದ ನೀಪಾಡುತ
ಕುಣಿಯೋ ॥

(xiv) ಚತುರವಿಧ ಪುರುಷಾರ್ಥ ಪಡೆವರೆ । ಚತುರ ದಶಲೋಕಗಳ
ಮಧ್ಯದೊ ।
ಳಿತರುಪಾಯಗಳಿಲ್ಲ ನೋಡಲು ಸಕಲಶಾಸ್ತ್ರದಲಿ ॥
ಸತತ ವಿಷಯೇಂದ್ರಿಯಗಳಲಿ ಪ್ರವಿ । ತತನೆನಿಸಿರಾಜಿಸುವ ಲಕುಮೀ
ಪತಿಗೆ ಸರ್ವಸಮರ್ಪಣೆಯು ಮಹಪೂಜೆ ಸದುಪಾಯ ॥

(xv) ಏನು ಮಾಡುವ ಕರ್ಮಗಳ ಲಕುಮೀ
ನಿವಾಸ ನಿಗರ್ಪಿಸನು ಸಂ ।
ಧಾನ ಪೂರ್ವಕದಿಂದ ಸಂದೇಹಿಸದೇ ದಿನದಿನದಿ ॥
ಮಾನನಿಧಿ ಕೈಕೊಂಡು ಸುಖ ವಿತ್ತಾನತರ ಸಂತೃಪ ತೃಣಜಲ ।
ಧೇನು ತಾನುಂಡನವರತ ಪಾಲ್ಗರೆವತೆರನಂತೆ ॥

(xvi) ವಾಸುದೇವನ ಗುಣ ಸುಮುದ್ರದೊ ।ಳೀಸಬಲ್ಲವ ಭವಸಮುದ್ರಾ
ಯಾಸವಿಲ್ಲದೆ ದಾಟುವನು ಶೀಘ್ರದಲಿ ಜಗದೊಳಗೆ ।

(xvii) ಪಾಪಕರ್ಮವ ಸಹಿಸುವಡೆ ಲಕ್ಷ್ಮೀಪತಿಗೆ ಸಮರಾದ ದಿವಿಜರೋ ।
ಈ ಪಯೋಜಭವಾಂಡದೊಳಗಾವಲ್ಲಿ ನಾಕಾಣೆ ॥

(xviii). ಶ್ರೀಲಕುಮಿ ವಲ್ಲಭನ ಸಮಕರು ।ನಾಳುಗಳ ನಾಕಾಣೆ ನೆಲ್ಲಿಕು।
ಚೇಲನವಲಿಗೆ ಮೆಚ್ಚಿಕೊಟ್ಟನು ಸಕಲ ಸಂಪದವ ॥
ಕೇಳಿದಾಕ್ಷಣ ವಸ್ತ್ರಗಳ ಪಾಂಚಾಲಿಗಿತ್ತನು ದೈತ್ಯನುದರವ ।
ಸೀಳಿಸಂತೈಸಿದನು ಪ್ರಹ್ಲಾದನ ಕೃಪಾಸಾಂದ್ರಾ ॥

(xix) ಆದದ್ದಾಯಿತು ಇನ್ನಾದರು ಒಳ್ಳೆ । ಹಾದಿಹಿಡಿಯೋ ಪ್ರಾಣೀ ।ಪ।
ಈದುರ್ನಡಕಿಂದ್ಹೋದರಿಹಪರದಿ ।
ಮೊಂದೆಂದಿಗು ಕಾಣೇ, ಪ್ರಾಣೀ ॥ ಅ.ಪ. ॥

(xx) ಭವಾಮಯಹರ ಜಗನ್ನಾಥ ವಿಠ್ಠಲ ಪಾಹಿಮಾಂ ಸತತ ॥

ಈ ಪ್ರಕಾರವಾಗಿ ದಾಸವರ್ಯರ ಮುಖದಿಂದ ನಿಸ್ಸೃತವಾದ ಲಕ್ಷ್ಯೋಪಲಕ್ಷ ವಾಕ್ಯ ಸಮುದಾಯಗಳು, ಭಗವಂತನ ದಯೆ ಪಡೆಯತಕ್ಕ ಮಾರ್ಗಸುಲಭವೆಂದು ಸಾರಿದ್ದಾರೆ. ವಿವಿಧ ಸಾಂಸಾರಿಕ ದುಃಖ ದರ್ಶನಾದಿಗಳಿಂದ ಭವದಲ್ಲಿ ನೊಂದವರಿಗೂ, ಸೋಮಾರಿತನ, ಉದಾಸೀನತೆ, ದುಷ್ಟಸಹವಾಸ, ದುರಭ್ಯಾಸ, ಪರನಿಂದಾದಿಗಳ ನಿಮಿತ್ತ ಮೊದಲು ವ್ಯರ್ಥಕಾಲಹರಣೆ ಮಾಡಿ, ನಂತರ ಪೂರ್ವಾರ್ಜಿತ ಪುಣ್ಯದಿಂದಲೋ ಸತ್ಸಹವಾಸದಿಂದಲೋ, ಹಿರಿಯರ ಉಪದೇಶ ದಿಂದಲೋ, ಕೊನೆಯದಾಗಿ ಈ ಮಾರ್ಗವನ್ನೂ ನೋಡಿಬಿಡುವಾ, ಇದರಿಂದಲಾದರೂ ಶಾಂತಿ, ಸ್ಥೈರ್ಯದಿಗಳು ದೊರೆಯುವೇ ಎಂಬ ಆಧ್ಯಾತ್ಮಿಕ ಕ್ಷೇತ್ರದಲ್ಲಿ ಪ್ರಯೋಗಾರ್ಥವಾಗಿಯೋ, ಹೇಗಾದರೂ ಪರಮಾತ್ಮನ ದಯೆಪಡೆಯಬೇಕೆಂಬವರು ಧನ್ಯರು. ಕೆಟ್ಟಮೇಲೆ ಬುದ್ಧಿಬಂತು ಎಂಬಂತೆ ಇವರಿಗೆ ಕೆಟ್ಟದನ್ನು ಬಿಡುವದರಲ್ಲಿ ವಿಶೇಷ ಮನೋಬಲ ಉಂಟಾಗುತ್ತದೆ. ಈಗ ಪರಮಾತ್ಮನೊಬ್ಬನೇ ಗತಿ. ಅನನ್ಯ ರೀತಿಯಲ್ಲಿ ಅವನ ಚಿಂತನೆ. ಹೀಗೆ ಪಶ್ಚಾತ್ತಾಪ ಪೂರ್ವಕವಾಗಿ, ಕ್ಷಮೆ

ಕೋರಿ, ಪರಮಾತ್ಮನಿಗೆ ಶರಣುಹೋದರೆ ರಕ್ಷಿಸದೇ ಬಿಡನು. ದಾರ್ಢ್ಯಜ್ಞಾನಶಕ್ಯವಿದೆ.

ಯಾವ ಸ್ಥಿತಿಯಲ್ಲಿ ಯಾವ ಕಾಲದಲ್ಲಿ ಪರಮಾತ್ಮನನ್ನು ಮೊರೆ ಹೊಕ್ಕೆವೋ ಅಂದಿನಿಂದಲೇ ಪ್ರಾರಂಭ ಅವನ ವಿಶೇಷಕಾರುಣ್ಯ. ಭಕ್ತನ ಆಸಕ್ತಿ, ಭಕ್ತಿಯ ಫಲವಾಗಿ ಹಲವಾರು ಪಟ್ಟು ಮನಸ್ಸಿಗೆ ನೆಮ್ಮದಿ ಕೊಡುತ್ತಾನೆ. ಭಕ್ತನು ಪರಮಾತ್ಮನ ಕಡೆಗೆ ಒಂದು ಹೆಜ್ಜೆ ಮುಂದಿಟ್ಟರೆ, ಪರಮಾತ್ಮನು ಭಕ್ತನ ಕಡೆಗೆ ಆಗಲೇ ಹತ್ತುಹೆಜ್ಜೆ ಮುಂದೆ ಬಂದಿರುತ್ತಾನೆ. ಹೀಗಿದೆ ಅವನ ಭಕ್ತವಾತ್ಸಲ್ಯ.

ಹೀಗೆ ದಾಸವರ್ಯರಿಂದ ಸೂಸಿ ಬಂದ ಆಧ್ಯಾತ್ಮಿಕ ಆಶಾಕಿರಣಗಳು ನಮ್ಮ ಮನಸ್ಸಿಗೆ ಸುಖ, ಶಾಂತಿ, ಧೈರ್ಯ, ಸ್ಥಿರತೆ, ಉತ್ಸಾಹಾದಿಗಳನ್ನು ತುಂಬಿ ಭವದಲ್ಲಿ ಬಳಲಿ ಬೆಂಡಾದ ಅಸಂಖ್ಯ ಮುಮುಕ್ಷುಗಳನ್ನು ಅಧ್ಯಾತ್ಮಕ್ಷೇತ್ರದಲ್ಲಿ ಪರಮಾತ್ಮನ ಧ್ಯಾನಾಸಕ್ತರಾಗಿ ಶಾಶ್ವತವಾಗಿರಿಸಲೆಂದು ಶ್ರೀಹರಿವಾಯುಗಳಲ್ಲಿ ಪ್ರಾರ್ಥಿಸುತ್ತ ಈ ಲೇಖನಮಾಲೆಯನ್ನು ಆ ಮಹಾಮಹಿಮನಾದ ಭಗವಂತನ ಅಡಿದಾವರೆಗಳಲ್ಲಿ ಭಕ್ತಿಪೂರ್ವಕ ಸಮರ್ಪಿಸುವಾ. ಇತಿ ಶುಭಮಸ್ತು.

ಓಂ ತತ್ಸತ್

ಇತಿ ಶ್ರೀ ಮಧ್ವೇಶಾರ್ಪಣಮಸ್ತು

---